ಸಂಪುಟ 15
ಸಂಚಿಕೆ 16

ಐಕ್ಯರಂಗ

ರೂ. 2.00
25 ಏಪ್ರಿಲ್ 1993

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

"ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳಿಂದ ದೇಶವನ್ನುಳಿಸಿ, ಸಂವಿಧಾನವನ್ನುಳಿಸಿ"

ಐತಿಹಾಸಿಕ ಕೆಂಪುಕೋಟೆಯಿಂದ ಲಕ್ಷಾಂತರ ಜನರ ಒಕ್ಕೊರಲಿನ ಕರೆ

ಏಪ್ರಿಲ್ 14, 1993. ದೇಶದ ರಾಜಧಾನಿಯ ಐತಿಹಾಸಿಕ ಕೆಂಪು ಕೋಟೆ ಕೆಂಪು, ಹಸಿರು ಬಾವುಟಗಳ ಸಾಗರವಾಯಿತು. ಸಾವಿರ ಸಾವಿರ ಸಂಖ್ಯೆಯಲ್ಲಿ ದೇಶದ ಎಲ್ಲೆಡೆಯಿಂದ ಬಂದ ರೈತರು, ಕಾರ್ಮಿಕರು ಕೋಮು ಶಕ್ತಿಗಳ ವಿರುದ್ಧ ಸಮರ ಮುಂದುವರಿಸಿ ಅದನ್ನು ನಿರ್ಣಾಯಕವಾಗಿ ಸೋಲಿಸಿ ಒಂದು ಶಾಂತಿಯುತ, ಐಕ್ಯ, ಮಾನವೀಯ, ಸಮಾನತೆಯ ಅಭಿವೃದ್ಧಿ ಭಾರತ ಕಟ್ಟುವ ಪ್ರತಿಜ್ಞೆ ಮಾಡಿದರು.

ಸಾಮಾನ್ಯವಾಗಿ ಸರಕಾರೀ ಕಾರ್ಯಕ್ರಮಗಳನ್ನೇ ಕಾಣುವ ಸ್ಥಳ ಅಂದು ದೇಶದ ಮೂಲೆ-ಮೂಲೆಗಳಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ಕೋಮು ಸೌಹಾರ್ದದ ಸಂದೇಶ ಸಾರಿದ, ಬಿಜೆಪಿ ಕೂಟದ ಕೋಮುವಾದಿ, ಫ್ಯಾಸಿಸ್ಟ್ ಹಲ್ಲೆಗಳಿಂದ ದೇಶವನ್ನು, ದೇಶದ ಜಾತ್ಯಾತೀತ ಸಂವಿಧಾನವನ್ನು ರಕ್ಷಿಸಬೇಕು ಎಂದು ಪಣ ತೊಟ್ಟು ಹುಮ್ಮಸ್ಸಿನಿಂದ ಬಂದಿದ್ದ ಲಕ್ಷಾಂತರ ಜನರ ಘೋಷಣೆಗಳಿಂದ ತುಂಬಿ ಹೋಯಿತು. ಅಂದು ದೇಶದ ಜಾತ್ಯಾತೀತ ಪ್ರಜಾಪ್ರಭುತ್ವ ಸಂವಿಧಾನವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ, ತಮ್ಮ ಕಾಲದಲ್ಲಿ ಸಂಪ್ರದಾಯ ಶರಣ ಸಂಕುಚಿತವಾದೀ ಶಕ್ತಿಗಳೊಡನೆ ಹೋರಾಟ ನಡೆಸಿದ ಡಾ.ಅಂಬೇಡ್ಕರ್‌ರವರ 103ನೇ ಜನ್ಮದಿನದ ಸಂದರ್ಭ ಕೂಡಾ.

ಎಂಟು ತಿಂಗಳ ಹಿಂದೆ ಇದೇ ಕೆಂಪು ಕೋಟೆಯಿಂದ ದೇಶದ ಜಾತ್ಯಾತೀತ ಚೌಕಟ್ಟನ್ನು, ಅದರ ರಕ್ಷಣೆಯ ಸಂಕೇತವಾಗಿ ಬಿಟ್ಟ ಬಾಬ್ರಿ ಮಸೀದಿಯನ್ನು ರಕ್ಷಿಸುವುದಾಗಿ ದೇಶಕ್ಕೆ ಮಾತು ಕೊಟ್ಟ ಪ್ರಧಾನಮಂತ್ರಿಗಳು ವಚನಭಂಗ ಮಾಡಿ, ಅದರ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದ್ದರೂ, ದೇಶದ ಅತೀ ದೊಡ್ಡ ರಾಜಕೀಯ ಪಕ್ಷ ದೇಶದ ಐಕ್ಯತೆಗೆ ಬಂದಿರುವ ಗಂಭೀರ ಸವಾಲನ್ನು ಎದುರಿಸುವಲ್ಲಿ ಹೇಡಿತನವನ್ನು ಪ್ರದರ್ಶಿಸಿದರೂ ದೇಶದ ಜಾತ್ಯಾತೀತ ಶಕ್ತಿಗಳು ಈ ಸವಾಲನ್ನು ಧೈರ್ಯದಿಂದ ಸ್ವೀಕರಿಸಿವೆ, ದೇಶದಲ್ಲೆಲ್ಲಾ ಜನಸಾಮಾನ್ಯರಿಂದ ಇದಕ್ಕೆ ದೊರೆತ ಅದ್ಭುತ ಸ್ಪಂದನ ಈಗಲೂ ಕೋಮುಸೌಹಾರ್ದದ, ಐಕ್ಯತೆಯ ಆಕಾಂಕ್ಷೆ ಜೀವಂತವಾಗಿದೆ, ಬಲವಾಗಿದೆ ಎಂದು ತೋರಿಸಿಕೊಟ್ಟ ಐತಿಹಾಸಿಕ ರ್‍ಯಾಲಿ ಇದಾಗಿತ್ತು.

ಹನ್ನೊಂದು ಗಂಟೆಗೆ ಆರಂಭವಾದ ರ್‍ಯಾಲಿ ಮೂರು ಗಂಟೆಯವರೆಗೂ ನಡೆಯಿತು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಎಡ-ಪ್ರಜಾಪ್ರಭುತ್ವ ಪಕ್ಷಗಳ ಪ್ರಮುಖ ಮುಖಂಡರುಗಳಾದ ಬಿಹಾರದ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್, ಸಿಪಿಐ ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತಾ, ಮಾಜಿ ಪ್ರಧಾನಿ ಚಂದ್ರಶೇಖರ್, ಐಪಿಎಫ್ ಮುಖಂಡ ನಾಗಭೂಷಣ್ ಪಟ್ನಾಯಕ್, ಜನತಾದಳದ ಮುಖಂಡ ರಾಮ್ ವಿಲಾಸ್ ಪಾಸ್ವಾನ್, ಫಾರ್ವರ್ಡ್ ಬ್ಲಾಕ್‌ನ ಪ್ರಧಾನ ಕಾರ್ಯದರ್ಶಿ ಚಿತ್ತ ಬಸು, ಆರ್‌ಎಸ್‌ಪಿ ಮುಖಂಡ ಸೌರೇನ್ ಭಟ್ಟಾಚಾರ್ಯ, ಕಾಂಗ್ರೆಸ್(ಎಸ್)ನ ಕೆ.ಪಿ.ಉನ್ನಿಕೃಷ್ಣನ್, ಎಸ್‌ಯುಸಿಐನ ಪ್ರಿತೀಶ್ ಚಂದಾ, ತೆಲುಗುದೇಶಂನ ಎಂ. ಪದ್ಮನಾಭನ್, ಜನತಾದಳದ ಮುಫ್ತಿ ಮಹಮ್ಮದ್ ಸಯ್ಯದ್, ಐಪಿಎಫ್‌ನ ಜಯಂತಿ ರೋಗ್ರಿ, ಡಿವೈಎಫ್‌ಐನ ಮಹಮ್ಮದ್ ಸಲೀಂ ಹಾಗೂ ಸಿಪಿಐ(ಎಂ)ನ ಅಹಲ್ಯಾ ರಂಗ್ನೇಕರ್ ಮಾತನಾಡಿದರು.

ರ್‍ಯಾಲಿ ಒಂದು ವಿವರವಾದ ನಿರ್ಣಯವನ್ನು ಅಂಗೀಕರಿಸಿ ಕೋಮು ಶಕ್ತಿಗಳನ್ನು ಸೋಲಿಸಿ ದೇಶವನ್ನು ರಕ್ಷಿಸಲು, ಧರ್ಮವನ್ನು ರಾಜಕೀಯದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲು ಮತೀಯ ಪ್ರಭುತ್ವದ ವೇಷ ತೊಟ್ಟ ಫ್ಯಾಸಿಸ್ಟ್ ವ್ಯವಸ್ಥೆ ತರುವ ಬಿಜೆಪಿಯ ಭರದ ಯತ್ನವನ್ನು ವಿರೋಧಿಸಲು, ಅಲ್ಪಸಂಖ್ಯಾತರನ್ನು ರಕ್ಷಿಸಲು ಹಾಗೂ ಭಾರತದ ವಿಶಿಷ್ಟ ಸೌಹಾರ್ದಯುತ ಮಿಶ್ರ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಲು ನಿರ್ಧರಿಸಿತು.

ಇನ್ನೊಂದು ನಿರ್ಣಯವನ್ನು ಅಂಗೀಕರಿಸಿ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಮುಖಂಡ ಕ್ರಿಸ್ ಹನಿಯವರ ಅಮಾನುಷ ಕೊಲೆಯನ್ನು ರ್‍ಯಾಲಿ ಬಲವಾಗಿ ವಿರೋಧಿಸಿತು. "ಇದು ಎಎನ್‌ಸಿ ಮತ್ತು ಬಿಳಿಯರ ಅಲ್ಪಸಂಖ್ಯಾತ ಆಡಳಿತದ ನಡುವಿನ ಮಾತುಕತೆಗಳನ್ನು ಬುಡಮೇಲು ಮಾಡುವ ಪಿತೂರಿ" ಎಂದಿತು.

ಸುರ್ಜಿತ್ ರ್‍ಯಾಲಿಯ ಮುಖ್ಯ ನಿರ್ಣಯವನ್ನು ಮಂಡಿಸುತ್ತಾ "ದೇಶ ಈಗ ತನ್ನ ಚರಿತ್ರೆಯ ಒಂದು ಅತ್ಯಂತ ಗಂಭೀರ ಸನ್ನಿವೇಶದ ಮೂಲಕ ಹಾದು ಹೋಗುತ್ತಿದೆ, ದೇಶದ ಜಾತ್ಯಾತೀತ ಸ್ವರೂಪವನ್ನು, ಆ ಮೂಲಕ ದೇಶದ ಐಕ್ಯತೆಯನ್ನು ನಾಶ ಮಾಡುವ ದೊಡ್ಡ ಪ್ರಯತ್ನ ಸಾಗಿದೆ, ಆದರೆ ಇಂದಿನ ಈ ರ್‍ಯಾಲಿ ಭಾರತದ ಜನ ಎಂದೂ ದೇಶದ ಐಕ್ಯತೆಗೆ ಹಾನಿ ತಟ್ಟಲು ಬಿಡುವುದಿಲ್ಲ ಎಂಬ ಸಂದೇಶ ಸಾರಿದೆ" ಎಂದರು.

ಲಲ್ಲೂ ಪ್ರಸಾದ್ ಯಾದವ್ ತನ್ನ ಎಂದಿನ ವ್ಯಂಗ್ಯ ಹಾಸ್ಯಪೂರಿತ ಶೈಲಿಯಲ್ಲಿ ಮಾತನಾಡುತ್ತಾ "ಕೆಂಪು ಹಾಗೂ ಹಸಿರು ಬಾವುಟಗಳ ಐಕ್ಯತೆ ಕಾವಿ ದೆದರಿಕೆಯನ್ನು ಅಳಿಸಿಹಾಕುತ್ತದೆ" ಎಂದರು. ಬಿಜೆಪಿವಾಲಾಗಳ ಬಗ್ಗೆ ವ್ಯಂಗ್ಯವಾಡುತ್ತಾ 'ಅವರ ಬಗ್ಗೆ ಹೆದರಿಕೆ ಬೇಡ. ಅವರು ಹೇಡಿಮಂದಿ. ತುರ್ತು ಪರಿಸ್ಥಿತಿ ಕಾಲದಲ್ಲಿ ಜೈಲಿನಿಂದ ಹೊರಬರಲು ಆರ್‌ಎಸ್‌ಎಸ್‌ಮಂದಿ ಸರಕಾರದೊಡನೆ ರಾಜಿ ಮಾಡಿಕೊಂಡರು' ಎಂದು ನೆನಪಿಸಿದರು. ವೋ ಲೋಗ್ ತೋಡ್‌ನಾ ಚಾಹತೇ ಹೈಂ, ಹಮ್ ಜೋಡ್ನಾ ಚಾಹತೇ ಹೈಂ(ಅವರು ಮುರಿಯಬೇಕೆಂದಿದ್ದಾರೆ, ನಾವು ಜೋಡಿಸಬೇಕೆಂದಿದ್ದೇವೆ) ಎಂದರು ಡಿವೈಎಫ್‌ಐನ ಮಹಮ್ಮದ್ ಸಲೀಂ ಭಾರೀ ಕರತಾಡನಗಳ ನಡುವೆ. ಹಿರಿಯ ಸಿಪಿಐ(ಎಂ) ಮುಂದಾಳು ಅಹಲ್ಯಾ ರಂಗ್ನೇಕರ್ ಮುಂಬೈಯಲ್ಲಿ ನಡೆದ ಹಿಂಸಾಚಾರದ ಉದಾಹರಣೆಗಳನ್ನು ಕೊಡುತ್ತಾ ಧರ್ಮದ ಹೆಸರಿನಲ್ಲಿ ಮಾತನಾಡುವವರ ನಿಜವಾದ ಫ್ಯಾಸಿಸ್ಟ್ ರೂಪವನ್ನು ಮುಂಬೈ ಜನ ಕಂಡರು ಎಂದರು.

ಸಿಪಿಐ ಮುಖಂಡ ಎ.ಬಿ. ಬರ್ದಾನ್ ರಾಷ್ಟ್ರೀಯ ಏಕತಾ ಆಂದೋಲನದಡಿ ಬಂದಿರುವ 13 ರಾಜಕೀಯ ಪಕ್ಷಗಳ, ನಲ್ವತ್ತಕ್ಕೂ ಹೆಚ್ಚು ಸಾಮೂಹಿಕ ಸಂಘಟನೆಗಳ ಸಂಯುಕ್ತ ರಂಗದ ಮಹತ್ವವನ್ನು ವಿವರಿಸುತ್ತಾ "ಕೋಮುವಾದದ ಬೆನ್ನು ಮುರಿಯುವಲ್ಲಿ ನಾವೆಲ್ಲಾ ಒಂದು - ಈ ಐಕ್ಯತೆ ಮುಂದುವರಿಯುತ್ತದೆ. ಏಪ್ರಿಲ್ 14ರ ರ್‍ಯಾಲಿ ಈ ಆಂದೋಲನದ ಅಂತಿಮ ಕಾರ್ಯಕ್ರಮವಲ್ಲ, ಮೊದಲ ಘಟ್ಟದ ಅಂತ್ಯವಷ್ಟೇ" ಎಂದರು. ಮುಂದಿನ ಘಟ್ಟದ ಕಾರ್ಯಕ್ರಮಗಳನ್ನು ಸದ್ಯದಲ್ಲೇ ರೂಪಿಸಲಾಗುವುದು ಎಂದರು.

"ಐಕ್ಯತಾ ಪ್ರತಿಜ್ಞೆ" ಅರ್ಪಣೆ

ಈ ರ್‍ಯಾಲಿಯನ್ನು ಸಂಘಟಿಸಿದ 'ರಾಷ್ಟ್ರೀಯ ಏಕತಾ ಆಂದೋಲನ'ದ ಮುಖಂಡರು ಹಿಂದಿನ ದಿನ ಏಪ್ರಿಲ್ 13ರಂದು ದೇಶದ ಮೂಲೆ-ಮೂಲೆಗಳಿಂದ ಸಂಗ್ರಹಿಸಿದ ಐಕ್ಯತೆ, ಕೋಮು ಸೌಹಾರ್ದದ ಪ್ರತಿಜ್ಞೆಯನ್ನು ರಾಷ್ಟ್ರಪತಿ ಶಂಕರದಯಾಳ್ ಶರ್ಮಾರವರಿಗೆ ಅರ್ಪಿಸಿದರು. ಏಪ್ರಿಲ್ 13, ಭಾರತದ ಇತಿಹಾಸದಲ್ಲಿ ಇನ್ನೊಂದು ಐತಿಹಾಸಿಕ ದಿನ. ಪಂಜಾಬಿನ ಜಾಲಿಯಾನ್ ವಾಲಾಬಾಗ್‌ನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಬುಲೆಟ್‌ಗಳಿಗೆ ಬಲಿಯಾದ ಹಿಂದೂ, ಮುಸಲ್ಮಾನ, ಸಿಖ್, ಕ್ರಿಶ್ಚಿಯನ್ ದೇಶಪ್ರೇಮಿಗಳ ರಕ್ತ ಒಟ್ಟಾಗಿ ಹರಿದ ದಿನ. ದೇಶಾದ್ಯಂತ ಜನರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಒಂದಾಗಿ ಬೆಸೆಯುವ ಸ್ಫೂರ್ತಿ ತುಂಬಿದ ದಿನ. ದಿಲ್ಲಿಯ ಗದ್ದುಗೆ ಕಿತ್ತುಕೊಳ್ಳಲು ಕೋಮುವಾದಿ ರಕ್ಕಸರು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ಬೆಸೆದ ಆ ಅಮೋಘ ಐಕ್ಯತೆಯನ್ನು ಮುರಿಯಲು ಛಲ ತೊಟ್ಟಿರುವ ಸಂದರ್ಭದಲ್ಲಿ ಅವರ ಈ ದುಷ್ಟ ಛಲ ಸಾಧಿಸಲು ಬಿಡುವುದಿಲ್ಲ, ಭಾರತದ ಸಂವಿಧಾನದ ಜಾತ್ಯಾತೀತ, ಪ್ರಜಾಪ್ರಭುತ್ವ ಅಡಿಪಾಯವನ್ನು ಕಾಪಾಡಿಕೊಳ್ಳುತ್ತೇವೆ, ಭಾರತದ ಐಕ್ಯತೆ, ಕೋಮು ಸೌಹಾರ್ದವನ್ನು ಕಾಪಾಡಿಕೊಳ್ಳುತ್ತೇವೆ ಎಂಬ ಪ್ರತಿಜ್ಞೆ ಮಾಡಿದ 3 ಕೋಟಿ ಸಹಿಗಳನ್ನು ರಾಷ್ಟ್ರೀಯ ಏಕತಾ ಆಂದೋಲನದ 50 ಮುಖಂಡರಿದ್ದ ನಿಯೋಗವೊಂದು ರಾಷ್ಟ್ರಪತಿಗಳಿಗೆ ಸಮರ್ಪಿಸಿತು. ಮಾಜಿ ಪ್ರಧಾನಿ ವಿ.ಪಿ.ಸಿಂಗ್, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್, ಸಿಪಿಐ ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತಾ, ಎ.ಬಿ. ಬರ್ದನ್, ಜನತಾದಳದ ರಾಮ್‌ವಿಲಾಸ್ ಪಾಸ್ವಾನ್, ಮಹಮ್ಮದ್ ಸಯೀದ್ ಹಾಗೂ ಐ.ಕೆ.ಗುಜ್ರಾಲ್, ಫಾರ್ವರ್ಡ್ ಬ್ಲಾಕ್‌ನ ಚಿತ್ತ ಬಸು, ಆರ್‌ಎಸ್‌ಪಿಯ ತ್ರಿದಿಬ್ ಚೌಧುರಿ ಹಾಗೂ ಸಮಾಜ ವಿಜ್ಞಾನಿ ರಜನಿ ಕೊಠಾರಿ ಮತ್ತಿತರ ಐವತ್ತು ಮುಖಂಡರು ಪ್ರತಿಜ್ಞೆಗೆ ಸಹಿ ಮಾಡಿದ್ದ ರೇಶ್ಮೆಯ ಸುರುಳಿಯನ್ನು ಸಾಂಕೇತಿಕವಾಗಿ ರಾಷ್ಟ್ರಪತಿಗಳಿಗೆ ಅರ್ಪಿಸಿದರು.

ಈಗಾಗಲೇ ಮೂರು ಕೋಟಿ ಸಹಿಗಳು ರಾಷ್ಟ್ರೀಯ ಏಕತಾ ಆಂದೋಲನದ ಕೇಂದ್ರ ಕಚೇರಿಗೆ ಬಂದಿದ್ದು ಹರ್‍ಯಾಣಾ, ಪಂಜಾಬ್, ಅಸ್ಸಾಂ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಈಶಾನ್ಯ ರಾಜ್ಯಗಳಿಂದ ಇನ್ನು ಬರಬೇಕಿದೆ. ಈಗಾಗಲೇ ಬಂದಿರುವ ಸಹಿಗಳನ್ನು ಏಕತಾ ಆಂದೋಲನದ ಕಚೇರಿಯಿಂದ 50 ಮುಖಂಡರಿದ್ದ ನಿಯೋಗದೊಂದಿಗೆ ಟೆಂಪೋಗಳಲ್ಲಿ ರಾಷ್ಟ್ರಪತಿ ಭವನಕ್ಕೆ ಮೆರವಣಿಗೆಯಲ್ಲಿ ಒಯ್ಯಲಾಯಿತು. ಮುಂದೆ ಬರಲಿರುವ ಸಹಿಗಳನ್ನು ಇನ್ನೊಂದು ಕಂತಿನಲ್ಲಿ ಅರ್ಪಿಸಲಾಗುವುದು. ಒಟ್ಟು ಸಹಿ ಸಂಗ್ರಹ 5 ಕೋಟಿಯ ಗುರಿಯನ್ನು ಮೀರುವ ನಿರೀಕ್ಷೆಯಿದೆ.

ವಾರದ ನುಡಿ

> ಕೆಂಪು ಮತ್ತು ಹಸಿರುಗಳ ಐಕ್ಯತೆ ಕಾವಿ ದೆದರಿಕೆಯನ್ನು ತೊಡೆದು ಹಾಕುತ್ತದೆ.
>
> - ಲಲ್ಲೂ ಪ್ರಸಾದ್ ಯಾದವ್

"ಸೆಪ್ಟೆಂಬರ್ 9, 1993 ಭಾರತ್ ಬಂದ್"

ದುಡಿಯುವ ಜನಗಳ ಬೃಹತ್ ಸಮಾವೇಶದ ನಿರ್ಧಾರ

ದೇಶದ ದುಡಿಯುವ ಜನಗಳ ತೊಳಲಾಟಕ್ಕೆ ಕಾರಣವಾದ ನರಸಿಂಹರಾವ್ ಸರಕಾರದ ಐಎಂಎಫ್ ಹೇರಿಕೆಯ ಆರ್ಥಿಕ ನೀತಿಗಳ ವಿರುದ್ಧ ತಮ್ಮ ಪ್ರಬಲ ಪ್ರತಿರೋಧವನ್ನು ವ್ಯಕ್ತಪಡಿಸಲು ನವದೆಹಲಿಯಲ್ಲಿ ಏಪ್ರಿಲ್ 15ರಂದು ನಡೆದ ದುಡಿಯುವ ಜನರ ಪ್ರತಿನಿಧಿಗಳ ಬೃಹತ್ ಸಮಾವೇಶ ಸೆಪ್ಟೆಂಬರ್ 9, 1993ರಂದು ಭಾರತ ಬಂದ್ ಹಾಗೂ ಕೈಗಾರಿಕಾ ಕಾರ್ಯಾಚರಣೆ ನಡೆಸಲು ನಿರ್ಧರಿಸಿದೆ. ಇದಕ್ಕೆ ಮೊದಲು ಸರಕಾರ ತನ್ನ ವಿನಾಶಕಾರೀ ಆರ್ಥಿಕ ನೀತಿಗಳನ್ನು ಕೈ ಬಿಡಬೇಕೆಂದು ಒತ್ತಾಯಿಸಿ ಆಗಸ್ಟ್ 19ರಂದು ದೇಶಾದ್ಯಂತ "ಜೈಲ್ ಭರೋ" ಕಾರ್ಯಕ್ರಮ ನಡೆಯಲಿದೆ ಎಂದು ತಿಳಿದು ಬಂದಿದೆ.

ನವಂಬರ್ 25, 1992ರ ಬೃಹತ್ ರ್‍ಯಾಲಿ, ಅದಕ್ಕೆ ಮೊದಲು ನವಂಬರ್ 29, 1991 ಹಾಗೂ ಜೂನ್ 16, 1992ರಂದು ದೇಶವ್ಯಾಪಿ ಮುಷ್ಕರ ನಡೆಸಿ ಕಾರ್ಮಿಕರ ಆಕ್ರೋಶಕ್ಕೆ ದನಿ ನೀಡಿದ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಸರಕಾರದ ನೀತಿಗಳು ಎಲ್ಲಾ ದುಡಿಯುವ ಜನವಿಭಾಗಗಳನ್ನು ಇನ್ನೂ ತೀವ್ರವಾಗಿ ತಟ್ಟುತ್ತಿರುವುದರಿಂದ ಈ ದೇಶದವಿರೋಧಿ ನೀತಿಗಳ ವಿರುದ್ಧ ಪ್ರತಿರೋಧವನ್ನು ವ್ಯಾಪಕಗೊಳಿಸುವ ನಿಟ್ಟಿನಲ್ಲಿ ಈ ಸಮಾವೇಶವನ್ನು ಕರೆದಿತ್ತು. ಕಾರ್ಮಿಕ ಸಂಘಟನೆಗಳಲ್ಲದೆ ಸರಕಾರದ ನೀತಿಗಳಿಂದ ಇನ್ನೂ ಹೆಚ್ಚು ಸಂಕಟಪಡುತ್ತಿರುವ ಬಡ ಕೃಷಿ ಕೂಲಿಕಾರರು, ರೈತ ಸಂಘಟನೆಗಳೂ ಈ ಸಮಾವೇಶದಲ್ಲಿ ಭಾಗವಹಿಸಿದ್ದವು(ಸಮಾವೇಶದ ಪೂರ್ಣ ವರದಿ ಮುಂದಿನ ವಾರ.)



ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ: ಒಂದು ನೋಟ

- ಎಸ್.ಕೆ.ಉಪಾಧ್ಯಾಯ

1-4-87ರಲ್ಲಿ ಜನತಾ ಪಕ್ಷದ ರಾಮಕೃಷ್ಣ ಹೆಗಡೆ ಸರಕಾರ ಅಧಿಕಾರದಲ್ಲಿದ್ದಾಗ, ಅಬ್ದುಲ್ ನಜೀರ್ ಸಾಬ್ ಅವರ ಪ್ರಯತ್ನದಿಂದ ಅಸ್ತಿತ್ವಕ್ಕೆ ಬಂದಿದ್ದ ಕರ್ನಾಟಕ ಜಿಲ್ಲಾ ಪರಿಷತ್ ತಾಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಮತ್ತು ನ್ಯಾಯಪಂಚಾಯತ್ ಮಸೂದೆಯ ಬದಲಾಗಿ ಕಾಂಗ್ರೆ ಪಕ್ಷದ ವೀರಪ್ಪ ಮೊಯಿಲಿ ಸರಕಾರದ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮಂತ್ರಿ ಎಂ.ವೈ. ಘೋರ್ಪಡೆಯವರು ಮಂಡಿಸಿದ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 1993ರ ವಿಧಾನಸಭೆ, ವಿಧಾನಪರಿಷತ್‌ಗಳಲ್ಲಿ ಪಾಸಾಯಿತು. 1983ರಲ್ಲಿ ಜನತಾ ಪಕ್ಷದ ಸರಕಾರ ಕಾಂಗ್ರೆ ಶಾಸಕರೂ ಸೇರಿದ ಸೆಲೆಕ್ಟ್ ಕಮಿಟಿಯಲ್ಲಿ ಒಪ್ಪಿಕೊಂಡ ಜಿಲ್ಲಾ ಪರಿಷತ್ ಮಸೂದೆ ವಿಧಾನಸಭೆ-ವಿಧಾನ ಪರಿಷತ್‌ಗಳಲ್ಲಿ ಸರ್ವಾನುಮತದಿಂದ ಪಾಸಾಗಿದ್ದರೂ ಕೂಡಾ ಅಂದಿನ ರಾಷ್ಟ್ರಾಧ್ಯಕ್ಷರು ಕಾಂಗ್ರೆ ರಾಜಕೀಯದ ಒತ್ತಡಕ್ಕೆ ಮಣಿದು ಅದಕ್ಕೆ ಸಹಿ ಹಾಕಲು ತಡಮಾಡಿದಾಗ ಎಡಪಕ್ಷಗಳು, ಪ್ರಾಂತ ರೈತ ಸಂಘಗಳೆಲ್ಲಾ ಚಳುವಳಿ ಮೂಲಕ ಒತ್ತಾಯ ತಂದ ಪರಿಣಾಮವಾಗಿ ನಾಲ್ಕು ವರ್ಷಗಳ ನಂತರ ವಿಧೇಯಕಕ್ಕೆ ಸಹಿ ಮಾಡಿದ್ದರು. ಈಗಿನ ವಿಧೇಯಕಕ್ಕೆ ದಿಲ್ಲಿಯಲ್ಲಿ ಎಂತಹ ಸ್ವಾಗತ ಕಾದಿದೆಂಬುದನ್ನು ಕಾದು ನೋಡಬೇಕು. ಯಾಕೆಂದರೆ ಇದೇ ಜೂನ್ ತಿಂಗಳೊಳಗಾಗಿ ಚುನಾವಣೆ ನಡೆಸಬೇಕೆಂದು ಸುಪ್ರೀಂ ಕೋರ್ಟ್ ರಾಜ್ಯ ಸರಕಾರಕ್ಕೆ ಹೋದ ವರ್ಷವೇ ಆಜ್ಞೆ ನೀಡಿತ್ತು. ಕೋರ್ಟುಗಳ ಆದೇಶಗಳನ್ನು ಯಾವ ಬೆಲೆಯನ್ನು ಕೊಡದೆ ನಿರಾಕರಿಸುವ ಪರಂಪರೆಯನ್ನು ಹೊಂದಿರುವ ಕಾಂಗ್ರೆ ಸರಕಾರ ಹಳೇ ಮಸೂದೆಗೆ ತಿದ್ದುಪಡಿ ತರುವ ನೆಪದಲ್ಲಿ ಚುನಾವಣೆಯನ್ನು ಮುಂದೂಡಿದೆ. ಈಗ ಹೊಸ ವಿಧೇಯಕ ಎರಡೂ ಸದನಗಳಲ್ಲಿ ಬಹಳಷ್ಟು ಚರ್ಚೆಯ ನಂತರ ಪಾಸಾಗಿರುವುದರಿಂದ ರಾಷ್ಟ್ರಾಧ್ಯಕ್ಷರ ಸಹಿ ಸಕಾಲದಲ್ಲಿ ಪಡೆದ ಸುಪ್ರೀಂ ಕೋರ್ಟ್ ನಿರ್ಣಯದಂತೆ ಜೂನ್ ತಿಂಗಳೊಳಗಾಗಿ ಚುನಾವಣೆ ನಡೆಯುತ್ತದೆಂಬ ಕನಸು ಕಾಣುವುದು ಸರಿಯಾಗಬಹುದೇ ಎಂಬುದನ್ನು ಕಾದು ನೋಡಬೇಕಾಗಿದೆ.

ರಾಜೀವ್‌ಗಾಂಧಿ ಕೈವಾಡ

ಪಶ್ಚಿಮ ಬಂಗಾಳ, ಗುಜರಾತ್, ಮಹಾರಾಷ್ಟ್ರಗಳ ಪಂಚಾಯತ್ ವ್ಯವಸ್ಥೆಯ ಅನುಭವಗಳನ್ನು ಅಭ್ಯಾಸ ಮಾಡಿದ ಹೆಗಡೆ ಸರಕಾರದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮಂತ್ರಿಗಳಾಗಿದ್ದ ಅಬ್ದುಲ್ ನಜೀರ್ ಸಾಬ್ ಅವರು ಅಧಿಕಾರ ವಿಕೇಂದ್ರೀಕರಣವಾಗಿ ಗ್ರಾಮ ಮಟ್ಟದಲ್ಲಿಯೇ ಜನರಿಗೆ ನ್ಯಾಯ ದೊರಕಬೇಕು, ಅವರ ಕುಂದು ಕೊರತೆಗಳಿಗೆ ಪರಿಹಾರ ಸಿಗಬೇಕು, ಹಳ್ಳಿ ದೋರೇಗೌಡ ರಸ್ತೆ, ನೀರು, ದೀಪ, ಸ್ವಚ್ಛತೆ, ಶಿಕ್ಷಣ ಮೊದಲಾದ ಸವಲತ್ತುಗಳಿಗಾಗಿ ದೂರದ ಬೆಂಗಳೂರಿಗೆ ಅಲೆಯುವ ಅವಶ್ಯಕತೆ ಇಲ್ಲದಂತೆ ಮಾಡಬೇಕೆಂಬ ಮಹೋದ್ದೇಶದಿಂದ ಪಂಚಾಯತ್ ರಾಜ್ ವ್ಯವಸ್ಥೆಯ ಕಾನೂನು ತಂದಿದ್ದರು. ಆದರದು ಪ್ರಧಾನಮಂತ್ರಿಯಾಗಿದ್ದ ರಾಜೀವ್‌ಗಾಂಧಿಯವರಿಗೆ ರುಚಿಸಲಿಲ್ಲ. ಪಶ್ಚಿಮ ಬಂಗಾಳದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಜ್ಯೋತಿಬಸು ಸರಕಾರ ತನ್ನ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯತಿ ವ್ಯವಸ್ಥೆಯ ಮೂಲಕ, ಗ್ರಾಮಾಭಿವೃದ್ಧಿಯ ಇತರ ಜವಾಬ್ದಾರಿಗಳ ಜೊತೆಯಲ್ಲಿ ಭೂ ಸಮಸ್ಯೆಯ ಜವಾಬ್ದಾರಿಯನ್ನು ಮಂಡಲ ಪಂಚಾಯಿತಿಗೊಪ್ಪಿಸಿ, ಗ್ರಾಮಾಂತರ ಪ್ರದೇಶದಲ್ಲಿ ಅಧಿಕಾರ ವಿಕೇಂದ್ರೀಕರಣದಲ್ಲಿ ಕ್ರಾಂತಿಯನ್ನೇ ಸಾಧಿಸಿರುವುದು ಅದರ ಮೂಲಕ ಸಿಪಿಐ(ಎಂ) ಪಕ್ಷದ ಪ್ರಭಾವ ಬೇರೂರಿಸಿಕೊಂಡಿರುವುದು, ಹಾಗೆಯೇ ತ್ರಿಪುರ, ಕೇರಳ ಗಳಲ್ಲಿಯೂ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿ ಮೂಲಕ ಅಧಿಕಾರ ವಿಕೇಂದ್ರೀಕರಣದಿಂದಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಪ್ರಭಾವಶಾಲಿಯಾಗಿರುವುದನ್ನು ಕಂಡ ರಾಜೀವ್‌ಗಾಂಧಿಯವರು ಎಡಪಕ್ಷಗಳ ಪ್ರಭಾವ ಕುಂಠಿತಗೊಳಿಸಿ, ಹಳ್ಳಿ ಜನರಲ್ಲಿ ಕಾಂಗ್ರೆ ಪ್ರಭಾವ ಬೆಳೆಸುವ ಉದ್ದೇಶದಿಂದ 1988ರಲ್ಲಿ ಪಂಚಾಯತ್ ರಾಜ್ ಮತ್ತು ನಗರ ಮಸೂದೆ ಮೂಲಕ ಸಂವಿಧಾನಕ್ಕೆ 172ನೇ ತಿದ್ದುಪಡಿ ತರಲು ಪ್ರಯತ್ನಿಸಿದರು. ಕೇಂದ್ರ ಸರಕಾರದಿಂದ ಪ್ರತಿ ಮಂಡಲಕ್ಕೆ ಕನಿಷ್ಠ ಒಂದು ಕೋಟಿ ರೂಪಾಯಿ ಸಹಾಯಧನವನ್ನು ನೇರವಾಗಿ ಸಂದಾಯ ಮಾಡಿ ಅವುಗಳಲ್ಲಿ ತನ್ನ ಕೈಗೊಂಬೆಗಳಾಗಿರುವಂತೆ ಮಾಡುವ ಹಾಗೆಯೇ ನಗರ ಪಾಲಿಕೆಗಳಿಗೂ ಕೇಂದ್ರದಿಂದಲೇ ಹಣ ಸಂದಾಯ ಮಾಡಿ ಅಧಿಕಾರ ವಿಕೇಂದ್ರೀಕರಣದ ಸೋಗಿನಲ್ಲಿ ಪಂಚಾಯಿತಿ, ನಗರ ಸಭೆಗಳ ಓಡಿತವನ್ನು ಕೇಂದ್ರದಲ್ಲೇ ಉಳಿಸಿಕೊಳ್ಳುವ ಹೊಂಚು ರಾಜೀವ್‌ಗಾಂಧಿಯವರದಾಗಿತ್ತು. ಮಂಡಲ ಪಂಚಾಯಿತಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರನ್ನು ನೇರ ಚುನಾವಣೆ ಮೂಲಕ ಆರಿಸುವ ಹಂಚಿಕೆಯಿತ್ತು. ಸಿಪಿಐ(ಎಂ) ಮತ್ತು ಇತರ ವಿರೋಧ ಪಕ್ಷಗಳು ರಾಜ್ಯ ಸಭೆಯಲ್ಲಿ ಈ ಮಸೂದೆಯನ್ನು ಸೋಲಿಸಿದ್ದರು. ಕುಸಿಯುತ್ತಿರುವ ಜನಬೆಂಬಲವನ್ನು ಈ ಮಸೂದೆ ಮೂಲಕ ಮತ್ತೆ ಪುನಗಳಿಸಿ ಲೋಕಸಭೆ ಚುನಾವಣೆಯಲ್ಲಿ ಗೆಲ್ಲಬೇಕೆಂಬ ಉದ್ದೇಶ ರಾಜೀವ್‌ಗಾಂಧಿಯವರದಾಗಿತ್ತು. ಅದು ಸಾಧಿಸಲಿಲ್ಲ. ಚುನಾವಣೆ ನಡೆಯುತ್ತಿರುವಾಗಲೇ ಅವರ ಕೊಲೆಯಾಯಿತು. 1991ರಲ್ಲಿ ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬಂದ ನಂತರ ಸಂವಿಧಾನಕ್ಕೆ 73ನೇ ತಿದ್ದುಪಡಿ ಮೂಲಕ ಹೊಸ ಪಂಚಾಯತ್ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ ಸಿಪಿಐ(ಎಂ) ಮತ್ತು ಇತರ ವಿರೋಧ ಪಕ್ಷಗಳ ಒತ್ತಡಕ್ಕೆ ಮಣಿದು ಕೇಂದ್ರದಿಂದ ನೇರ ಧನಸಹಾಯ ಸಲ್ಲಿಸುವ, ಪಂಚಾಯಿತಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರ ನೇರ ಚುನಾವಣೆಯ ಅಂಶಗಳನ್ನು ಕೈ ಬಿಡಬೇಕಾಯಿತು. ಹಾಗೆಯೇ ಇತರ ಕೆಲವು ತಿದ್ದುಪಡಿಗಳೊಂದಿಗೆ 73ನೇ ತಿದ್ದುಪಡಿ ಅಂಗೀಕಾರವಾಯಿತು. ಆ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 1993ರ ವಿಧಾನಸಭೆ, ವಿಧಾನ ಪರಿಷತ್ತುಗಳಲ್ಲಿ ಅಂಗೀಕಾರ ಪಡೆದಿದೆ.

ಬಸವಲಿಂಗಪ್ಪನವರು ಪಂಚಾಯತ್ ರಾಜ್ ಮಂತ್ರಿಯಾಗಿದ್ದಾಗ, ಈ ವ್ಯವಸ್ಥೆಯ ಮುಖ್ಯ ಧ್ಯೇಯವನ್ನೇ ಮೊಟಕುಗೊಳಿಸುವ ತಿದ್ದುಪಡಿಗಳನ್ನು ತರುವ ಅಭಿಲಾಷೆ ಹೊಂದಿದ್ದರು. ಈ ಖಾತೆಯನ್ನು ಅವರಿಂದ ಬದಲಿಸಲಾಯಿತು.

ಹೊಸ ಮತ್ತು ಹಳೇ ಮಸೂದೆಗಳಲ್ಲಿಯ ಕೆಲವು ಮುಖ್ಯಾಂಶಗಳು

ಹಳೆಯ ಮತ್ತು ಹೊಸ ಮಸೂದೆಯಲ್ಲಿಯ ಕೆಲವು ಮುಖ್ಯಾಂಶಗಳು ಹೀಗಿವೆ.

ಎರಡು ಹಂತದ ಚುನಾಯಿತ ವ್ಯವಸ್ಥೆ ಹಳೇ ಮಸೂದೆಯಲ್ಲಿತ್ತು. ಹಳೇ ಮಸೂದೆಯಲ್ಲಿ ತಾಲೂಕು ಪಂಚಾಯತ್ ಸಮಿತಿ ಸದಸ್ಯರನ್ನು ನಾಮಕರಣ ಮಾಡಲಾಗಿತ್ತು. ಅದರಲ್ಲಿ ಮಂಡಲಕ್ಕಷ್ಟೇ ಪಂಚಾಯತಿ ಎಂಬ ಹೆಸರಿತ್ತು. ಜಿಲ್ಲೆಯ ಮಟ್ಟದಲ್ಲಿ ಜಿಲ್ಲಾ ಪರಿಷತ್ ಎಂದು ಕರೆಯಲಾಗಿತ್ತು. ಈಗ ಮೂರು ಹಂತದ ಚುನಾಯಿತ ಸಮಿತಿಗಳಿದ್ದು ಎಲ್ಲವನ್ನು ಪಂಚಾಯಿತಿಗಳೆಂದೇ ನಾಮಕರಣ ಮಾಡಲಾಗಿದೆ.(ಮಂಡಲ, ತಾಲೂಕು, ಜಿಲ್ಲೆ)

ಹಳೇ ಮಸೂದೆಯಲ್ಲಿ ಒಟ್ಟು ಸ್ಥಾನಗಳಲ್ಲಿ ಶೇ. 25 ರಷ್ಟು ಮಹಿಳೆಯರಿಗೆ ಅದರಲ್ಲಿ ಒಂದು ಹಿಂದುಳಿದ ಮತ್ತೊಂದು ಅನುಸೂಚಿತ ಪಂಗಡದ ಮಹಿಳೆಯರಿಗೆ ಮೀಸಲು ಶೇ. 18ರಷ್ಟು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಇರತಕ್ಕದ್ದೆಂದಿತ್ತು. ಹಿಂದುಳಿದ ವರ್ಗಗಳಲ್ಲಿ ಯಾವ ಗುಂಪಿನವರು ಆರಿಸಿ ಬಾರದಿದ್ದ ಜಿಲ್ಲಾ ಪರಿಷತ್ತು ಆ ಗುಂಪಿನ ಇಬ್ಬರನ್ನು ನಾಮಕರಣ ಮಾಡಬಹುದಿತ್ತು.

ಹೊಸ ಮಸೂದೆಯಲ್ಲಿ ನಾಮಕರಣ ಮಾಡುವುದನ್ನು ಬಿಟ್ಟುಕೊಡಲಾಗಿದೆ. ಅನುಸೂಚಿತ ಜಾತಿಗಳಿಗೆ ಗ್ರಾಮ ಪಂಚಾಯತಿಯ ಸ್ಥಾನಗಳು ಒಟ್ಟು ಸಂಖ್ಯೆಯಲ್ಲಿ ಶೇ. 15ಕ್ಕಿಂತ ಕಡಿಮೆ ಇಲ್ಲದಷ್ಟು ಮತ್ತು ಅನುಸೂಚಿತ ಪಂಗಡಗಳಿಗೆ ಶೇ. 3 ರಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನ ಮೀಸಲಿಡಬೇಕು. ಹಾಗೆಯೇ ಗ್ರಾಮ ಪಂಚಾಯತಿ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಮೂರನೇ ಒಂದು ಸ್ಥಾನಗಳನ್ನು ಹಿಂದುಳಿದ ವರ್ಗದವರಿಗೂ ಮೂರರಲ್ಲಿ ಒಂದು ಭಾಗವನ್ನು ಮಹಿಳೆಯರಿಗೂ ಮೀಸಲಿಡತಕ್ಕದ್ದು. ಮೂರು ಹಂತದ ಚುನಾವಣೆಗಳಲ್ಲಿಯೂ ಈ ಪ್ರಮಾಣ ಕಾದುಕೊಳ್ಳಬೇಕು.

ಹಳೇ ಮಸೂದೆ ಪ್ರಕಾರ ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್ತುಗಳಿಗೆ ಬಹುಮತವಿದ್ದ ಯಾರಾದರೂ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆರಿಸಿಬರಬಹುದಾಗಿತ್ತು.

ಆದರೆ ಹೊಸ ಮಸೂದೆ ಪ್ರಕಾರ ಹಾಗಲ್ಲ. ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳನ್ನು ಆ ಹುದ್ದೆಗಳ ಒಟ್ಟು ಸಂಖ್ಯೆ ಶೇ. 15ಕ್ಕಿಂತ ಕಡಿಮೆ ಇಲ್ಲದಷ್ಟು ತುಂಬಬೇಕು. ಹಿಂದುಳಿದ ವರ್ಗದವರಿಗೆ ಒಟ್ಟು ಸಂಖ್ಯೆ ಮೂರನೇ ಒಂದು ಭಾಗದಷ್ಟು ಹಾಗೆಯೇ ಇವೆಲ್ಲದರಲ್ಲಿ ಮತ್ತು ಮೀಸಲಿಟ್ಟಿರದ ಹುದ್ದೆಗಳಲ್ಲಿ ಮೂರನೇ ಒಂದು ಭಾಗದಷ್ಟು ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು. ಮೀಸಲಿಟ್ಟ ಹುದ್ದೆಗಳನ್ನು ಸರದಿ ಪ್ರಕಾರ ವಿವಿಧ ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡತಕ್ಕದ್ದು.

ಈ ಮೀಸಲಾತಿಯ ಪೂರ್ಣ ಅರ್ಥ ಮಾಡಿಕೊಳ್ಳುವುದು ಸ್ವಲ್ಪ ಕಷ್ಟಕರವಾಗಬಹುದು. ಅದನ್ನು ಯಾವ ರೀತಿ ಜಾರಿಯಲ್ಲಿ ತರಲಾಗುವುದೆಂಬುದನ್ನು ನೋಡಿ ಅರ್ಥೈಸಿಕೊಳ್ಳಬೇಕಾಗಿದೆ. ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರಿಗೆ, ಹಿಂದುಳಿದವರಿಗೆ, ಅನುಸೂಚಿತ ಜಾತಿ ಮತ್ತು ಪಂಗಡದವರಿಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಸಿಗುವುದು ಬಹಳ ದುರ್ಲಭ. ಚುನಾವಣೆಗಳಲ್ಲಿ ಹಣದ ಪ್ರಭಾವವೇ ಹೆಚ್ಚು. ಆ ಕಾರಣದಿಂದ ಈ ತರಹದ ಮೀಸಲಾತಿ ಸ್ವಲ್ಪ ಸಹಾಯವಾಗಬಹುದೇನೋ.

ಅಧ್ಯಕ್ಷ, ಉಪಾಧ್ಯಕ್ಷರನ್ನು ಹಾಗೆಯೇ ಸದಸ್ಯರನ್ನು ಕರ್ತವ್ಯದಲ್ಲಿ ನಿರಂತರ ಅಲಕ್ಷ ತೋರುತ್ತಿರುವ ನೆಪದಿಂದ ಆ ಹುದ್ದೆ ಮಾತ್ರವಲ್ಲ ಸದಸ್ಯತ್ವದಿಂದಲೂ ತೆಗೆದು ಹಾಕುವ ಅಧಿಕಾರವನ್ನು ಕಮಿಷನರಿಗೆ ಕೊಟ್ಟಿರುವುದು ಪಂಚಾಯತಿ ವ್ಯವಸ್ಥೆಯನ್ನೇ ಅಡಿಮೇಲು ಮಾಡಿದಂತಾಗಬಹುದು.

ಹಳೇ ಮಸೂದೆ ಪ್ರಕಾರ ಮಂಡಲ ಪಂಚಾಯತಿ ಜಿಲ್ಲಾ ಪರಿಷತ್ತಿನವರು ಕಾರ್ಯದರ್ಶಿಯನ್ನು ನೇಮಿಸಿ ಅವರ ವೇತನಕೊಡಬೇಕೆಂದಿದೆ. ಹೊಸ ಮಸೂದೆ ಪ್ರಕಾರ ಸರಕಾರದವರು ಕಾರ್ಯದರ್ಶಿಯನ್ನು ನೇಮಿಸಿ, ಜಿಲ್ಲಾ ಪರಿಷತ್ತಿನವರು ತಮ್ಮ ನಿಧಿಯಿಂದ ಅವರಿಗೆ ಸಂಬಳ ಕೊಡಬೇಕೆಂದಿದೆ. ಇದು ಸರಿಯಲ್ಲ.

ಹಳೇ ಮಸೂದೆ ಪ್ರಕಾರ ಮಂಡಲ ಪಂಚಾಯತಿ ಪ್ರದೇಶದಲ್ಲಿರುವ ಪ್ರತಿಯೊಬ್ಬನಿಗೆ ರೂ. 10ರಂತೆ ಲೆಕ್ಕ ಮಾಡಿ ಪ್ರತಿ ಪಂಚಾಯತಿಗೆ ಸರಕಾರ ಗ್ರ್ಯಾಂಟ್ ಕೊಡುತ್ತಿತ್ತು. ಈಗ ಹೊಸ ಮಸೂದೆಯಂತೆ ಒಂದು ಲಕ್ಷ ರೂಪಾಯಿ ಸರಕಾರಿ ಗ್ರ್ಯಾಂಟ್ ಕೊಡಲಾಗುವುದು.

ಸಣ್ಣ ಪುಟ್ಟ ಖಟ್ಲೆಗಳ ಸೂಕ್ತ ಪರಿಹಾರಕ್ಕಾಗಿ ಹಳೇ ಮಸೂದೆಯಲ್ಲಿ ಮಂಡಲ ಪಂಚಾಯತಿ ನ್ಯಾಯ ಪಂಚಾಯತಿ ರಚನೆ ಮಾಡಬಹುದಿತ್ತು. ಹೊಸ ಮಸೂದೆಯಲ್ಲಿ ಅದನ್ನು ಕೈ ಬಿಡಲಾಗಿದೆ.

ವಿಧೇಯಕದ 313, 314, 315ನೇ ವಿಧಿಗಳಲ್ಲಿ ಪಂಚಾಯತಿಗಳಿಗೆ ಸೂಕ್ತ ಉಪನಿಯಮಗಳನ್ನು ರಚಿಸಿಕೊಳ್ಳಲು ಅವಕಾಶವಿದ್ದರೂ ಕೂಡ 316ನೇ ವಿಧಿ ನಿಯಮದನ್ವಯ ಸರಕಾರ ರಚಿಸುವ ಮಾದರಿ ಉಪನಿಯಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕೆಂದು ಸೂಚಿಸಿರುವುದು ವಿಕೇಂದ್ರೀಕರಣದ ತತ್ವವನ್ನು ಗಾಳಿಗೆ ತೂರಿದಂತಾಗಿದೆ.

ಹಾಗೆಯೇ ಸಿಬ್ಬಂದಿ ವರ್ಗದ ಕುರಿತು ಒಂದು ಕಡೆ ಗ್ರಾಮ ಪಂಚಾಯತಿಗಳು ತಮಗೆ ಅವಶ್ಯವಿರುವ ಸಿಬ್ಬಂದಿಯ ಅವರ ದರ್ಜೆ, ವೇತನ, ಭತ್ತೆಗಳ ಕುರಿತು ನಿರ್ಧರಿಸಿ ಪಟ್ಟಿಯನ್ನು ಮುಖ್ಯ ಕಾರ್ಯದರ್ಶಿ ನಿರ್ವಾಹಕರಿಗೆ ಅನುಮೋದನೆಗಾಗಿ ಕಳುಹಿಸಬೇಕೆಂದಿದೆ.[ಅಧಿನಿಯಮ 112(2)]. ಇದೇ ಅಧಿನಿಯಮ(1)ರ ಪ್ರಕಾರ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿ, ನೇಮಕಾತಿ ವಿಧಾನಗಳನ್ನು ಸರಕಾರ ನಿರ್ದಿಷ್ಟಪಡಿಸಬಹುದೆಂದಿದೆ. ಈ ಗೊಂದಲ ಅಧಿಕಾರ ವಿಕೇಂದ್ರೀಕರಣಕ್ಕೆ ಸಹಾಯವಾಗುತ್ತದೋ? ಪಂಚಾಯತಿಗಳ ಸಿಬ್ಬಂದಿಯ ಸಂಪೂರ್ಣ ಜವಾಬ್ದಾರಿಯನ್ನು ಸರಕಾರ ವಹಿಸಿಕೊಂಡಿರುವುದು ಪಂಚಾಯತಿ ವ್ಯವಸ್ಥೆಯ ಅಣಕವಲ್ಲವೇ?

ನಮ್ಮ ಅನಿಸಿಕೆ ಒಟ್ಟಾಭಿಪ್ರಾಯ

ಈ ವಿಧೇಯಕದ ಕುರಿತು ಜನತಾದಳದ ಚಂದ್ರೇಗೌಡರು ಈ ವ್ಯಕ್ತಮಾಡಿರುವ ಎಲ್ಲಾ ಅಭಿಪ್ರಾಯಗಳನ್ನೂ ಒಪ್ಪುವುದು ಕಷ್ಟ. ಈ ಮಸೂದೆ ವಿಕೇಂದ್ರೀಕೃತ ವ್ಯವಸ್ಥೆಯ ವಿಕೃತ ಮಸೂದೆ ಎಂಬ ಚಂದ್ರೇಗೌಡರ ಟೀಕೆಯನ್ನು ನಾವು ಒಪ್ಪಲು ಸಾಧ್ಯವಿಲ್ಲ. ಆದರೆ ಎಂ.ವೈ.ಘೋರ್ಪಡೆಯವರು ತಾವು ಮಂಡಿಸಲಿಚ್ಛಿಸಿದ ವಿಧೇಯಕವನ್ನು ಸಾರ್ವತ್ರಿಕ ಚರ್ಚೆಗೆ ಬಿಡುಗಡೆ ಮಾಡಿದ್ದಾರೆ. ಇದಕ್ಕಿಂತಲೂ ಉತ್ತಮವಾದ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಲು ಸಾಧ್ಯವಾಗುತ್ತಿತ್ತು. ಜಿಲ್ಲಾ ಪಂಚಾಯತಿ ಎಂದು ಬದಲಾಯಿಸದೆ ಜಿಲ್ಲಾ ಪರಿಷತ್ತೆಂಬ ಹೆಸರನ್ನೇ ಮುಂದುವರಿಸಬಹುದಿತ್ತು. ಮೂರು ಹಂತದ ಬದಲಾಗಿ ಎರಡು ಹಂತದ ವ್ಯವಸ್ಥೆಯನ್ನೇ ಮುಂದುವರಿಸಬಹುದಿತ್ತು.

ರಾಜಕೀಯ ಪಕ್ಷಗಳು ಅಧಿಕೃತ ಅಭ್ಯರ್ಥಿಗಳನ್ನು ಗ್ರಾಮ ಪಂಚಾಯತಿ ಚುನಾವಣೆಗೆ ನಿಲ್ಲಿಸಬಾರದೆಂದು ಹೇಳಿರುವುದು ಸರಿಯಲ್ಲ. ಎಲ್ಲಾ ಸಂಘ-ಸಂಸ್ಥೆಗಳಲ್ಲೂ ರಾಜಕೀಯ ಚುನಾವಣೆಗಳು ನಡೆಯುತ್ತಿರುವಾಗ, ಆಡಳಿತ ವಿಕೇಂದ್ರೀಕರಣದ ಮುಖ್ಯ ಅಡಿಪಾಯವಾದ ಮಂಡಲ ಪಂಚಾಯತಿ ಆಧಾರದಲ್ಲಿ ಚುನಾವಣೆ ನಡೆಯಬಾರದೆಂಬ ಸಿದ್ಧಾಂತ ಸರಿಯಲ್ಲ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ ಹಾಗೆಯೇ ಮಹಾರಾಷ್ಟ್ರ, ಗುಜರಾತ್, ಆಂಧ್ರಗಳಲ್ಲಿ, ಇತ್ತೀಚೆಗೆ ಪಂಜಾಬಿನಲ್ಲಿ ರಾಜಕೀಯ ಪಕ್ಷಗಳ ಆಧಾರವಲ್ಲೇ ಪಂಚಾಯತಿ ಚುನಾವಣೆಗಳು ನಡೆದಿವೆ. ಪಶ್ಚಿಮ ಬಂಗಾಲದಲ್ಲಿ ನಾಲ್ಕು ಸಲ ಆ ರೀತಿ ಚುನಾವಣೆ ನಡೆದಿದೆ. ಅದು ಪಂಚಾಯತಿ ವ್ಯವಸ್ಥೆಯ ಪಂಚಾಯತಿ ಆಡಳಿತೆಯ ಜನಪ್ರಿಯತೆಯ ಅಳತೆಗೋಲಾಗಿದೆಂಬುದನ್ನು ತೋರಿಸಿಕೊಟ್ಟಿವೆ. ರಾಜಕೀಯ ಆಧಾರದಲ್ಲಿ ಚುನಾವಣೆ ನಡೆದರೆ ಗ್ರಾಮಾಂತರ ಪ್ರದೇಶದಲ್ಲಿ ಅಶಾಂತಿ ಉಂಟಾಗುತ್ತದೆ, ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿ ಉಂಟಾಗುತ್ತದೆಂದು ಹೇಳುವುದು ಸರಿಯಲ್ಲ. ಪಶ್ಚಿಮ ಬಂಗಾಲದ ಅನುಭವ ತದ್ವಿರುದ್ಧವಾಗಿದೆ. ಹಾಗೆಯೇ ಅಧ್ಯಕ್ಷ, ಉಪಾಧ್ಯಕ್ಷರ ನೇರ ಚುನಾವಣೆಯನ್ನು ಕೈ ಬಿಟ್ಟಿರುವುದು ಸರಿಯಾದ ಕ್ರಮ.

ಜಿಲ್ಲಾ ಯೋಜನಾ ಸಮಿತಿ ರಚನೆಗೆ ಅವಕಾಶ ಕಲ್ಪಿಸಿರುವುದು ಸ್ವಾಗತಾರ್ಹ.

ಪಂಚಾಯತ್ ವ್ಯವಸ್ಥೆಯಲ್ಲಿ ಜನಪರ ಕೆಲಸಗಳನ್ನು ಸಮರ್ಪಕವಾಗಿ ನಿಭಾಯಿಸಲು ಸಮರ್ಥ ಜನರು ಆರಿಸಿ ಬರುವುದು ಅತ್ಯಗತ್ಯ. ನಮ್ಮ ರಾಜ್ಯದಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಟವಾಗಿ ಬೆಳೆದು ಬಾರದಿರುವುದರಿಂದ, ಗ್ರಾಮಂತರ ಪ್ರದೇಶದಲ್ಲಿ ಈಗಲೂ, ಶ್ರೀಮಂತರ, ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವವೇ ಹೆಚ್ಚಾಗಿದ್ದು, ನಿಸ್ವಾರ್ಥ ಕಾರ್ಯಕರ್ತರು ಆರಿಸಿ ಬರುವುದು ಸ್ವಲ್ಪ ಕಷ್ಟಕರವಾದ ಕೆಲಸ. ಹಿಂದಿನ ಐದು ವರ್ಷಗಳ ಅನುಭವದ ಆಧಾರದಲ್ಲಿ ಅಷ್ಟೇ ಕೆಲವು ತಿದ್ದುಪಡಿಗಳನ್ನು ತರುತ್ತಿದ್ದರೆ ಹೆಚ್ಚು ಫಲಕಾರಿ ಆಗುತ್ತಿತ್ತು. ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಪಂಚಾಯತಿಗಳಿಗೆ ಒಪ್ಪಿಸಬಹುದಾಗಿತ್ತು.

ಸಂಪನ್ಮೂಲಗಳ ವ್ಯವಸ್ಥೆ, ತಮ್ಮ ಮೇಲೆ ಹೊರಿಸಲ್ಪಟ್ಟ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ, ಫಲಪ್ರದವಾಗಿ ಪೂರೈಸುವ ಚಾಕಚಕ್ಯತೆ, ಗ್ರಾಮಾಂತರ ಪ್ರದೇಶದಲ್ಲಿಯ ವಾತಾವರಣ, ರಾಜ್ಯ ಸರಕಾರಕ್ಕೆ ತನ್ನ ಕರ್ತವ್ಯದ ಅರಿವು - ಇವುಗಳೆಲ್ಲ ಪಂಚಾಯಿತಿ ರಾಜ್ಯ ವ್ಯವಸ್ಥೆಯ ಸಾರ್ಥಕತೆಯ ದಿಕ್ಸೂಚಿಗಳಾಗಿವೆ.

ಪಂಚಾಯತಿ ವ್ಯವಸ್ಥೆ ಯಶಪ್ರದವಾಗಬೇಕಾದರೆ ಮೂರು ಹಂತದ ಚುನಾವಣೆಗಳಲ್ಲಿಯೂ ಜನಪರರಾದ, ಕರ್ತವ್ಯ ನಿಷ್ಠ ಸದಸ್ಯರು ಆರಿಸಿಬರಬೇಕಾಗಿದೆ. ಹಾಗೆಯೇ ಅಧ್ಯಕ್ಷ, ಉಪಾಧ್ಯಕ್ಷರೂ ಕೂಡ. ಇದರ ಜೊತೆಯಲ್ಲಿಯೇ ನಿಷ್ಠೆಯಿಂದ ಕೆಲಸ ಮಾಡುವ ಅಧಿಕಾರಿಗಳೂ ಬೇಕು. ಇದಕ್ಕೆಲ್ಲಾ ಮಂತ್ರಿಗಳ ಮಾರ್ಗದರ್ಶನವೂ ಅತ್ಯಗತ್ಯ. ಈ ಮಸೂದೆ ಚರ್ಚೆ ನಡೆದಾಗ ವಿಧಾನಸಭೆಯಲ್ಲಿ ಆಳುವ ಕಾಂಗ್ರೆ ಪಕ್ಷದ ಶಾಸಕರ ಅಭಾವದ ಕುರಿತು ಪತ್ರಿಕೆಗಳೇ ಗಮನ ಸೆಳೆದಿವೆ. ಈ ಮಸೂದೆಯ ಕುರಿತು ವಿಧಾನ ಸಭೆಯಲ್ಲಿ ಗಮನ ಹರಿಸದ ಶಾಸಕರು ಗ್ರಾಮ ಪಂಚಾಯತಿ ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಸಹಾಯ ಮಾಡಬಹುದೆಂದು ಆಶಿಸಿದರೆ ಅತಿಶಯೋಕ್ತಿ ಆಗಲಾರದಷ್ಟೇ?

ಆದರೆ ಪ್ರಾಂತ ರೈತ ಸಂಘ, ಎಡಪಕ್ಷಗಳು, ಜನತಾದಳ, ಎಸ್‌ಜೆಪಿ ಪಕ್ಷಗಳ ಕಾರ್ಯಕರ್ತರು ಈ ವ್ಯವಸ್ಥೆಯ ಅನುಷ್ಠಾನದಲ್ಲಿ ಹೆಚ್ಚು ಆಸ್ತೆ ವಹಿಸಬೇಕು. ಎಲ್ಲಾ ಹಂತಗಳಲ್ಲಿ ಕಾಣಬಹುದಾದ ಹಣ ದುರುಪಯೋಗ, ಭ್ರಷ್ಟಾಚಾರ, ಅಧ್ಯಕ್ಷತೆಗಳ ವಿರುದ್ಧ ನಿರಂತರ ಹೋರಾಟಕ್ಕೆ ಅಣಿಯಾಗಬೇಕಾಗಿದೆ, ಈ ವ್ಯವಸ್ಥೆಯಲ್ಲಿಯ ಪ್ರತಿಯೊಂದು ರೂಪಾಯಿ ಜನರಿಗಾಗಿಯೇ ವ್ಯಯವಾಗುವಂತೆ ನೋಡಿಕೊಳ್ಳಬೇಕಾಗಿದೆ.

ಪಂಚಾಯತಿ ನೌಕರರು

ಸದ್ಯ 2200 ಮಂಡಲ ಪಂಚಾಯತಿಗಳಿದ್ದು ಈಗ ಅದು 5000ಕ್ಕೇರಲಿದೆ. ಈಗ 12 ಸಾವಿರ ಪಂಚಾಯತಿ ನೌಕರರಿದ್ದರೆ ಮುಂದೆ ಅದರ ಎರಡು ಪಟ್ಟಾಗಬಹುದು. ಈಗಿದ್ದ ಪಂಚಾಯತ್ ವ್ಯವಸ್ಥೆಯಲ್ಲಿ 12000 ನೌಕರರ ಕುರಿತು ಏನೂ ಕ್ರಮ ಕೈಗೊಳ್ಳದೆ ಅವರೆಲ್ಲ ಅಸಹಾಯಕರಾಗಿ ಕೆಲಸ ನಿರ್ವಹಿಸುವಂತಾಗಿದೆ. ಇವರಿಗೆಲ್ಲ ಸೇವಾ ಭದ್ರತೆ, ವೇತನ ನಿರ್ಧರಿಸುವ ವಿಚಾರ ಹಳೇ ಮಸೂದೆಯಲ್ಲಿದ್ದರೂ ಸರಕಾರ ಅದರ ಕುರಿತು ಕ್ರಮ ಕೈಗೊಳ್ಳುವ ಗೋಜಿಗೆ ಹೋಗಲಿಲ್ಲ. ಹೊಸ ಮಸೂದೆಯಲ್ಲಿ ಮೇಲೆ ಉಲ್ಲೇಖಿಸಿರುವಂತೆ ನೌಕರರ ಕುರಿತು ಗೊಂದಲ ಪರಿಸ್ಥಿತಿಯನ್ನು ಕಾಣಬಹುದು.

ನೌಕರರ ಸಮಸ್ಯೆಯನ್ನು ಸಹಾನುಭೂತಿಯಿಂದ ಪರಿಗಣಿಸುವ ಆಶ್ವಾಸನೆಯನ್ನು ಎಂ.ವೈ.ಘೋರ್ಪಡೆಯವರು ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ. ಆದರೆ ಅದರ ಕುರಿತು ಈ ಮಸೂದೆಯಲ್ಲಿ ಏನೂ ಉಲ್ಲೇಖವಿಲ್ಲ.

ಯಾವುದೇ ಯೋಜನೆ ಯಶಸ್ವಿಯಾಗಬೇಕಾದರೆ ಸಿಬ್ಬಂದಿಯ ಸಹಕಾರ ಅತ್ಯಗತ್ಯ. ನೌಕರಿಯ ಭದ್ರತೆಯಿಲ್ಲದೆ, ಮನುಷ್ಯನಾಗಿ ಬಾಳುವಷ್ಟು ಸಂಬಳ ಸಿಗದ ನೌಕರ ಎಷ್ಟು ನಿಷ್ಠೆಯಿಂದ ಕರ್ತವ್ಯ ಪೂರೈಸಲು ಸಾಧ್ಯ.

ರಾಜ್ಯದಲ್ಲಿ ರಚನೆಯಾಗುವ 5000 ಮಂಡಲ ಪಂಚಾಯತಿಗಳಲ್ಲಿ ದುಡಿಯಲಿರುವ ಎಲ್ಲಾ ನೌಕರರಿಗೆ ಮುನಿಸಿಪಾಲಿಟಿಗಳಂತೆಯೇ ಏಕ ರೂಪದ ಸೇವಾ ನಿಯಮ, ಸರಿಸಮಾನ ಸಂಬಳ, ನಿವೃತ್ತಿ ಮತ್ತಿನ್ನಿತರ ಸೌಲಭ್ಯಗಳು ರೂಪಿಸಲ್ಪಡಬೇಕಾಗಿದೆ. ಈಗಿನ ಹೊಸ ಮಸೂದೆಯಲ್ಲಿ ನಮೂದಿಸಿರುವಂತೆ ಪ್ರತಿಯೊಂದು ಮಂಡಲ ಪಂಚಾಯತಿಗೆ ಪ್ರತ್ಯೇಕ ಸೇವಾ ನಿಯಮಗಳನ್ನು ರಚಿಸಲಿಕ್ಕೆ ನಿರ್ದೇಶಿಸಿರುವುದು ನ್ಯಾಯಬಾಹಿರವಾಗಬಹುದು. ಇದರ ಕುರಿತು ಮಂಡಲ ಪಂಚಾಯತ್ ಎಂಪ್ಲಾಯೀಸ್ ಯೂನಿಯನ್ ಸರಕಾರದ ಗಮನ ಸೆಳೆಯುತ್ತಾ ಇದೆ. ಅದರ ಕುರಿತು ಸರಕಾರ ಗಮನ ಹರಿಸದಿದ್ದರೆ, ತುರ್ತು ಕ್ರಮ ಕೈಗೊಳ್ಳದಿದ್ದರೆ ನೌಕರರ ಅಸಮಾಧಾನ, ಅಸಂತೋಷ ಬೆಳೆಯುವುದರಲ್ಲಿ ಸಂಶಯವಿಲ್ಲ. ಅದರಿಂದಾಗಿ ಇಡೀ ಪಂಚಾಯಿತಿ ವ್ಯವಸ್ಥೆಯ ಯಶಸ್ಸಿಗೆ ಅಡ್ಡಿ ಉಂಟಾಗಬಹುದಾಗಿದೆ.

ಅಯೋಧ್ಯಾ ಕಾಂಡ



ಇದೂ ರಾಮಭಕ್ತಿಯೇ? ಕೃಷ್ಣ ದೇವಸ್ಥಾನದಲ್ಲಿ ಆರ್‌ಎಸ್‌ಎಸ್ ಮಂದಿಯ ರಂಪ

ಕೇರಳದಲ್ಲಿ ಆರ್‌ಎಸ್‌ಎಸ್ ಮಂದಿಯ ನಿಜ ಸ್ವರೂಪವನ್ನು ಬಯಲಿಗೆಳೆದ ಇನ್ನೊಂದು ಘಟನೆಯಿದು. ತಿರುವನಂತಪುರದ ಬಳಿ ಮಲಯಿಂಕೀಳ್‌ನಲ್ಲಿ ಇತ್ತೀಚೆಗೆ ಆರ್‌ಎಸ್ ಎಸ್‌ನ ಮಂದಿ ಒಂದು 'ಅಪವಿತ್ರ' ರಂಪವನ್ನೇ ಎಬ್ಬಿಸಿದರು. ಈ ಪಟ್ಟಣದ ಕೃಷ್ಣ ದೇವಸ್ಥಾನದ ಆಶ್ರಯದಲ್ಲಿ ಪ್ರತಿ ವರ್ಷ ನಡೆಯುವ ಉತ್ಸವ ತನ್ನ ಜಾತ್ಯಾತೀತ ಪರಂಪರೆಗಾಗಿ ಹೆಸರುವಾಸಿಯಾಗಿದೆ. ಇದನ್ನು ಬುಡಮೇಲು ಮಾಡಲೆಂದು ಆರ್ ಎಸ್‌ಎಸ್‌ನ ಮಂದಿ ಈ ದೇವಸ್ಥಾನದ ಪಾರುಪತ್ಯೆಯಲ್ಲಿ ತಮ್ಮ ಹತೋಟಿ ಪಡೆಯುವ ಪ್ರಯತ್ನದ ಅಂಗವಾಗಿ ದೇವಸ್ಥಾನದ ಕಚೇರಿಯಲ್ಲಿ ಹಿಂದೆ ಲೋಕಸಭಾ ಚುನಾವಣೆಗಳಲ್ಲಿ ಬಳಸಿದ್ದ ಶ್ರೀ ರಾಮಚಂದ್ರನ ಚಿತ್ರಗಳನ್ನು ಹಾಕಿದರು. ದೇವಸ್ಥಾನದ ಪಾರುಪತ್ಯೆಗಾರರು ವಿರೋಧಿಸಿದರು- "ಚುನಾವಣೆಯಲ್ಲಿ ಬಳಸಿದ್ದ ಈ ಚಿತ್ರಗಳನ್ನು ಇಲ್ಲಿ ಹಾಕಿ ಈ ಉತ್ಸವಕ್ಕೆ ರಾಜಕೀಯ ಬಣ್ಣ ಬರುವುದು ನಮಗೆ ಇಷ್ಟವಿಲ್ಲ" ಎಂದು ಅವರ ಅಂಬೋಣ.

ಈ ಚಿತ್ರಗಳನ್ನು ಕಂಡು ಸಿಟ್ಟಿಗೆದ್ದ ಜನ ದೇವಸ್ಥಾನದ ಸುತ್ತ ನೆರೆದರು. ಜನಗಳ ಭಾವನೆ ಅರಿತ ಪೋಲೀಸರು ಬಂದು ಆ ಚಿತ್ರಗಳನ್ನು ತೆಗೆದರು. ಇದರಿಂದ ಕುಪಿತರಾದ 'ಹಿಂದುತ್ವ'ದ ಮಂದಿಯ ರಂಪ ಆರಂಭವಾಯಿತು. 'ಹಿಂದೂ ಏಕತೆ'ಯ ಬೊಬ್ಬೆ ಹೊಡೆಯುವ ಈ ನಕಲೀ ರಾಮಭಕ್ತರು ಮಾರ್ಚ್ 16ರಂದು ಉತ್ಸವಕ್ಕೆ ಬರುವ ಭಕ್ತಾದಿಗಳ ಮೇಲೆ ಧಾಳಿ ನಡೆಸಿದರು. ಅಂಗಡಿಗಳ ಲೂಟಿ ನಡೆಯಿತು. ಹಲವಾರು ಮಂದಿ ಗಾಯಗೊಂಡರು. ದೇವಸ್ಥಾನದ ಪೂಜಾರಿ ಈಶ್ವರನ್ ಪೊಟ್ಟಿ ಉತ್ಸವದ ಸಂಘಟಕ ರಮೇಶ್ ಬಾಬು ಮತ್ತಿತರ ಮೂರು ದೇವಸ್ಥಾನದ ನೌಕರರಿಗೆ ತೀವ್ರ ಗಾಯಗಳಾದವು. ನಕಲೀ ರಾಮಭಕ್ತರು ದೇವಸ್ಥಾನದ 30 ವರ್ಷ ವಯಸ್ಸಿನ ಆನೆ "ಶೇಖರನ್"ನನ್ನು ಕೂಡಾ ಬಿಡಲಿಲ್ಲ. ಕತ್ತಿ, ಕಬ್ಬಿಣದ ಕಲಾಕೆಗಳ ಏಟು ತಿಂದ ಆ ಆನೆಯ ಬಲಗಾಲಿನ ಮೇಲೆ ದೊಡ್ಡ ಗಾಯವಾಯಿತು. ಈ ಗಾಯ ಎಷ್ಟು ಆಳವಾಗಿದೆಯೆಂದರೆ ಉತ್ಸವದ ಕಲಾಪಗಳಲ್ಲಿ ಭಾಗಹಿಸಲು ಪಕ್ಕದ ಊರಿನ ಗೋಪಾಲನ್ ಎಂಬ ಆನೆಯನ್ನು ತರಬೇಕಾಯಿತು.

ಈ ಘಟನೆಯ ನಂತರ ಮಲಯಿಂಕೀಳದಲ್ಲಿ ಆರ್‌ಎಸ್‌ಎಸ್‌ನ ಗೂಂಡಾಗಿರಿಯ ವಿರುದ್ಧ ಹರತಾಳ ನಡೆಯಿತು. "ಸ್ಥಳೀಯವಾಗಿ ಎಲ್ಲರಿಗೂ ಗೊತ್ತಿರುವ ಆರ್‌ಎಸ್‌ಎಸ್-ಬಿಜೆಪಿ ಮಂದಿ ಈ ಹಲ್ಲೆಗಳ ನೇತೃತ್ವ ವಹಿಸಿದ್ದರೂ ಇದುವರೆಗೂ ಅವರ ವಿರುದ್ಧ ಯಾವುದೇ ಕೇಸ್ ಹಾಕಿಲ್ಲ" ಎನ್ನುತ್ತಾರೆ ಈ ಘಟನೆಯ ನಂತರ ರಚನೆಗೊಂಡ ಶಾಂತಿ ಸಮಿತಿಯ ಸದಸ್ಯರು.

ಭಿಂದ್ರನ್‌ವಾಲೆಯ ಸಂತತಿಯವರಂತೆ ವರ್ತಿಸುತ್ತಿರುವ 'ಹಿಂದುತ್ವ'ದ ಮಂದಿ ದಕ್ಷಿಣ ಭಾರತದಲ್ಲಿ ದೇವಸ್ಥಾನಗಳನ್ನು ತಮ್ಮ ರಾಜಕೀಯ ಪ್ರಚಾರದ ವೇದಿಕೆಗಳನ್ನು ಮಾಡುವ ಪ್ರಯತ್ನ ನಡೆಸಿದ್ದಾರೆ. ಕೇರಳದ ಮಲಯಿಂಕೀಳ ಅವರ ಈ ಪ್ರಯತ್ನಕ್ಕೊಂದು ಸವಾಲು ಹಾಕಿದೆ.

- ಕೃಪೆ : ಇಂಡಿಯಾ ಟುಡೇ

ಮಲ್ಕಾನಿ ಹೇಳಿದ್ದು

ಭಾರತದಿ ಶಿಕ್ಷಣವು ಪ್ರಸ್ತುತವೇ ಅಲ್ಲ
ರೈತ ಕೂಲಿಕಾರ ಜನ ಕಲಿಯಬೇಕಿಲ್ಲ
ಹೀಗೆಂದ ದಿಲ್ಲಿಯಲಿ ಮಲ್ಕಾನಿ ನೋಡಿ
ದೇಶೆಯ ಸಿರಿ ಮೊಳಕೆಯಲಿ ಚಿವಾರ ಮಾಡಿ

ಎಂ.ವಿ.ಗೆ ಹೃದಯವಿಲ್ಲ

ಕಾಮತಗೆ ಕರುಳಿಲ್ಲ ಹೃದಯವೂ ಸೊನ್ನೆ
ನಾನಿದನು ಮನದಲ್ಲಿ ಊಹಿಸಿದೆ ಮೊನ್ನೆ
ಹಿಂಸೆಯಲಿ ದೇಶಕ್ಕೆ ಮುಸುಕಿರಲು ಕಪ್ಪ
ಈ ಇವನು ಗಾಯಕ್ಕೆ ಎರಚುತಿಹ ಉಪ್ಪ

ಯಾರು ಪರಕೀಯರು?

ಆರ್ಯ ಜನ ದ್ರಾವಿಡರು ಎಲ್ಲರೂ ಕೂಡ
ಹೊರಗಿಂದ ಬಂದವರೆ ಆಗಿಹರೋ ಮೂಢ
ಇಂತಿರಲು ಮುಸ್ಲಿಮ ಕ್ರೈಸ್ತ ಜನ ಮಾತ್ರ
ಪರಕೀಯರೆನ್ನುವುದು ಬರಿಯ ಕುತಂತ್ರ

ಕುಳಿತುಂಬ ವರ್ಗ

ಸಮಾನತೆ ಸಾರುತಿಹ ಬೌದ್ಧರನು ಕೊಂದು
ನಿಜ ನುಡಿದ ಚಾರ್ವಾಕರ ಮುಗಿಸಿದರು ಅಂದು
ಕುಳಿತುಂಬ ಮಾರ್ಗದೊಳು ಅಡ್ಡಕ್ಕೆ ಬಂದ
ಎಲ್ಲರನು ಮುಗಿಸುತ್ತ ಬಂದಿಹರೋ ಕಂದ

ಗಾಂಧೀಜಿ ಕೇಳು?

ನಿನ್ನನ್ನು ಗುಂಡಿಟ್ಟು ಕೊಂದವರು ನೋಡು
ಹಾಡುವರು ನಿನ್ನದೇ ಹೊಗಳಿಕೆಯ ಹಾಡು
ಅಸ್ಪೃಶ್ಯತೆ ಭಾರತಕೆ ಶಾಪವೇ ಎಂದ
ನಿನ್ನ ಮೂರ್ತಿಯ ಹಣೆಗೆ ಹಚ್ಚಿದರೊ ಗಂಧ

-- ವಿಡಂಬಾರಿ

[ಕಳೆದ ಸಂಚಿಕೆಯಲ್ಲಿ ಪುಟ 2ರಲ್ಲಿ ಪ್ರಕಟಕೊಂಡ ಚುಟುಕಗಳೂ ಇದೇ ಕವಿಗಳದ್ದು. ಕಣ್ತಪ್ಪಿನಿಂದ ಹೆಸರು ಮುದ್ರಣಗೊಂಡಿರಲಿಲ್ಲ] ಇದಕ್ಕಾಗಿ ಕ್ಷಮೆ ಕೋರುತ್ತೇವೆ.

ಈ ನಿರ್ಮಾಣ ಯಾರ ಆದೇಶದಿಂದ ನಡೆಯುತ್ತಿದೆ? ಪ್ರಧಾನಮಂತ್ರಿಗಳದ್ದೇ? ಕರಸೇವಕರದ್ದೇ?

ಅಯೋಧ್ಯೆಯ ವಿವಾದಾಸ್ಪದ ಸ್ಥಳದಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯುತ್ತಿದೆ. ಈ ಚರ್ಚೆಯಲ್ಲಿ ಪ್ರಧಾನಮಂತ್ರಿಗಳು ಎಡಬಿಡಂಗಿ ನಿಲುವು ತಳೆದಿದ್ದಾರೆ. ಸರಕಾರ "ಶ್ವೇತಪತ್ರ"ದಲ್ಲಿ ಕೆಡವಿದ್ದು ಬಾಬ್ರಿ ಮಸೀದಿ ಎಂದು ಹೇಳಲೂ ಹಿಂಜರಿದಿರುವ ವಿವಾದಾಸ್ಪದ ಕಟ್ಟಡ ಎಂದಿರುವ ವಿವಾದಾಸ್ಪದ 'ಪ್ರದೇಶ'ದಲ್ಲಿ ಯಾವುದಾದರೂ ದೇವಸ್ಥಾನ ಇತ್ತೆ ಎಂದು ಸುಪ್ರೀಂ ಕೋರ್ಟ್‌ನ್ನು ಕೇಳಿರುವ ಸರಕಾರಕ್ಕೆ ಅಯೋಧ್ಯೆಯ ವಿವಾದಾಸ್ಪದ ಸ್ಥಳದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಮಾತ್ರ ಸಂಶಯವಿದ್ದಂತಿಲ್ಲ. ಶ್ರೀರಾಮನ ನೈಜ ಭಕ್ತರೆಲ್ಲರೂ ತಲೆ ತಗ್ಗಿಸುವ ರೀತಿಯಲ್ಲಿ ಮಸೀದಿ ಕೆಡವಿ ಒಂದು ತಾತ್ಕಾಲಿಕ ದೇವಸ್ಥಾನ ಕಟ್ಟಿದ ಜಾಗದಲ್ಲಿ ಈಗ ಕೇಂದ್ರ ಸರಕಾರದ ಹತೋಟಿಯಲ್ಲಿ ಸಾರ್ವಜನಿಕ ಕಾಮಗಾರಿ ಇಲಾಖೆಯಿಂದ ನಡೆಯುತ್ತಿರುವ ನಿರ್ಮಾಣ ಕೆಲಸ ಏನು ಗೊತ್ತೇ? ಮೇಲಿನ ಫೋಟೋದಲ್ಲಿರುವ ಸೂಚನಾ ಫಲಕ ಹೀಗನ್ನುತ್ತದೆ -

ನಿರ್ಮಾಣವಾಗುತ್ತಿದೆ
ಶ್ರೀ ರಾಮಜನ್ಮಭೂಮಿ
ಸಂಪರ್ಕ ಮಾರ್ಗ
ಅಸ್ಥಾಯಿ ವಿಭಾಗ ನಂ. 2, ಪಿಡಬ್ಲ್ಯುಡಿ, ಫೈಜಾಬಾದ್

ಈ ಕೆಲಸ ಪ್ರಧಾನಮಂತ್ರಿಗಳ ಆದೇಶದ ಪ್ರಕಾರ ನಡೆಯುತ್ತಿದೆಯೋ ಅಥವಾ ಕರಸೇವಕರ ಆದೇಶದಿಂದಲೋ ಎಂದು ತಿಳಿದಿಲ್ಲ.

ಗಾಂಧೀಜಿ ಪ್ರತಿಮೆ ಒಡೆದ ಕೋಮುವಾದಿ ರಾಷ್ಟ್ರದ್ರೋಹಿಗಳು

ಬಿಹಾರದ ರಾಜಧಾನಿಯ ಪಟ್ನಾ ಕಾಲೇಜಿನ ದ್ವಾರದ ಎದುರು ಅಶೋಕ ರಾಜಪಥದಲ್ಲಿದ್ದ ಮಹಾತ್ಮಾಗಾಂಧಿ ಪ್ರತಿಮೆ ಫೆಬ್ರವರಿ 27ರ ಬೆಳಿಗ್ಗೆ ಮುರಿದುಬಿದ್ದಿತ್ತು. ಅದರ ಬಳಿ ಹೆಚ್‌ಪಿಎ(ಹಿಂದೂ ಪೀಪಲ್ಸ್ ಆರ್ಮಿಯ) ಒಂದು ಎಚ್ಚರಿಕೆ ಪತ್ರ ಇತ್ತು - "ಮುಸ್ಲಿಂ ಬೆಂಬಲಿಗ ಗಾಂಧೀವಾದಿಗಳೇ ಎಚ್ಚರವಿರಲಿ - ಗಾಂಧಿಯ ತಂತ್ರ ನಡೆಸುವವ ಗಾಂಧಿಯ ತರವೇ ಸಾಯುತ್ತಾನೆ".

ಈ ದೇಶ-ವಿರೋಧಿ ಕೃತ್ಯದಿಂದ ಕುಪಿತಗೊಂಡ ವಿದ್ಯಾರ್ಥಿ-ಯುವಜನರು, ಡಿವೈಎಫ್‌ಐ-ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಮೆಯಿದ್ದ ಜಾಗದಲ್ಲಿ ಮತ ಪ್ರದರ್ಶನ ನಡೆಸಿ ಈ ಘಾತುಕ ಕೆಲಸ ಮಾಡಿದವರನ್ನು ಶಿಕ್ಷಿಸಬೇಕು, ಪ್ರತಿಮೆಯನ್ನು ಮತ್ತೆ ನಿಲ್ಲಿಸಬೇಕೆಂದು ಒತ್ತಾಯಿಸಿದರು. ಅವರ ಮಾತಿಗೆ ಕಿವಿಗೊಡುವ ಬದಲು ಪಟ್ನಾ ನಗರ ಡಿಎಸ್‌ಪಿ ವಿಜಯಕುಮಾರ್ ವರ್ಮಾ ಅಮಾನುಷ ರೀತಿಯಲ್ಲಿ ಲಾಠೀ ಪ್ರಹಾರ ನಡೆಸಿ ಹಲವು ಯುವಜನರಿಗೆ ಗಂಭೀರ ಗಾಯಗಳಾದವು. ಇಬ್ಬರು ಮುಖಂಡರ ಮೇಲೆ ಸುಳ್ಳು ಕೇಸು ಹಾಕುವ ಪ್ರಯತ್ನವನ್ನು ವಿದ್ಯಾರ್ಥಿ-ಯುವಜನರ ತೀವ್ರ ಪ್ರತಿಭಟನೆಯಿಂದಾಗಿ ಕೈಬಿಟ್ಟರು.

ಈಗ ವಿದ್ಯಾರ್ಥಿ-ಯುವಜನರು ಈ ರಾಷ್ಟ್ರಘಾತುಕರ ಬಂಧನ, ಪ್ರತಿಮೆಯ ಪುನರ್‌ಸ್ಥಾಪನೆಯೊಂದಿಗೆ ಡಿಎಸ್‌ಪಿಯ ಅಮಾನತು ಹಾಗೂ ಆಡಳಿತದಲ್ಲಿರುವ ಕೋಮುವಾದಿಗಳ ಬೆಂಬಲಿಗರ ಬಗ್ಗೆ ತನಿಖೆ ನಡೆಸಬೇಕೆಂದೂ ಒತ್ತಾಯಿಸುತ್ತಿದ್ದಾರೆ. ●



ಬಿಜೆಪಿ ಸಹಿ ಸಂಗ್ರಹದ ಪರಿ ಉತ್ತರ ಪ್ರದೇಶದಿಂದಲೂ ಒಂದು ಉದಾಹರಣೆ

ಬಿಜೆಪಿಯ ಸಹಿ ಸಂಗ್ರಹದ ಪರಿಯನ್ನು ತೋರಿಸುವ ಕರ್ನಾಟಕದ ಎರಡು ಪತ್ರಗಳನ್ನು ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ತಮ್ಮ ಅಭೇದ್ಯ ಕೋಟೆಯೆಂದು ಬಿಜೆಪಿ 'ಪರಿವಾರ' ಪರಿಗಣಿಸಿದ ಉ.ಪ್ರದಲ್ಲಿ ಇದಕ್ಕಿಂತ ಭಿನ್ನವಾಗಿಲ್ಲ ಎಂಬುದು ಹಿಂದಿನ ಪ್ರಸಿದ್ಧ ದೈನಿಕ 'ಜನಸತ್ತಾ'ದಲ್ಲಿ ಝಾಂಸಿಯ ಪ್ರೇಮ್‌ಗಂಜ್‌ನಿಂದ ಪ್ರೇಮ್‌ಕುಮಾರ್ ಎಂಬ ಓದುಗ ಬರೆದ ಈ ಪತ್ರದಿಂದ ತಿಳಿಯುತ್ತದೆ. ಹೀಗಿದ್ದರೂ ಮೂರು ಮುಕ್ಕಾಲು ಕೋಟಿ ಸಹಿ ಸಂಗ್ರಹಿಸಿದ್ದೇವೆ(ಒಂದು ದಿನದ ಹಿಂದೆ ಈ ಸಂಖ್ಯೆ ಐದು ಕೋಟಿಯಿತ್ತು) ಎನ್ನುವ ಈ ಮಾಜೀ ಆಳುವ ಪಕ್ಷ ಬಿಜೆಪಿಯವರ ಹಸ್ತಾಕ್ಷರ ಸಮರ್ಪಣಾ ಸಮಾರಂಭದಲ್ಲಿ ಧ್ವಂಸವೀರ ಮಾಜೀ ಮುಖ್ಯಮಂತ್ರಿ ಭಾಗವಹಿಸಿದ್ದ ಸಮಾರಂಭದಲ್ಲಿ 5000 ಜನ ಕೂಡಾ ಭಾಗವಹಿಸಲಿಲ್ಲ ಎನ್ನುವ ಸಂಗತಿ ಈ ಓದುಗರ ಅಭಿಪ್ರಾಯವನ್ನು ಇನ್ನಷ್ಟು ಬಲಪಡಿಸಿದೆ.

ಮಾನ್ಯರೆ,

ಮಂದಿರ ನಿರ್ಮಾಣಕ್ಕಾಗಿ ಸಹಿ ಚಳುವಳಿಯಲ್ಲಿ ನಡೆದ ಹಸ್ತಾಕ್ಷರಗಳು ಎಷ್ಟು ಸಾಚಾ ಎಂದು ಬಯಲಿಗೆಳೆಯಬಯಸುತ್ತೇನೆ. ನನ್ನೊಬ್ಬ ಸಹಪಾಠಿ ಸುನಿಲ್ ಪಾಂಡೆ ಆರ್‌ಎಸ್‌ಎಸ್‌ನ ಸದಸ್ಯನಾಗಿದ್ದಾನೆ. ಅವನಿಂದಲೇ ನನಗೆ ಈ ಚಳುವಳಿಯ ಒಂದು ಪತ್ರ ನೋಡುವ ಅವಕಾಶ ಸಿಕ್ಕಿತು. ಅದರಲ್ಲಿದ್ದ ಬಹುಪಾಲು ಹಸ್ತಾಕ್ಷರ ತಪ್ಪು ಎಂದು ನನಗೆ ಕಂಡು ಬಂತು. ಒಬ್ಬನೇ ವ್ಯಕ್ತಿ ಹಲವು ಬಾರಿ ಸಹಿ ಮಾಡಿದ್ದ. ಬರವಣಿಗೆ ಯಾವರೂ ಬೇರೆ ಇರಲಿ ಎಂದೂ ಅವರಿಗನ್ನಿಸಿದಂತಿಲ್ಲ.

ಕೆಲವು ಕಡೆಯಂತೂ ಬಹಳ ಹಾಸ್ಯಾಸ್ಪದ ಸಂಗತಿಯಿದ್ದವು. ಉದಾಹರಣೆಗೆ ಒಂದು ಕಡೆ ಸಹಿ ಮಾಡಿದವರ ಹೆಸರು 'ಅಮಿತಾಬ್ ಬಚ್ಚನ್' ಎಂದಿತ್ತು. ವಿಳಾಸ ಜುಮಾಬೀಟ್, ಮುಂಬೈ - 49 ಎಂದಿತ್ತು. ಬಹುಶಃ ಇದೇ ರೀತಿ "ಸಾವಿರಾರು ಮುಸಲ್ಮಾನರ ಹಸ್ತಾಕ್ಷರ"ಗಳನ್ನು ಇವರು ಪಡೆದಿರಬಹುದು. ಇಂತಹ ಹಸ್ತಾಕ್ಷರಗಳನ್ನು ನೋಡಿ ನಾನು ತಲೆಚಚ್ಚಿಕೊಳ್ಳುವಂತಾಯಿತು. ಸುನೀಲ್ ಪಾಂಡೆಯ ಹತ್ತಿರ ಇದನ್ನು ಕೇಳಿದಾಗ ಆ ಆಸಾಮಿ ಎಂದ - "ಇದೆಲ್ಲ ನಡೀತದೆ".

ಪ್ರೇಮ್ ಕುಮಾರ್
ಸೀಪರೀ ಬಝಾರ್, ಪ್ರೇಮ್‌ಗಂಜ್, ಝಾಂಸಿ
ಕೃಪೆ : 'ಜನಸತ್ತಾ', ದೈನಿಕ 30.3.93

ಪ್ರಶ್ನೋತ್ತರ

- **ಇಂದು ದೇಶದಲ್ಲಿ ಸೆಕ್ಯುಲರಿಸಂ, ಜಾತ್ಯಾತೀತತೆ, ಪಂಥಾತೀತತೆ, ಸರ್ವ-ಧರ್ಮ ಸಮಭಾವ ಇತ್ಯಾದಿಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ನಿಮ್ಮ ಪಕ್ಷ ಇವುಗಳಲ್ಲಿ ಯಾವುದನ್ನು ಪ್ರತಿಪಾದಿಸುತ್ತದೆ? ಏಕೆ?**

ಇಂಗ್ಲಿಷ್ 'ಸೆಕ್ಯುಲರಿಸಂ' ಪದಕ್ಕೆ ಕನ್ನಡದಲ್ಲಿ 'ಜಾತ್ಯಾತೀತತೆ' ಎಂಬ ಪದ ಬಳಸುತ್ತೇವೆ. ಇದಕ್ಕೆ ವಿರುದ್ಧವಾಗಿ ಬಿಜೆಪಿ 'ಪಂಥಾತೀತತೆ' ಎಂಬ ಪದ ಬಳಸುತ್ತಿದೆ. ಏಕೆಂದರೆ ಅವರ ಪ್ರಕಾರ ಹಿಂದೂ ಧರ್ಮ ಮಾತ್ರವೇ ಧರ್ಮ, ಉಳಿದವೆಲ್ಲಾ ಕೇವಲ ಪಂಥಗಳು. ಅವರ ಪ್ರಕಾರ ಈ ಪಂಥಗಳು ರಾಜಕೀಯದಲ್ಲಿ ಮೂಗು ತೂರಿಸಬಾರದು. ಆದರೆ ಹಿಂದೂ ಧರ್ಮದ ವಿಷಯದಲ್ಲಿ ಮಾತ್ರ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಬಾರದು. ಇದು ಬಿಜೆಪಿಯ 'ಪಂಥಾತೀತತೆ'ಯ ಮರ್ಮ.

ಜಾತ್ಯಾತೀತತೆ ಎಂಬುದರ ನಿಜವಾದ ಅರ್ಥ ಧರ್ಮ ಪ್ರಭುತ್ವದಿಂದ ರಾಜಕೀಯದಿಂದ ಪ್ರತ್ಯೇಕವಾಗಬೇಕು. ಆದರೆ ಬಹಳಷ್ಟು ಬಂಡವಾಳಶಾಹಿ ಪಕ್ಷಗಳಿಗೆ ಇದು ರುಚಿಸುವುದಿಲ್ಲ. ಆದ್ದರಿಂದ ಜಾತ್ಯಾತೀತತೆಯನ್ನು 'ಸರ್ವಧರ್ಮ ಸಮಭಾವ' ಎಂದು ಅವರು ಕಾಣಬಯಸುತ್ತಾರೆ. ಇದರ ಅರ್ಥ ಎಲ್ಲಾ ಧರ್ಮಗಳ ಬಗ್ಗೆ ಆದರದ ಭಾವನೆ ಹಾಗೂ ಎಲ್ಲಾ ಧರ್ಮದವರೊಡನೆಯೂ ಸಮಾನ ವರ್ತನೆ. ಆದರೆ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಬೇಕೇ ಬೇಡವೇ ಎಂಬ ವಿಷಯದಲ್ಲಿ ಈ ಅರ್ಥ ಪ್ರತಿಪಾದಿಸುವರು ಸ್ಪಷ್ಟವಾಗಿ ಹೇಳುವುದಿಲ್ಲ.

ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಗೊಳಿಸುವುದು, ಧರ್ಮ ರಾಜಕೀಯದಲ್ಲಿ ಮೂಗು ತೂರಿಸಲು ಅವಕಾಶ ನೀಡದಿರುವುದೇ ಜಾತ್ಯಾತೀತತೆ ಎಂಬುದು ಸಿಪಿಐ(ಎಂ)ನ ಅಭಿಪ್ರಾಯ.

- **ಪೊಲಿಟ್‌ಬ್ಯೂರೋ ಡಿಸೆಂಬರ್ 7, 1992ರಂದು ನೀಡಿದ ಹೇಳಿಕೆಯಲ್ಲಿ ಬಾಬ್ರಿ ಮಸೀದಿ ಮೊದಲಿದ್ದ ಸ್ಥಳದಲ್ಲೇ ತಕ್ಷಣ ಮಸೀದಿ ಕಟ್ಟಿಸಿಕೊಡಬೇಕೆಂದು ಒತ್ತಾಯಿಸಿತ್ತು. ಆದರೆ ಡಿಸೆಂಬರ್ 15ರಂದು ನೀಡಿದ ಹೇಳಿಕೆಯಲ್ಲಿ ಸರಕಾರ, ಅಯೋಧ್ಯೆಯ ವಿವಾದಾಸ್ಪದ ಪ್ರದೇಶವನ್ನು ತನ್ನ ವಶಕ್ಕೆ ತಗೊಳ್ಳಬೇಕು, ಈ ಮೂಲಕ ಮುಂದೆ ಯಾವುದೇ ತುಂಟಾಟಕ್ಕೆ ಅವಕಾಶವಿರಬಾರದು ಎಂದಿತ್ತು. ಇದು ಒತ್ತಾಯವನ್ನು ತೆಳುಗೊಳಿಸದಂತಲ್ಲವೇ?**

ಪೊಲಿಟ್‌ಬ್ಯೂರೋದ ಈ ಎರಡು ಹೇಳಿಕೆಗಳಲ್ಲಿ ವೈರುಧ್ಯವಿದೆ ಎನ್ನುವುದು ಸರಿಯಲ್ಲ. 'ಸಂಘಪರಿವಾರ'ದ ಪಿತೂರಿಯನ್ನು ನೋಡಿದರೆ ಕೇಂದ್ರ ಸರಕಾರ ಇಡೀ ವಿವಾದಗ್ರಸ್ತ ಪ್ರದೇಶವನ್ನು ತನ್ನ ವಶಕ್ಕೆ ತಗೊಳ್ಳದಿದ್ದರೆ ಎಂತಹ ತುಂಟಾಟ ನಡೆಯಬಹುದೆಂದು ಹೇಳಲಸಾಧ್ಯ. ಸಿಪಿಐ(ಎಂ) ಎಲ್ಲಕ್ಕೂ ಮುಂಚೆ ಕೋಮು ದಳ್ಳುರಿ ಉಂಟಾಗದಂತೆ ಅದಕ್ಕೆ ನೀರು ಸುರಿಯುವುದೇ ಉಚಿತ ಎಂದು ಭಾವಿಸುತ್ತದೆ. ಆದ್ದರಿಂದಲೇ ಈ ಎರಡು ಹೇಳಿಕೆಗಳಲ್ಲಿ ತನ್ನ ನಿಲುವು ಸ್ಪಷ್ಟಪಡಿಸಿ, ತನ್ನ ಒತ್ತಾಯ ಇಟ್ಟಿದೆ. ಪಕ್ಷ ತನ್ನ ನಿಲುವನ್ನು ಬಿಟ್ಟುಕೊಟ್ಟಿದೆ ಎನ್ನುವ ಭಾವನೆಯುಂಟುಮಾಡುವ ಯಾವುದೇ ಹೇಳಿಕೆಯನ್ನು ಪೊಲಿಟ್‌ಬ್ಯೂರೋ ಕೊಟ್ಟಿಲ್ಲ. ●

ಗಾಂಧೀಜಿಯ ಕನಸು ಮತ್ತು ಗೋಲ್ವಾಲ್ಕರ್ ಸಂಸ್ಕೃತಿ "ಶುದ್ಧ"


"ನಾನು ಹುಡುಗನಾಗಿದ್ದಾಗ ರಾಜಕೀಯ ಎಂದರೇನೆಂದೇ ಗೊತ್ತಿರದಿದ್ದಾಗ ನಾನು ಹೃದಯಾಂತರಾಳದಿಂದ ಕೋಮು ಐಕ್ಯತೆಯ ಕನಸು ಕಾಣುತ್ತಿದ್ದೆ. ನನ್ನ ಜೀವನದ ಈ ಸಂಜೆಯ ಕಾಲದಲ್ಲೂ ನನ್ನ ಈ ಕನಸು ಈಡೇರಿದೆ ಎಂದನಿಸಿದರೆ ನಾನು ಮಗುವಿನಂತೆ ಕುಣಿದಾಡುತ್ತೇನೆ......... ಆಗಲೇ ನಮ್ಮಲ್ಲಿ ನಿಜವಾದ ಸ್ವರಾಜ್ಯ ಬರುತ್ತದೆ. ಆಗ ಕಾನೂನಿನ ದೃಷ್ಟಿಯಿಂದ ಭೌಗೋಳಿಕ ದೃಷ್ಟಿಯಿಂದ ನಾವು ಎರಡು ದೇಶಗಳಾಗಿದ್ದರೂ ದೈನಂದಿನ ಜೀವನದಲ್ಲಿ ನಾವು ಬೇರೆ-ಬೇರೆ ದೇಶ ಎಂದನಿಸುವುದಿಲ್ಲ...... ಇಂತಹ ಸ್ವರ್ಗದಲ್ಲಿ ಅದು ಈ ಭಾರತ ಸಂಘದಲ್ಲಿರಬಹುದು ಅಥವಾ ಪಾಕಿಸ್ತಾನದಲ್ಲಿರಬಹುದು - ಒಬ್ಬನೂ ಭಿಕ್ಷುಕನಾಗಿರುವುದಿಲ್ಲ, ಯಾರೂ ಮೇಲಲ್ಲ - ಕೀಳಲ್ಲ, ಕೋಟ್ಯಾಧೀಶ ಮಾಲಿಕರಿರುವುದಿಲ್ಲ, ಅರೆಹೊಟ್ಟೆಯ ನೌಕರರಿರುವುದಿಲ್ಲ...... ಮಹಿಳೆಯರಿಗೆ ಪುರುಷರಿಗೆ ದೊರೆಯುವ ಮರ್ಯಾದೆಯೇ ದೊರೆಯುತ್ತದೆ.... ಎಲ್ಲೂ ಅಸ್ಪೃಶ್ಯತೆಯಿರುವುದಿಲ್ಲ.... ಎಲ್ಲಾ ಧಾರ್ಮಿಕ ನಂಬಿಕೆಗಳಿಗೆ ಸಮಾನ ಆದರ ಸಿಗುತ್ತದೆ.... ನನ್ನ ಮಂಚದಲ್ಲಿ ಮಲಗಿಕೊಂಡು ಸೂರ್ಯನ ಬಿಸಿಲಲ್ಲಿ ಮೀಯುತ್ತಾ ಜೀವನದಾತ ಸೂರ್ಯನ ಬೆಳಕಲ್ಲಿ ಉಸಿರು ತೆಗೆದುಕೊಳ್ಳುತ್ತಾ ಈ ಸ್ವರ್ಗ ಸುಖದಲ್ಲಿ ಮೈ ಮರೆಯಬಯಸಿದರೆ ನನ್ನ ಈ ಮಾತನ್ನು ಕೇಳುವವರು ಅಥವಾ ಓದುವವರು ನನ್ನನ್ನು ಕ್ಷಮಿಸುತ್ತಾರೆ ಎಂದು ಆಶಿಸುತ್ತೇನೆ"

-ಹೀಗೆಂದಿದ್ದರು ಮಹಾತ್ಮಾ ಗಾಂಧಿ. ಕೋಮುಸೌಹಾರ್ದತೆಗಾಗಿ ಜನವರಿ 14, 1948ರಂದು ದಿಲ್ಲಿಯಲ್ಲಿ ಕೈಗೊಂಡ ತಮ್ಮ ಕೊನೆಯ ಉಪವಾಸದ ಪ್ರಾರ್ಥನಾ ಸಭೆಯಲ್ಲಿ.

ಹೀಗೆ ಉದ್ಗರಿಸಿದ 16 ದಿನಗಳಲ್ಲೇ, ಇದಕ್ಕೆ 10 ವರ್ಷದ ಹಿಂದೆ 1938ರಲ್ಲಿ "ತನ್ನ ಜನಾಂಗದ, ಸಂಸ್ಕೃತಿಯ ಶುದ್ಧತೆಯನ್ನು ಕಾಪಾಡಿಕೊಳ್ಳುವಲ್ಲಿ, ಜರ್ಮನಿ ಇಡೀ ಜಗತ್ತನ್ನು ಚಕಿತಗೊಳಿಸಿದೆ.... ಹಿಂದೂಸ್ಥಾನದಲ್ಲಿರುವ ನಮಗೂ ಇದೊಂದು ಒಳ್ಳೆಯ ಪಾಠ. ಇದರ ಪ್ರಯೋಜನ ಪಡೆಯಬೇಕು" ಎಂದು [illegible] ರನ ಪಡೆಗಳ ಬಗ್ಗೆ ಅಭಿಮಾನದಿಂದ [illegible] 'ಗುರು' ಗೋಲ್ವಾಲ್ಕರ್‌ರಿಂದ ಪ್ರೇರಿತ [illegible] ಬ್ಬನ ಗುಂಡಿಗೆ ಗಾಂಧೀಜಿ ಬಲಿಯಾದರು.

"ಮಲಗಿದ್ದವರ ಎಬ್ಬಿಸಿ ಕೂರಿಸಿದೆ,
ಕೂತಿದ್ದವರನ್ನು ನಿಲ್ಲಿಸುವವರು

ಯಾರೋ!"



ಅಂಬೇಡ್ಕರ್ ಅವರನ್ನು ಸ್ವತಂತ್ರ ಭಾರತದ ಹೊಸ ಪೀಳಿಗೆಗೆ, ಸಂವಿಧಾನದ ಕರ್ತೃ 'ಆಧುನಿಕ ಮನು' ಎಂದೆಲ್ಲಾ ಪರಿಚಯಿಸಲಾಗುತ್ತಿತ್ತು. ಆ ಮೂಲಕ ಅವರು ಭಾರತ ಸ್ವಾತಂತ್ರವಾಗುವ ಮೊದಲು ಮತ್ತು ಸ್ವತಂತ್ರ ಭಾರತದಲ್ಲಿ ವಹಿಸಿದ ವಿಶಿಷ್ಟ ರಾಜಕೀಯ ಪಾತ್ರವನ್ನು ಮರೆ ಮಾಚಲಾಗುತ್ತಿತ್ತು. 70ರ ದಶಕದಲ್ಲಿ ದೇಶದ ಹಲವೆಡೆ ಹುಟ್ಟಿಕೊಂಡ ದಲಿತ ಚಳುವಳಿಗಳು, ಸಂಘಟನೆಗಳು, ಪಕ್ಷಗಳು ಅಂಬೇಡ್ಕರ್‌ವಾದದ ಸ್ಫೂರ್ತಿಯಿಂದ ಹುಟ್ಟಿದವು. 90ರ ದಶಕದಲ್ಲಿ 'ಸಾಮಾಜಿಕ ನ್ಯಾಯ'ದ ಘೋಷಣೆ ರಾಜಕೀಯ ರಂಗದಲ್ಲಿ ಪ್ರವೇಶಿಸಿದಾಗಿನಿಂದ ಅವರ ವಿಚಾರಗಳು ಇನ್ನೂ ಹೆಚ್ಚು ಜನಜನಿತವಾಗುತ್ತಿದೆ. 1991 ಅಂಬೇಡ್ಕರ್ ಶತಮಾನೋತ್ಸವದ ಸಂದರ್ಭದಲ್ಲಿ ಅವರಿಗೆ ಯಾವಾಗಲೋ ಸಲ್ಲಬೇಕಾಗಿದ್ದ 'ಭಾರತ ರತ್ನ' ಸನ್ಮಾನ, ಪಾರ್ಲಿಮೆಂಟಿನಲ್ಲಿ ಅವರ ಚಿತ್ರ ಅನಾವರಣ ಇತ್ಯಾದಿ ಗೌರವ ಸಲ್ಲಿಸಲಾಯಿತು. ಅವರ 102ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಅಂಬೇಡ್ಕರ್‌ರ ಬದುಕು, ಅವರ ವಾದದ ಬೆಳವಣಿಗೆಯ ಚಾರಿತ್ರಿಕ ಸಂದರ್ಭ ಪ್ರಸ್ತುತತೆ ಬಗ್ಗೆ ಲೇಖನ.

ಡಾ. ಅಂಬೇಡ್ಕರ್‌ರವರ ಬದುಕು ಮತ್ತು ಹೋರಾಟ: ಒಂದು ವಿಮರ್ಶೆ

ಅಂಬೇಡ್ಕರ್ ಮಹಾರಾಷ್ಟ್ರದ ಕೊಂಕಣ ಪ್ರದೇಶದ ರತ್ನಗಿರಿ ಜಿಲ್ಲೆಯಲ್ಲಿ ಅಂಬಾವಾಡಿ ಎಂಬ ಹಳ್ಳಿಯಲ್ಲಿ 1891ರ ಏಪ್ರಿಲ್ 14ರಂದು ಹುಟ್ಟಿದರು. ಅವರ ತಂದೆ ರಾಮಜೀ ಸತಪಾಲ್ ಸೈನ್ಯದಲ್ಲಿ ಸುಬೇದಾರ್ ಆಗಿದ್ದವರು. ಸೈನ್ಯದಲ್ಲೇ ಶಿಕ್ಷಣ ಪಡೆದು ಅಲ್ಲೇ ಅಧ್ಯಾಪಕರು ಆಗಿದ್ದರು. ಅವರು ಜ್ಯೋತಿಬಾಫುಲೆ ಎಂಬ ಮಹಾರಾಷ್ಟ್ರದ ಪ್ರಸಿದ್ಧ ಸಾಮಾಜಿಕ ಸುಧಾರಕರ ಅಭಿಮಾನಿಗಳಾಗಿದ್ದವರು. ಅವರತ್ತ ಆಕರ್ಷಿತರಾಗಿದ್ದವರು. ಅಂಬೇಡ್ಕರ್ ಹುಟ್ಟಿದ ವರ್ಷವೇ 'ಸತ್ಯಶೋಧಕ ಚಳುವಳಿ' ಆರಂಭಿಸಿದ್ದ ಜ್ಯೋತಿ ಬಾಫುಲೆ ನಿಧನ ಹೊಂದಿದರು.

ರಾಮಜೀ ಸತ್‌ಪಾಲ್ ಬ್ರಿಟಿಷ್ ಆಡಳಿತದಲ್ಲಿ ಶಿಕ್ಷಣ ಪಡೆದು ಸೈನ್ಯ, ರೈಲ್ವೇ, ಮಿಲ್‌ಗಳು, ಬಂದರುಗಳಲ್ಲಿ ಉದ್ಯೋಗ ಪಡೆದ ಮೊದಲ ಪೀಳಿಗೆಯ ಹರಿಜನರಲ್ಲೊಬ್ಬರಾಗಿದ್ದರು. 19ನೇ ಶತಮಾನದ ಮೊದಲ ಭಾಗದಲ್ಲಿದ್ದ ಪೇಶ್ವಾ ಆಡಳಿತ ಸನಾತನ ಬ್ರಾಹ್ಮಣರ ಕ್ರೂರ ದಬ್ಬಾಳಿಕೆಯ ಕಾಲವಾಗಿತ್ತು. ಹಿಂದುಳಿದ ಜಾತಿಗಳಿಗೆ ಹಾಗೂ ಹರಿಜನರಿಗೆ ಅಮಾನುಷವಾದ ಆರ್ಥಿಕ ಶೋಷಣೆ ಹಾಗೂ ಸಾಮಾಜಿಕ ದಬ್ಬಾಳಿಕೆ ವಿಪರೀತವಾಗಿತ್ತು. ಇದಕ್ಕೆ ಹೋಲಿಸಿದರೆ ಬ್ರಿಟಿಷ್ ಆಡಳಿತದಲ್ಲಿ ಉಸಿರಾಡುವಂತಾಯಿತು. ಜ್ಯೋತಿಬಾ ಫುಲೆಯವರು ಆರಂಭಿಸಿದ 'ಸತ್ಯಶೋಧಕ ಚಳುವಳಿ' ಹಿಂದುಳಿದ ಜಾತಿಗಳು ಹಾಗೂ ಹರಿಜನರಲ್ಲಿ ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸುವ ಹೊಸ ಪ್ರಜ್ಞೆ ಮತ್ತು ಚೇತನ ತುಂಬಿತ್ತು. ಸತ್ಯಶೋಧಕ ಚಳುವಳಿ ಸಮಾಜದ ತೀವ್ರ ಪುನರ್ರಚನೆಗಾಗಿ ವರ್ಗ ಶೋಷಣೆ ವಿರುದ್ಧವೂ ಜನರನ್ನು ಸಂಘಟಿಸಿತು. ಈ ವಿಷಯದಲ್ಲಿ ಅದು ಆಗಿನ ಇತರ ಸಾಮಾಜಿಕ ಸುಧಾರಣಾ ಚಳುವಳಿಗಳಾದ ಪ್ರಾರ್ಥನಾ ಸಮಾಜ, ಆರ್ಯ ಸಮಾಜ, ಬ್ರಾಹ್ಮೋ ಸಮಾಜಗಳಿಗಿಂತ ಭಿನ್ನವಾಗಿತ್ತು. ಈ ಚಳುವಳಿಗಳು ಸಮಾಜದ ಸುಶಿಕ್ಷಿತ ಉಚ್ಚ ಜಾತಿ ಹಾಗೂ ಮಧ್ಯಮ ವರ್ಗಕ್ಕೆ ಸೀಮಿತವಾಗಿತ್ತು. ಆಗಿನ ರಾಷ್ಟ್ರೀಯ ಚಳುವಳಿ ಮುಖ್ಯವಾಗಿ ಕಾಂಗ್ರೆಸ್‌ನ ನಾಯಕತ್ವ ಎರಡೂ ಬ್ರಾಹ್ಮಣ ಅಥವಾ ಇತರ ಉಚ್ಚ ಜಾತಿಯಿಂದ ಬಂದದ್ದು. ಮಾತ್ರವಲ್ಲ, ವರ್ಣಾಶ್ರಮ ಧರ್ಮ, ಜಾತಿ ಪದ್ಧತಿಯಲ್ಲಿ ನಂಬಿಕೆ ಉಳ್ಳದ್ದಾಗಿತ್ತು. ಬ್ರಿಟಿಷರ ವಿರುದ್ಧ 'ಐಕ್ಯತೆ' ಸಾಮಾಜಿಕ ಸುಧಾರಣೆಗಿಂತ ಮುಖ್ಯವಾದದ್ದು ಎಂದು ಭಾವಿಸಿದ್ದವರು. ಅವರು ಅದರಲ್ಲೂ ತಿಲಕರ ನಾಯಕತ್ವದ ತೀವ್ರಗಾಮಿಗಳು ಹಿಂದುಳಿದ ಜಾತಿಗಳ ಹಾಗೂ ಹರಿಜನರ ಸಮಸ್ಯೆಯನ್ನು ಸಮಸ್ಯೆಯೆಂದೇ ಪರಿಗಣಿಸಿರಲಿಲ್ಲ. ಬ್ರಾಹ್ಮಣರ ಅಧಿಪತ್ಯ ಅವರಿಗೆ ವರ್ಣಾಶ್ರಮದ ಧರ್ಮದ ಪ್ರಕಾರ ಸ್ವಾಭಾವಿಕವೆನ್ನಿಸಿತ್ತು. ಇದರಿಂದಾಗಿ ಆಗ ತಾನೇ ಹುಟ್ಟಿ ಬರುತ್ತಿದ್ದ ಹಿಂದುಳಿದ ಜಾತಿಗಳು ಹಾಗೂ ಹರಿಜನರ ಚಳುವಳಿಯ ವಿಶ್ವಾಸವನ್ನು ಅವರು ಗಳಿಸಲಿಲ್ಲ. ಜ್ಯೋತಿಬಾಫುಲೆಯವರಂತೂ ಕಾಂಗ್ರೆಸ್‌ನ ನಾಯಕತ್ವವನ್ನು ತೀವ್ರವಾಗಿ ಟೀಕಿಸುತ್ತಿದ್ದರು. ಕಾಂಗ್ರೆಸ್‌ನವರು ಅವರನ್ನು ಬ್ರಿಟಿಷರ ಬಾಲಬಡುಕರೆಂದು ಹೀಯಾಳಿಸುತ್ತಿದ್ದರು. ಬ್ರಿಟಿಷರು ಈ ಭಿನ್ನಾಭಿಪ್ರಾಯವನ್ನು ಒಡೆದು ಆಳುವ ನೀತಿಯಾಗಿ ಬಳಸುವಲ್ಲಿ ಹಿಂದೆ ಬೀಳಲಿಲ್ಲ.

ಅಂಬೇಡ್ಕರ್ ಬಾಲ್ಯಾವಸ್ಥೆಯಲ್ಲಿ ಒಬ್ಬ ಹರಿಜನ ವಿದ್ಯಾರ್ಥಿಯಾಗಿ ಸತಾರಾ ಹಾಗೂ ಮುಂಬಯಿಯಲ್ಲಿ ಆಗ ಸಾಮಾನ್ಯವಾಗಿದ್ದ ತೀವ್ರ ಅಪಮಾನ, ಅಸಡ್ಡೆಗೆ ಗುರಿಯಾದರೂ ಈ ಕಹಿ ಅನುಭವ ಅವರ ದೃಷ್ಟಿಕೋಣ, ರಾಜಕೀಯ ನಿಲುವು ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಅವರ ಶಿಕ್ಷಣಕ್ಕೆ ಹಿಂದುಳಿದ ವರ್ಗದ ಚಳುವಳಿಯ ಹಲವು ನಾಯಕರು ಸಹಾಯ ಮಾಡಿದರು. 1970ರಲ್ಲಿ ಅಂಬೇಡ್ಕರ್ ಮೆಟ್ರಿಕ್ಯೂಲೇಶನ್ ಪಾಸ್ ಮಾಡಿದ್ದು ಆಗಿನ ಕಾಲದಲ್ಲಿ ದೊಡ್ಡ ಸುದ್ದಿಯಾಗಿತ್ತು. ಅವರಿಗೆ ವಿಶೇಷ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಮುಂದೆ ಓದಿಸಲು ಅವರ ತಂದೆಗೆ ಸಾಧ್ಯವಿರಲಿಲ್ಲ. ಹಿಂದುಳಿದ ವರ್ಗಗಳ ಚಳುವಳಿಯ ಹಲವು ನಾಯಕರು ಅಮೇರಿಕೆಯಲ್ಲಿ ಉಚ್ಚ ಶಿಕ್ಷಣ ಪಡೆಯಲು ಬರೋಡಾದ ರಾಜ ಗಾಯಕ್‌ವಾಡರ ಸಹಾಯ ಒದಗಿಸಿದರು.

ಶಿಕ್ಷಣ ಮುಗಿಸಿ ಬಂದ ಅಂಬೇಡ್ಕರ್ ತಮ್ಮ ಜನರಿಗೆ ಆಗುತ್ತಿರುವ ಅಪಮಾನ, ಅನ್ಯಾಯ ಹಾಗೂ ಕಾಂಗ್ರೆಸ್‌ನ ಉಚ್ಚ ಜಾತಿ ಹಿಂದೂ ನಾಯಕರ ಬಗ್ಗೆ ಕೋಪದಿಂದ ಕುದಿಯುತ್ತಿದ್ದರು. ಬರೋಡಾದ ರಾಜರ ಸಲಹೆಗಾರರಾಗಿ, ಅಧ್ಯಾಪಕರಾಗಿ ಕೆಲ ಕಾಲ ದುಡಿದರು. ಈ ನಡುವೆ ಅವರು ಇಂಗ್ಲೆಂಡಿಗೆ ಹೋಗಿ ಕಾನೂನು ಪದವಿ ಹಾಗೂ ಬ್ಯಾರಿಸ್ಟರ್‌ಗಿರಿ ಸಹ ಪಡೆದರು. ಆದರೆ ಅವರನ್ನು ರಾಜಕೀಯ ಕರೆಯುತ್ತಿತ್ತು. ಈ ಅವಧಿಯಲ್ಲಿ 'ಸತ್ಯಶೋಧಕ' ಚಳುವಳಿಯ ನಾಯಕತ್ವ ವಹಿಸಿದ್ದ ಕೊಲ್ಹಾಪುರದ ಸಾಹೂ ಮಹಾರಾಜರ ಪರಿಚಯವಾಗಿ, ಅವರ ಬೆಂಬಲದಿಂದ ಅವರು ಚಳುವಳಿಗೆ ಧುಮುಕಿದರು. 1920ರ ಅಖಿಲ ಭಾರತ ನಿಮ್ನ ವರ್ಗದ ಸಮ್ಮೇಳನದಲ್ಲಿ ಪ್ರಮುಖ ಪಾತ್ರ ವಹಿಸಿದರು. 'ಮೂಕ - ನಾಯಕ್' ಎಂಬ ಪತ್ರಿಕೆಯನ್ನು ಆರಂಭಿಸಿದರು. ಅವರು 1919ರಲ್ಲಿ ಸೌತ್‌ಬೋರೋ ಸಮಿತಿಯ ಮುಂದೆ ನೀಡಿದ ಸಾಕ್ಷ್ಯ ಅವರು ಹರಿಜನರ ಪರವಾಗಿ ಬರೆದ ಮೊದಲ ರಾಜಕೀಯ ಹೇಳಿಕೆ. ಆ ಹೇಳಿಕೆಯಲ್ಲಿ ಅವರು ಹರಿಜನರಿಗೆ ಮಾತ್ರ ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿರಬೇಕು ಎಂದು ವಾದಿಸಿದ್ದರು. ಮುಸ್ಲಿಮರಿಗೆ ಪ್ರತ್ಯೇಕ ಮತ ಕ್ಷೇತ್ರ ಒಪ್ಪಿಕೊಂಡು, ಹರಿಜನರಿಗೆ ಅದನ್ನು ನಿರಾಕರಿಸಿದ ಕಾಂಗ್ರೆಸ್ಸನ್ನು ಬಲವಾಗಿ ಟೀಕಿಸಿದ್ದರು.

ಅಂಬೇಡ್ಕರ್ ಮತ್ತು ಗಾಂಧಿ

1923ರಲ್ಲಿ ಇಂಗ್ಲೆಂಡಿನಿಂದ ವಾಪಸು ಬಂದು ದೊಡ್ಡ ಪ್ರಮಾಣದಲ್ಲಿ ರಾಜಕೀಯ, ಸಾಮಾಜಿಕ ಸುಧಾರಣಾ ಚಟುವಟಿಕೆಗಳನ್ನು ಆರಂಭಿಸುವ ಹೊತ್ತಿಗೆ ಗಾಂಧಿ ಕಾಂಗ್ರೆಸ್ಸಿನ ಮಾತ್ರವಲ್ಲ, ದೇಶದ ರಾಷ್ಟ್ರೀಯ ಚಳುವಳಿಯ ವಿವಾದಾತೀತ ನಾಯಕರಾಗಿದ್ದರು. ಕಾಂಗ್ರೆಸ್‌ನ ಹಾಗೂ ರಾಷ್ಟ್ರೀಯ ಚಳುವಳಿಯ ನೆಲೆ ವಿಶಾಲವಾಗಿತ್ತು. ರೈತಾಪಿ ಜನ ದೊಡ್ಡ ಪ್ರಮಾಣದಲ್ಲಿ ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಲಾರಂಭಿಸಿದ್ದರು. ಕ್ರಮೇಣ 1930ರ ಹೊತ್ತಿಗೆ ಅಬ್ರಾಹ್ಮಣ ಚಳುವಳಿಯ ನಾಯಕತ್ವ ಕಾಂಗ್ರೆಸ್‌ಗೆ ಸೇರಿತ್ತು. ಅಸ್ಪೃಶ್ಯತಾ-ನಿವಾರಣಾ ಚಳುವಳಿಗೆ ಗಾಂಧೀಜಿ ಬಹಳ ಮಹತ್ವ ನೀಡುತ್ತಿದ್ದರು. ಆದರೂ ಹಿಂದೂ ಶಾಸ್ತ್ರಗಳು, ವರ್ಣಾಶ್ರಮ ಧರ್ಮವನ್ನು ಒಪ್ಪಿಕೊಳ್ಳುತ್ತಿದ್ದರು. ಇದನ್ನು ಫುಲೆಯವರ ಚಳುವಳಿಯಿಂದ ಪ್ರಭಾವಿತರಾದ ಹರಿಜನ ಜನತೆ ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಹರಿಜನರ ಈ ಪ್ರತಿಭಟನೆಯ ಪ್ರಜ್ಞೆಗೆ ಅಂಬೇಡ್ಕರ್ ದನಿಯಾದರು. ದೊಡ್ಡ ಪ್ರಮಾಣದಲ್ಲಿ ಹರಿಜನರನ್ನು ಸಂಘಟಿಸಿ ಚಳುವಳಿ ಆರಂಭಿಸಿದರು. ಮಹಾಡ್‌ನಲ್ಲಿ 1927ರಲ್ಲಿ ಸಾರ್ವಜನಿಕ ಕೆರೆ, ಬಾವಿಗಳಿಂದ ಹರಿಜನರಿಗೆ ನೀರು ತೆಗೆದುಕೊಳ್ಳುವ ಹಕ್ಕಿನ ಚಳುವಳಿ ಹಾಗೂ 1930ರ ನಾಸಿಕ್‌ನ ದೇವಾಲಯ ಪ್ರವೇಶ ಚಳುವಳಿ ಇವುಗಳಲ್ಲಿ ಪ್ರಮುಖ ಮೈಲಿಗಲ್ಲುಗಳು. ಈ ಚಳುವಳಿಯ ಕಾಲದಲ್ಲಿ ಆದ ಕಹಿ ಅನುಭವಗಳಿಂದಾಗಿ ಅಂಬೇಡ್ಕರ್ ಹಿಂದೂ ಧರ್ಮವನ್ನು ಸುಧಾರಣೆ ಮೂಲಕ ಬದಲಿಸಬಹುದು ಎಂಬ ಧೋರಣೆ ಬಿಟ್ಟಿದ್ದರು. ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಅಂಟಿದ ಕಳಂಕ. ಅದನ್ನು ನಿವಾರಿಸಬಹುದು ಎಂದ ಗಾಂಧೀಜಿಯ ನಿಲುವನ್ನು ಬಲವಾಗಿ ಟೀಕಿಸತೊಡಗಿದರು.

ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಬರೆದ ಲೇಖನಕ್ಕೆ ಉತ್ತರವಾಗಿ ಅಂಬೇಡ್ಕರ್ ಬರೆದ ಲೇಖನ, ಆ ಮೇಲೆ ತೀವ್ರ ಬಹಿರಂಗ ಚರ್ಚೆಗೆ ಕಾರಣವಾಯಿತು. ಆಗ ಗಾಂಧೀಜಿ ಜತೆ ಈ ರೀತಿ ಬಹಿರಂಗ ಚರ್ಚೆಗೆ ಇಳಿಯುವ ಅಖಿಲ ಭಾರತ ನಾಯಕರು ಬೆರಳೆಣಿಕೆಯಷ್ಟಿದ್ದರು. ಶಾಸ್ತ್ರಗಳು ಮತ್ತು ವರ್ಣಾಶ್ರಮ ಧರ್ಮವನ್ನು ತಿರಸ್ಕರಿಸಿದರೆ ಮಾತ್ರ ಹಿಂದೂ ಧರ್ಮವನ್ನು ಸುಧಾರಿಸುವುದು ಸಾಧ್ಯ ಎಂಬುದು ಅಂಬೇಡ್ಕರ್ ಅವರ ದೃಢ ನಿಲುವಾಗಿತ್ತು.

ಇನ್ನೂ ಹಲವು ಸಂದರ್ಭಗಳಲ್ಲಿ ಅಂಬೇಡ್ಕರ್ ಗಾಂಧೀಜಿ ಹಾಗೂ ಕಾಂಗ್ರೆಸ್ಸನ್ನು ಎದುರಿಸಿ ವಿರೋಧಿಸಿದರು. 1927ರಲ್ಲಿ ಸೈಮನ್ ಕಮಿಷನ್‌ನ್ನು ಎಡಪಕ್ಷಗಳೂ ಸೇರಿದಂತೆ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಚಳುವಳಿ ಬಹಿಷ್ಕರಿಸಿದಾಗ ಅಂಬೇಡ್ಕರ್ ಅದನ್ನು ವಿರೋಧಿಸಿದರು. ಕಾಂಗ್ರೆಸ್ ಸಹ ಮುಸ್ಲಿಂ ಲೀಗ್‌ನ್ನು ಮುಸ್ಲಿಮರ ರಾಜಕೀಯ ಪಕ್ಷವಾಗಿ ಸ್ವೀಕರಿಸಲು ಸಿದ್ಧವಿತ್ತು. ಆದರೆ ಅಂಬೇಡ್ಕರ್ ನಾಯಕತ್ವದ ಚಳುವಳಿ, ಸಂಘಟನೆಯನ್ನು ಹರಿಜನರ ಅಧಿಕೃತ ಪ್ರತಿನಿಧಿಯಾಗಿ ಒಪ್ಪಲು ಸಿದ್ಧವಿರಲಿಲ್ಲ. 1928ರಲ್ಲಿ ಸಂವಿಧಾನ ರಚಿಸುವ ಸಲುವಾಗಿ ಕಾಂಗ್ರೆಸ್ ಕರೆದ ಸರ್ವ ಪಕ್ಷಗಳ ಸಭೆಗೆ ಅಂಬೇಡ್ಕರ್‌ಗೆ ಆಹ್ವಾನವಿರಲಿಲ್ಲ. ಇದರಿಂದಾಗಿ ಅಂಬೇಡ್ಕರ್ ನಾಯಕತ್ವದ ಜಾತಿ-ವಿರೋಧಿ ಅಸ್ಪೃಶ್ಯ-ವಿರೋದಿ ಚಳುವಳಿಗೂ, ಕಾಂಗ್ರೆಸ್ ನಾಯಕತ್ವದ ರಾಷ್ಟ್ರೀಯ ಚಳುವಳಿಗೂ ಕಂದಕ ಹೆಚ್ಚುತ್ತಾ ಹೋಯಿತು. ಇದಕ್ಕೆ ಅಂಬೇಡ್ಕರ್‌ಗಿಂತ ಕಾಂಗ್ರೆಸ್‌ನ ಧೋರಣೆ ಹೆಚ್ಚು ಕಾರಣವಾಗಿತ್ತು.

ರಾಷ್ಟ್ರೀಯ ಚಳುವಳಿಗೂ, ಅಂಬೇಡ್ಕರ್ ಚಳುವಳಿಗೂ ಈ ಭಿನ್ನಾಭಿಪ್ರಾಯಗಳನ್ನು ಬ್ರಿಟಿಷರು ಬಳಸಿಕೊಂಡರು ಎಂಬುದು ನಿಜ. ಆದರೆ ಕೆಲವರು ಹೇಳುವಂತೆ ಅಂಬೇಡ್ಕರ್ ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗಿ ಬ್ರಿಟಿಷರ ಬಾಲಬಡುಕರಾಗಿ ಎಂದೂ ವರ್ತಿಸಲಿಲ್ಲ. ಬ್ರಿಟಿಷರ ಆಡಳಿತ ಕೊನೆಗೊಳ್ಳಬೇಕು, ಭಾರತೀಯರ ಆಡಳಿತ ಬರಬೇಕು ಎಂಬುದು ಅವರ ದೃಢ ನಿಲುವಾಗಿತ್ತು. ಸ್ವಾತಂತ್ರ್ಯ ನಂತರದ ರಾಜಕೀಯ ರೂಪರೇಷೆ ಹೇಗಿರಬೇಕು ಎಂಬ ಬಗ್ಗೆ ಅವರಿಗೆ ಕಾಂಗ್ರೆಸ್ ಜತೆ ತೀವ್ರ ಭಿನ್ನಾಭಿಪ್ರಾಯವಿತ್ತು. ಕಾಂಗ್ರೆಸ್ ಎಲ್ಲಾ ಜನರ ಪ್ರತಿನಿಧಿ ಎಂಬುದನ್ನು ಅವರು ಒಪ್ಪಲಿಲ್ಲ. ಅಷ್ಟೇ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಪರ ನಿಲುವು ಅವರು ಕೊಂಡಿದ್ದರು 1930ರ ದುಂಡು ಮೇಜಿನ ಪರಿಷತ್ತಿನಲ್ಲಿ ಮಾಡಿದ ಭಾಷಣದ ತುಣುಕುಗಳೇ ಇದಕ್ಕೆ ಸಾಕ್ಷಿ (ಬಾಕ್ಸ್ ನೋಡಿ).

ನಿಮ್ನ ವರ್ಗಗಳ ಸಮಸ್ಯೆಯನ್ನು ಒಟ್ಟಾರೆ ರಾಜಕೀಯ ಒಪ್ಪಂದದ ಭಾಗವಾಗಿ ಮಾತ್ರ ಪರಿಹರಿಸಲು ಸಾಧ್ಯ ಎಂದು ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದರು.

ಪೂನಾ ಒಪ್ಪಂದ

ಅಂಬೇಡ್ಕರ್ ಇನ್ನೊಂದು ಬಾರಿ ಗಾಂಧೀಜಿ ಜತೆ ನೇರ ಘರ್ಷಣೆಗೆ ಇಳಿಯಬೇಕಾಯಿತು. ಇದು 1932ರಲ್ಲಿ ಬ್ರಿಟಿಷ್ ಸರಕಾರ ನೀಡಿದ ಕಮ್ಯುನಲ್ ಅವಾರ್ಡ್ ಬಗ್ಗೆ. ಇದರ ಪ್ರಕಾರ ಎಲ್ಲಾ ಧಾರ್ಮಿಕ ಅಲ್ಪಸಂಖ್ಯಾತರಿಗೂ, ನಿಮ್ನ ವರ್ಗಗಳವರಿಗೂ ಪ್ರತ್ಯೇಕ ಮತ ಕ್ಷೇತ್ರಗಳ ಮೂಲಕ ಪ್ರಾತಿನಿಧ್ಯ ಕೊಡಲಾಗಿತ್ತು.

ಮುಸ್ಲಿಮರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ಒಪ್ಪಿದ್ದ ಗಾಂಧೀಜಿ ನಿಮ್ನ ವರ್ಗಗಳಿಗೆ ಅದನ್ನು ಕೊಡುವುದನ್ನು 'ಅಸ್ಪೃಶ್ಯತೆ'ಯನ್ನು ಶಾಶ್ವತಗೊಳಿಸುವ ಕ್ರಮ ಎಂದು ಕರೆದು ವಿರೋಧಿಸಿದರು. ಅದರ ವಿರುದ್ಧ ಆಮರಣಾಂತ ಉಪವಾಸ ಹೂಡಿದರು. ಆ ಮೇಲೆ ಗಾಂಧೀ-ಅಂಬೇಡ್ಕರ್ ನಡುವೆ ಆದ ಪ್ರಸಿದ್ಧ ಪೂನಾ ಒಪ್ಪಂದದ ಮೇರೆಗೆ ಉಪವಾಸ ವಾಪಸು ತೆಗೆದುಕೊಂಡರು. ಇದರ ಪ್ರಕಾರ ಪ್ರತ್ಯೇಕ 71 ಮತ ಕ್ಷೇತ್ರಗಳನ್ನು ನಿಮ್ನ ವರ್ಗದವರಿಗೆ ಕೊಡದೆ ಅದರ ಬದಲು 151 ಜಂಟಿ ಮತಕ್ಷೇತ್ರಗಳಲ್ಲಿ ಮೀಸಲಾತಿ ನೀಡಲಾಯಿತು.

ಇದೇ ರೀತಿ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲೂ ಗಾಂಧೀ ಜತೆ ಅಂಬೇಡ್ಕರ್ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರು. ಭಾರತ ಒಕ್ಕೂಟದಲ್ಲಿ ರಾಜರ ಆಡಳಿತದಲ್ಲಿದ್ದ ರಾಜ್ಯಗಳಿಂದ ರಾಜರುಗಳ ಪ್ರತಿನಿಧಿಗಳನ್ನು ನೇಮಿಸಬಹುದು. ಹಾಗೂ ಅವರಿಗೆ ಈ ರಾಜ್ಯಗಳು ಭಾರತದಲ್ಲಿರಬೇಕೆ ಇಲ್ಲವೇ ಎಂಬ ಅಧಿಕಾರವಿರುತ್ತದೆ ಎಂಬ ಅಂಶವನ್ನು ಅಂಬೇಡ್ಕರ್ ವಿರೋಧಿಸಿದರು. ಆದರೆ ಗಾಂಧೀಜಿ ಒಪ್ಪಿದ್ದರು. ಪ್ರಾಂತ್ಯ ವಿಧಾನಸಭೆಗಳಲ್ಲಿ ಕೈಗಾರಿಕೋದ್ಯಮಿಗಳಿಗೆ, ಭೂ ಮಾಲಕರಿಗೆ ವಿಶೇಷ ಪ್ರಾತಿನಿಧ್ಯದ ಅಂಶವನ್ನು ಅಂಬೇಡ್ಕರ್ ವಿರೋಧಿಸಿದರು.

ಭಾರತದ ಬೂರ್ಜ್ವಾ ವರ್ಗ ಸ್ವಂತದ ಹಿತಾಸಕ್ತಿಗಳಿಗಾಗಿಯೇ ಸಾಮ್ರಾಜ್ಯಶಾಹಿ- ವಿರೋಧಿ ಪಾತ್ರ ವಹಿಸಬೇಕಾಗಿ ಬಂದಿತ್ತು. ಅವರಲ್ಲಿ ಅದು ಭಾರತದ ಎಲ್ಲಾ ವರ್ಗಗಳ ಜನರನ್ನು ಆಣಿನೆರೆಸಿ ಹೋರಾಡುತ್ತಾ ಒಮ್ಮೆ ಹೋರಾಟ, ಮಧ್ಯೆ ಸಾಧ್ಯವಿದ್ದರೆ ರಾಜಿ, ಆ ಮೇಲೆ ಮತ್ತೆ ಹೋರಾಟ ಎಂಬಂತಹ ಹೋರಾಟ-ರಾಜಿ-ಹೋರಾಟ ನೀತಿ ಅನುಸರಿಸುತ್ತಿತ್ತು. ಹೋರಾಟವನ್ನು ರಾಜಿಗೆ ಅನುಕೂಲವಾಗುವಂತೆ ಬಳಸಿತ್ತು. ಅದೇ ರೀತಿ ಅದು ಬಂಡವಾಳಶಾಹಿಪೂರ್ವ ಪಾಳೆಯಗಾರಿ ಶಕ್ತಿಗಳ ಜತೆಗೂ ರಾಜಿಯ ನೀತಿ ಅನುಸರಿಸಿತು. ಭಾರತದ ಪಾಳೆಯಗಾರಿ ಪದ್ಧತಿಯ ಮುಖ್ಯ ಅಂಶವಾದ ಜಾತಿಪದ್ಧತಿ-ಅಸ್ಪೃಶ್ಯತೆಯ ನಿರ್ಮೂಲನಕ್ಕೆ ಹೋರಾಟದ ಬದಲು, ಅಲ್ಪ ಸ್ವಲ್ಪ ಸುಧಾರಣೆ ಜತೆ ಅದನ್ನು ಉಳಿಸಿಕೊಳ್ಳಲು ರಾಜಿ ಮಾಡಿಕೊಂಡರು. ಇದು ಸ್ವಾಭಾವಿಕವಾಗಿಯೇ ತುಳಿತಕ್ಕೊಳಗಾದ ಜಾತಿಯಿಂದ ಬಂದ ಅಂಬೇಡ್ಕರ್‌ರಿಗೆ ಸಹಿಸಲು ಸಾಧ್ಯವಾಗಲಿಲ್ಲ. ಅದರ ವಿರುದ್ಧ ಬಂಡೆದ್ದರು.

ಅಂಬೇಡ್ಕರ್ ಮತ್ತು ಕಮ್ಯುನಿಸ್ಟರು

ಕಾಂಗ್ರೆಸ್ ನಾಯಕತ್ವದ ಸ್ವರೂಪದಿಂದಾಗಿ ಅದರ ಬಗ್ಗೆ ಅವಿಶ್ವಾಸ ತೋರುವುದು ಸ್ವಾಭಾವಿಕವೇ. ಆದರೆ ಕಮ್ಯುನಿಸ್ಟರು ಮತ್ತು ಸೋಶಲಿಸ್ಟರು ಅಂಬೇಡ್ಕರ್‌ಗೆ ಸ್ವಾಭಾವಿಕ ಸಹಚರರಾಗಬೇಕಿತ್ತು. ಆದರೆ ಅದು ಆಗಲಿಲ್ಲ- ಹಲವು ಕಾರಣಗಳಿಂದಾಗಿ.

20ರ ದಶಕದ ಕೊನೆಯಲ್ಲಿ ಬೇರೂರಲು ಆರಂಭಿಸಿದ ಸಮಾಜವಾದಿ ಸಿದ್ಧಾಂತ ಜಾತಿ ಸಮಸ್ಯೆ ಹಾಗೂ ಅಸ್ಪೃಶ್ಯತೆಯನ್ನು ಹೊಸದೃಷ್ಟಿಯಿಂದ ನೋಡ

ಅಂಬೇಡ್ಕರ್ ಮತ್ತು ನನ್ನೂರ ಕೊರಗನ ಆನೆಕಾಲು

ಅಂಬೇಡ್ಕರ್ ಬಗ್ಗೆ ಮಾತಾಡುವಾಗಲೆಲ್ಲ
ಕಣ್ಮುಂದೆ ನಿಲ್ಲುತ್ತಾನೆ ನನ್ನೂರ ರಥಬೀದಿಯ ಕೊರಗ.

ಸಪ್ತೋತ್ಸವ ಲಕ್ಷದೀಪಗಳ ವೇಳೆ ನಮ್ಮ ಆಸ್ತಿ ಮಹಾಶಯರು
ಕೊರಗನಿಗೆ ಕೆಲಸ ಕೊಡುತ್ತಲೇ ಬಂದಿದ್ದಾರೆ-
ತಿಂಡಿಪೊಟ್ಟಣ ಹಣ್ಣಿನ ಸಿಪ್ಪೆ ಕಸಕಡ್ಡಿಯ ಮೂಲಕ.
ಸಂಪಾದಿಸುತ್ತಲೇ ಬಂದಿದ್ದಾರೆ ಒಂದು ಎರಡರ ಮೂಲಕ.

ಕಸಬಾಚಿ ಭಾರಹೊತ್ತ ಕೊರಗ ನನ್ನ ಕಣ್ಣ ಮುಂದೇ
ಬಾಗು ಬೆನ್ನಾಗಿದ್ದಾನೆ. ಆನೆ ಕಾಲಿನ ಹೆಜ್ಜೆ ದಪ್ ದಪ್ಪ್ ಅಂತ
ರಥಬೀದಿಯುಲ್ಲಿ ಬಿದ್ದರೂ ಗುರುತು ಮೂಡಿಲ್ಲ--
ನನ್ನೆದೆ ಮೇಲೆ ಹೆಜ್ಜೆ ಪೆಟ್ಟು ಬಿದ್ದಂತೆ
ಏಕೆಂದರೆ : ನನಗೆ ಅಂಬೇಡ್ಕರ್ ಗೊತ್ತು

ಕೃತಕ ವಿದ್ಯುತ್ತಿನಲಂಕಾರ ಹೊತ್ತು ಬ್ರಹ್ಮರಥ ಭವ್ಯಗಂಭೀರ
ಸಾಗಿ ಬರುತ್ತಿದೆ. ಗಾಲಿ ಚೀತ್ಕರಿಸುತ್ತಿದೆ ನೆಲದ ನೋವಿಗೆ.
ಮಿಣೆ ಹಿಡಿದ ಭಕ್ತವೃಂದ ಗೋವಿಂದಾ, ಅನ್ನುತ್ತಿದೆ.
ತಟ್ಟಿರಾಯರ ನಡುವೆ ಭೂಮಿಗಿಳಿದ ಭಗವಂತರಂತೆ
ಹತ್ತೂ ದಿಕ್ಕು ಕೃಪಾಕಟಾಕ್ಷ ಬಾರುವ ಕಾವಿಗಳು
ಮರಿಕಾಮಿಗಳ ಸಾಲು. ವೇದಘೋಷ. ವಾದ್ಯದಬ್ಬರ
ಪಟಾಕಿ ದುರುಸು ಓಲಾಲು. ಮಂಗಳಾರತಿ.

ತಿರುವಿನಲ್ಲಿ ಗಕ್ಕನೆ ನಿಲ್ಲುವ ರಥಕ್ಕೆ ಆನೆ,
ಕಾಲಲ್ಲಿ ಒದೆಯುತ್ತಲೇ ಮತ್ತೆ ಚಲಿಸಲು ಶುರು.
ನಗರಸಭೆ ಟೆಂಟಿನಲ್ಲಿ 'ನಿಮ್ಮ ಬೀದಿಗಳನ್ನ
ಮನೆಯರಿತೆಯೇ ಶುಚಿಯಾಗಿಡಿ' ಪೋಸ್ಟರು.
ಕೆಳಗೆ ತನ್ನ ಸಂಗಾತಿ ಪೊರಕೆ ಹೆಡಿಗೆಗಳಿಗಾತು
ಕುಕ್ಕರಿಸಿದ್ದ ಕೊರಗ. ಅವರ ಮಡಿಚಲಾಗದ
ಆನೆಕಾಲು ರಭಸದಿಂದಪ್ಪಳಿಸಿದಂತಾಗಿ ನೆಲಕಚ್ಚಿದೆ.

ಕಣ್ಣು ತೆರೆದಾಗ ಬೀದಿಯಲ್ಲಿ ರಥವಿಲ್ಲ ಜನವಿಲ್ಲ-
ಶುಚಿಯೋ ಶುಚಿ. ಪೊರಕೆ ಹೆಡಿಗೆಗಳಿಲ್ಲ ಕೊರಗನ ಕೈಲಿ-
ಅಂಕುಶವಿದೆ. ಆನೆ ರೋಗ ಇಲ್ಲ ಕಾಲಲ್ಲಿ-
ಒಂದು ಎರಡು ಬಾಚಿಸಿ ಗೋವಿಂದ ಅಂದವರ
ಮೈ ತೊಗಲ ಎಕ್ಕಡವಿದೆ. ಅಂಬೇಡ್ಕರ ಬಗ್ಗೆ ಕೊರೆಯುತ್ತ
ಕಳ್ಳೆಪುರಿ ತಿನ್ನುತ್ತಿದ್ದ ದಲಿತೋದ್ಧಾರ ನಂಜುತ್ತಿದ್ದ
ಮಾತಿನ ಮಲ್ಲರೆಲ್ಲ ಪಿಡ್ಡಕ್ಕೆ ಬಿದ್ದಿದ್ದಾರೆ. ಉಡುಪಿಯ
ಮೃಗಾಲಯಕ್ಕೆ ಬರುವ ಯಾತ್ರಿಕರು ಈ ಜಂತುಗಳಿಗೆ
ಬಾಳೆಹಣ್ಣಿನ ಸಿಪ್ಪೆ ಎಳೆನೀರ ಕರಟ ಎಸೆಯುತ್ತಿದ್ದಾರೆ.
ನನಗೀಗ ಅಂಬೇಡ್ಕರ್ ಅರ್ಥವಾಗುತ್ತಿದೆ. ಬೀದಿಗಿಳಿದು
ಈ ಮಜಾ ನೋಡುತ್ತಾ ನಿಂತಿರಬೇಕೆಂಬಷ್ಟರಲ್ಲಿ
ಪೇಪರಿನ ಹುಡುಗ ಬಾಗಿಲು ಬಡಿದು ಎಬ್ಬಿಸಿದ.
ಮುಖಪುಟದಲ್ಲೇ 'ಪುದುಚೇರಿಯಲ್ಲಿ 15,000 ಹರಿಜನರ
ಮತಾಂತರ', 'ಪೇಜಾವರ ಸ್ವಾಮಿಗಳಿಂದ ಹರಿಜನೋದ್ಧಾರ
ಕ್ಕಾಗಿ ಕರೆ - ಮೀನಾಕ್ಷಿಪುರಂ ಹರಿಜನಕೇರಿಯ ದತ್ತು ಸ್ವೀಕಾರ'
ನಮ್ಮೂರಿನ ಬೀದಿಯಲ್ಲಿ, ಓಗೆ ಕರೆ ನೀಡಿದವರ
ಓದದೂ ಮುಂದು ಮಂತ್ರಘೋಷ ಮಾಡುವವರಿಗೆ
ಹೆದರಿ ಆನೆರೋಗದ ಕೊರಗ ದಪ್ಪ ದಪ್ಪಾಂತ
ಹೆಜ್ಜೆ ಎಳೆಯುತ್ತಾ ಫರ್ಲಾಂಗು ದೂರ ಓಡುತ್ತಿರುವುದು
ನನಗಂತೂ ತುಂಬ ಕಿರಕಿರಿಯುಂಟುಮಾಡಿದೆ.
ಹಾಗಾಗಿ ಈಗೀಗ ಅಂಬೇಡ್ಕರ್ ಬಗ್ಗೆ ವಿಚಾರ ಮಾಡುವಾಗೆಲ್ಲ
ಮನಸ್ಸಿನ ತುಂಬ ಬಾಚಿಕೊಳ್ಳುತ್ತದೆ ಕೊರಗನ ಆನೆ ಕಾಲು

— ಆರ್ಯ, ಮಣಿಪಾಲ

ಕೃಪೆ : ಬಂಡಾಯ ಕಾವ್ಯ

ದುಂಡು ಮೇಜು ಪರಿಷತ್ತಿ(193…

"ಈ ನೌಕರಶಾಹಿ ರೂಪದ ಭಾರತ ಸರಕಾರವನ್ನು ಬದ… ಕಾರ ಬರಬೇಕು. ಇದು ನಿಮ್ನ ವರ್ಗಗಳ ಅಭಿಪ್ರಾಯ. ಇದರಿ…
…………ನಮ್ಮ ಈಗಿನ ಪರಿಸ್ಥಿತಿಯನ್ನು ಬ್ರಿಟಿಷರ ಮೊ… ರೆಯುವ ಬದಲು ನಿಂತಲ್ಲೇ ನಿಂತು ಕಾಯುತ್ತಿದ್ದೇವೆ ಎನಿಸು… ಸರಕಾರ ಅಸ್ಪೃಶ್ಯತೆ ನಿವಾರಿಸಲು ಏನಾದರೂ ಮಾಡಿದೆಯೇ?… ಈಗ ನಾವು ದೇವಾಲಯಕ್ಕೆ ಹೋಗಬಹುದೇ? ಹಿಂದೆ ಪ್ರೋ… ರಲಿಲ್ಲ. ಈಗ ಸೇರಿಸಿಕೊಳ್ಳುತ್ತಿದ್ದಾರೆಯೇ?…………ನಿ… ಸಾಮಾಜಿಕ ವ್ಯವಸ್ಥೆ ಹೇಗಿತ್ತೋ ಹಾಗೆ ಅದನ್ನು ಬದಲಾಯಿಸ…
………… ನ್ಯಾಯ ಹಾಗೂ ಇಂದಿನ ಕಾಲದ ಅವ… ಬದಲಾಯಿಸುವ ಜನರ ಸರಕಾರ ನಮಗೆ ಬೇಕಾಗಿದೆ. ಆ ಪ… ರದು. ಇದನ್ನು ಭಾರತದ ಜನರ…

ಜಾತಿ ಕೋಮುಗಳಿಗೆ ಸೇರಿದ
ಮಾನ ಹಿತಾಸಕ್ತಿಗಳ ಆಧಾರದ
ಹೋರಾಟವನ್ನು ಅವಲಂಬಿಸಿ
ರಡೆ, ಅಸ್ಪೃಷ್ಯರು ಹಾಗೂ ನಿಮ್ನ
ಪಾಲು(ಶೇಕಡಾ 80ಕ್ಕಿಂತಲೂ
ಕಾರ್ಮಿಕರ ಆರ್ಥಿಕ ಶೋಷ
ಭೂಮಿಯ ಮರು ಹಂಚಿಕೆ ತೀವ್ರ
ಲಕ ಆಗದೆ ಸಮಸ್ಯೆಗೆ ಪರಿಹಾರ
ಹ್ಣೋಟಿ ಬಂತು.

ತಿಕಾರಿ ಕಣ್ಣೋಟಿ ಅಂಬೇಡ್ಕರ್
ಗಲಿಲ್ಲ. ಅವರಿಗೆ ಸಂವಿಧಾನಾ
ೂ ಸುಧಾರಣೆಗಳಲ್ಲೇ ಹೆಚ್ಚು
ದರಿಂದಾಗಿಯೇ ಕಮ್ಯುನಿಸ್ಟರ
ಮುಂಬಯಿ ಗಿರಣಿ ಮುಷ್ಕರ
. ಎರಡನೆಯದಾಗಿ ಭಾರತದ
ೀಯ ಸಮಾಜದ ತೀವ್ರ ಸಾಮಾ
ಯಕತ್ವ ವಹಿಸಲು ಸಾಧ್ಯವಿಲ್ಲ
ಆಧಾರದ ಮೇಲೆ ವಿಭಜಿತ
ೇಡ್ಕರರ ತರ್ಕ. ಮೂರನೆಯ
ಟೀಳಿಗೆಯ ಕಮ್ಯುನಿಸ್ಟರು ಉಚ್ಚ
ಾದ್ದರಿಂದ ಅಂಬೇಡ್ಕರ್‌ರವರ
ಬಗೆಗಿದ್ದ ತೀವ್ರ ಅವಿಶ್ವಾಸವೂ
ು.

-ವಿರೋಧಿ(ಅದರಲ್ಲೂ ಅಸ್ಪ
ೀರಾಟಗಳ ಬಗ್ಗೆ ಕಮ್ಯುನಿ
ವ ತಾಳದ್ದು(ಜಂಟಿ ಹೋರಾಟ
ಣೆ) ಅಂಬೇಡ್ಕರ್ ದೂರ ಸರಿ
ು. ಆಗ ಕಮ್ಯುನಿಸ್ಟ್ ಪಕ್ಷದ
ೀಣದಿಂದಾಗಿ ಅಂಬೇಡ್ಕರ್
ದ ಎಲ್ಲಾ ಸಾಧ್ಯತೆಗಳನ್ನು ಬಳ
ಲ್ಲ.

ಲ್ಲಿ ಜಾತಿ ಪದ್ಧತಿಯ
ಬಗ್ಗೆ ಬರೆದ ಲೇಖನದಲ್ಲಿ
ನೆಗಳ ಪ್ರಭಾವ ಕಾಣಬಹುದು.
ಕ ವರ್ಗದ ಸರ್ವಾಧಿಕಾರ'ದ
ೊಂಡಿರಲಿಲ್ಲ. ಮಾರ್ಕ್ಸ್‌ವಾದಿ
ಕೆ ಬೂರ್ಜ್ವಾ ಪ್ರಜಾಪ್ರಭುತ್ವ
ಸಮಾಜವಾದಿಗಳ ಟೀಕೆಗಿಂತ
ಆದರೆ ಭಾರತದ ಅತ್ಯಂತ
ಗದಿಂದ ಬಂದ ಅಂಬೇಡ್ಕರ್‌ಗೆ
ತ್ವ ಮತ್ತು ಮಾರುಕಟ್ಟೆ ಆರ್ಥಿ
ಪೂರ್ಣವಾಗಿ ಒಪ್ಪಲು ಸಾಧ್ಯ
ರು ಶೆಡ್ಯೂಲ್ಡ್ ಕ್ಯಾಸ್ಟ್ ಫೆಡ
ಯಾರಿಸಿದ ಕರಡು ಸಂವಿಧಾ
ು ಬರುತ್ತದೆ. ಈ ಕರಡಿ
ಪ್ರಭುತ್ವವನ್ನು 'ಖಾಸಗಿ ಮಾಲ
ದು ಕರೆದು ಅದನ್ನು ತಿರಸ್ಕರಿ
ರಲ್ಲಿ : ಯೋಜಿತ ಆರ್ಥಿಕ,
ಗಳ ರಾಷ್ಟ್ರೀಕರಣ, ಭೂ
ರು ಸಾಮೂಹಿಕೀಕರಣ, ಎಲ್ಲಾ
ತರಿಗೆ ವಿಶೇಷ ರಕ್ಷಣೆಯನ್ನು
ನ್ನ ಅವರು 'ಪ್ರಭುತ್ವ ಸಮಾ
te Socialism) ಎಂದು
ವಣೆ ಹಾಗೂ ವರ್ಗ ಹೋರಾ
ಅರಿತಿದ್ದರೂ ಅಂಬೇಡ್ಕರ್‌ಗೆ
ಿಣಾಮಗಳನ್ನು ಗ್ರಹಿಸಲಾಗ
ಸಮಾನತೆ ಹಾಗೂ ಭ್ರಾತೃ
ನೆಗಳನ್ನು ಸಾಕಾರಗೊಳಿಸಲು
ರ್ಭದಲ್ಲಿ ಬುದ್ಧನತ್ತ ತಿರುಗಿ

ನಿಕ ಮನು'

ುಂದೆಲ್ಲಾ ಅಸ್ಪೃಶ್ಯರ ಪರವಾಗಿ,
ರಾಡಿದ ಅಂಬೇಡ್ಕರ್, ಅದೇ
ಂವಿಧಾನ ಕರಡು ತಯಾರಿ
ಾಗಿ ನೇಮಿಸಲ್ಪಟ್ಟಿದ್ದು ಭಾರ
ಸಗಳಲ್ಲೊಂದು. ಸಂವಿಧಾ
ವರು ವಹಿಸಿದ ಪ್ರಮುಖ
'ಆಧುನಿಕ ಮನು' ಎಂದು
ವಿಪರ್ಯಾಸ. ಅಸ್ಪೃಶ್ಯತಾ

ವಿರೋಧಿ ಚಳುವಳಿಯ ತೀವ್ರ ಘಟ್ಟದಲ್ಲಿ ಅವರು ಮನುಸ್ಮೃತಿಯನ್ನು ಬಹಿರಂಗವಾಗಿ ಸುಡುತ್ತಿದ್ದರು!

'ಕ್ವಿಟ್ ಇಂಡಿಯಾ' ಚಳುವಳಿಯ ಅವಧಿಯಲ್ಲಿ ಬ್ರಿಟಿಷ್ ವೈಸ್‌ರಾಯ್ ಸಲಹಾಕಾರರ ಮಂಡಳಿಯಲ್ಲಿ ಅಂಬೇಡ್ಕರ್ ಒಬ್ಬರಾಗಿದ್ದರು. ಅವರನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಏಜೆಂಟ್ ಎಂದು ಹೀಯಾಳಿಸಲಾಗುತ್ತಿತ್ತು. 1946ರ ಪ್ರಾಂತೀಯ ಚುನಾವಣೆಗಳಲ್ಲಿ ಅಂಬೇಡ್ಕರ್‌ರ 'ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್' ಪರಾಭವ ಹೊಂದಿತು. ಕಾಂಗ್ರೆಸ್ ಸಹ ಅವರ ಪ್ರತಿಭೆ, ನಿಮ್ನ ವರ್ಗದ ಜನತೆಗೆ ಅವರ ಮೇಲಿದ್ದ ಅಭಿಮಾನವನ್ನು ಗಮನದಲ್ಲಿಸಿಕೊಂಡು, ಸಂವಿಧಾನ ರಚನೆಯಲ್ಲಿ ದೊಡ್ಡ ಪಾತ್ರವನ್ನು ಅವರಿಗೆ ವಹಿಸಿತು. ಇದು ಹರಿಜನರನ್ನು ಕಾಂಗ್ರೆಸ್‌ನತ್ತ ಆಕರ್ಷಿಸುವಲ್ಲಿ ಸಹಾಯಕವಾಗಬಹುದು ಎಂದೂ ಕಾಂಗ್ರೆಸ್ ಲೆಕ್ಕಾಚಾರ ಹಾಕಿತ್ತು. ಅಂಬೇಡ್ಕರ್‌ರರನ್ನು ಮೊದಲ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಮಂತ್ರಿ ಮಾಡಲಾಯಿತು. ಅಂಬೇಡ್ಕರ್ ಸಹ 1946ರ ಚುನಾವಣೆಯಲ್ಲಿ ಪರಾಭವದ ನಂತರ ಬೇರೆ ರಾಜಕೀಯ ದಾರಿ ಕಾಣದೆ ಕಾಂಗ್ರೆಸ್ ಜತೆ ಸಹಕರಿಸಿದರು.

ಅಂಬೇಡ್ಕರ್ ಅವರು ಹಿಂದೆ ತಯಾರಿಸಿದ್ದ ಕರಡಿನ ಆಧಾರದ ಮೇಲೆ, ಸಂವಿಧಾನ ತಯಾರಿಸುವ ಕಾರ್ಯದಲ್ಲಿ ತೊಡಗಿದರು. ಅಸ್ಪೃಶ್ಯರು ಹಾಗೂ ಇತರ ಹಿಂದುಳಿದ ಶೋಷಿತ ಜನತೆಯ ವಿಮೋಚನೆಗೆ ಸಂವಿಧಾನದಲ್ಲಿ ಬುನಾದಿ ಹಾಕುವ ಅವರ ಪ್ರಬಲ ಇಚ್ಛೆಗೂ, ಬಹುಸಂಖ್ಯಾತ ಕಾಂಗ್ರೆಸ್ ನಾಯಕರ ಪಾಳೆಯಗಾರಿ ಮನೋಭಾವಕ್ಕೂ ಹಲವು ಬಾರಿ ಘರ್ಷಣೆಗಳಾದವು. ಅಂಬೇಡ್ಕರ್ ಹಲವು ಬಾರಿ ಇದರಿಂದ ಬೇಸತ್ತಿದ್ದರು. ಆದರೂ ಭಾರತದ ಸಂವಿಧಾನದ ಜಾತ್ಯಾತೀತ ಧೋರಣೆ, ಮೀಸಲಾತಿ ಮುಂತಾದ ಪ್ರಗತಿಪರ ಧೋರಣೆಗೆ ಅಂಬೇಡ್ಕರ್ ಅವರೇ ಮುಖ್ಯ ಕಾರಣ ಎಂದರೆ ತಪ್ಪಾಗಲಾರದು.

ಆದರೆ ಈ ಸಖ್ಯತೆ ಬಹಳ ದಿನ ನಡೆಯಲಿಲ್ಲ. ಅಂಬೇಡ್ಕರ್ ತಯಾರಿಸಿದ್ದ ಹಿಂದೂ ಕೋಡ್ ಬಿಲ್‌ನ ಕರಡನ್ನು ಕಾಂಗ್ರೆಸ್ಸಿಗರು ವಿರೋಧಿಸಿ ಅದು ಮಂಜೂರಾಗಲು ಸಾಧ್ಯವಾಗದೆ ಹೋಯಿತು. ನೆಹರೂ ಮುಂತಾದವರು ಅಂಬೇಡ್ಕರ್‌ರನ್ನು ಬೆಂಬಲಿಸುವ ಆಶ್ವಾಸನೆ ಕೊಟ್ಟು ಹಿಂಜರಿದರು. ಇದರಿಂದ ಬೇಸತ್ತ ಅಂಬೇಡ್ಕರ್ ರಾಜೀನಾಮೆ ಕೊಟ್ಟು ಕಾಂಗ್ರೆಸ್ ಜತೆ ಸಂಪರ್ಕ ಕಡಿದುಕೊಂಡರು.

ಆ ಮೇಲಿನ ಅವರ ರಾಜಕೀಯ ಜೀವನ ನಿರಾಶಾದಾಯಕವಾಗಿತ್ತು. ಸಮಾಜವಾದಿಗಳು, ಕಮ್ಯುನಿಸ್ಟರ ಜತೆ ಅವರ ಚುನಾವಣಾ ಸಖ್ಯತೆ ಫಲ ಕೊಡಲಿಲ್ಲ ಮಾತ್ರವಲ್ಲ, ಇನ್ನೂ ಹೆಚ್ಚಿನ ವಿರಸಕ್ಕೆ ಕಾರಣವಾಯಿತು. ಸಂಯುಕ್ತ ಮಹಾರಾಷ್ಟ್ರ ಸಮಿತಿಯ ರಚನೆಯಲ್ಲಿ ಪಾಲ್ಗೊಂಡಿದ್ದು ಸಾಮೂಹಿಕವಾಗಿ ತಮ್ಮ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸೇರಿದ್ದು, ಹಾಗೂ 'ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್' ವಿಸರ್ಜಿಸಿ ರಿಪಬ್ಲಿಕನ್ ಪಕ್ಷ ಆರಂಭಿಸಿದ್ದು ಅವರ ಜೀವನದ ಕೊನೆಯ ತಿಂಗಳಿನ ರಾಜಕೀಯ ಚಟುವಟಿಕೆಗಳು.

ಡಾ.ಅಂಬೇಡ್ಕರ್

ಜನರು, ಜನರೇ, ಜನರಿಗಾಗಿ ನಡೆಸುವ ಸರ
ರಿಗೆ ಆಶ್ಚರ್ಯವಾಗಬಹುದು..............
ಿಗೆ ಹೋಲಿಸಿದಾಗ ನಾವು ಮುಂದುವ
ವು ಹಿಂದೆ ಅಸ್ಪೃಷ್ಯರಾಗಿದ್ದೆವು. ಬ್ರಿಟಿಷ್
ೇವಾಲಯಗಳಿಗೆ ಹೋಗುವಂತಿರಲಿಲ್ಲ.
ಲಿಟರಿಗಳಲ್ಲಿ ನಮ್ಮನ್ನು ಸೇರಿಸಿಕೊಳ್ಳುತ್ತಿ
ೂ ಹೇಳುವುದಾದರೆ ಬ್ರಿಟಿಷ್ ಸರಕಾರ
ಿಕೊಂಡಿದೆ..............
ಾಗಿ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು
ಬ್ರಿಟಿಷ್ ಸರಕಾರ ಯಾವತ್ತೂ ವಹಿಸಲಾ

ತುಟ್ಟಿಭತ್ತೆಯ ಮೇಲೆ ಮಿತಿ ಹಾಕಬೇಕೆನ್ನುವುದಾದರೆ ಉದ್ಯಮಿಗಳ ಲಾಭದ ಮೇಲೆ ಮಿತಿಯೇಕಿಲ್ಲ? ಕಪ್ಪು ಹಣ ಹೊರಗೆಳೆಯುತ್ತಿಲ್ಲವೇಕೆ?

-- ಡಾ. ಅಶಿಮ್‌ದಾಸ್ ಗುಪ್ತಾ

ದೇಶದ ವಿಕಟ ಆರ್ಥಿಕ ಪರಿಸ್ಥಿತಿಯನ್ನು ಎದುರಿಸಲು ಸರಕಾರದ ಖರ್ಚುಗಳನ್ನು ಕಡಿಮೆ ಮಾಡಬೇಕು - ಇದು ಐಎಂಎಫ್‌ನ ಒಂದು ಪಥ್ಯ. ಹೇಗೆ ಮಾಡುವುದು? ಈ ಬಗ್ಗೆ ಪರಿಶೀಲಿಸಲು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಒಂದು ಸಮಿತಿಯನ್ನು ನೇಮಿಸಿತು. ಒರಿಸ್ಸಾದ ಮುಖ್ಯಮಂತ್ರಿ ಬಿಜೂ ಪಟ್ನಾಯಕ್ ಅಧ್ಯಕ್ಷತೆಯ ಈ ಸರಳ ಸಮಿತಿಯ ಸಲಹೆಗಳನ್ನು ಏಪ್ರಿಲ್ 7ರಂದು ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ 45ನೇ ಸಭೆಯ ಮುಂದಿಡಲಾಯಿತು. ಈ ಸಲಹೆಗಳ ಆಧಾರದ ಮೇಲೆ ಸರಕಾರೀ ನೌಕರರಿಗೆ ಹಾಗೂ ಸಾರ್ವಜನಿಕ ವಲಯದ ಕಾರ್ಮಿಕರಿಗೆ, ನೌಕರರಿಗೆ ನೀಡುವ ತುಟ್ಟಿಭತ್ಯೆಯನ್ನು ಸ್ತಂಭನಗೊಳಿಸಬೇಕು ಎಂಬ ಐಎಂಎಫ್ ಪ್ರೇರಿತವಾದ ಕೇಂದ್ರ ಸ ರಕಾರದ ಯೋಜನೆಯನ್ನು ಈ ಸಭೆಯಲ್ಲಿ ಪಶ್ಚಿಮ ಬಂಗಾಳದ ಹಣಕಾಸು ಮಂತ್ರಿ ಡಾ.ಅಶಿಮ್ ದಾಸ್‌ಗುಪ್ತಾ ಖಡಾಖಂಡಿತವಾಗಿ ವಿರೋಧಿಸಿದರು. ಇದು ಏಕಪಕ್ಷೀಯ ಯೋಜನೆ, ಸಂಬಂಧಪಟ್ಟ ನೌಕರರ, ಕಾರ್ಮಿಕರ ಸಂಘಟನೆಗಳೊಂದಿಗೆ ಗಂಭೀರ ಚರ್ಚೆ ನಡೆಸದೆ ಇಂತಹ ಪ್ರಮುಖ ನಿರ್ಧಾರ ಕೈಗೊಳ್ಳಬಾರದು ಎಂದರು. ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಖಡಾಖಂಡಿತ ಅಭಿಪ್ರಾಯ ಹಾಗೂ ಅದನ್ನು ಸಮರ್ಥಿಸಿಕೊಳ್ಳುವ ಬಲವಾದ ತರ್ಕಗಳ ಪ್ರಭಾವದಿಂದಾಗಿ ಅಭಿವೃದ್ಧಿ ಮಂಡಳಿಯಲ್ಲಿ ಕೇಂದ್ರ ಸರಕಾರ ಈ ಬಗ್ಗೆ ರಾಜಕೀಯ ಪಕ್ಷಗಳೊಂದಿಗೆ ಹಾಗೂ ಕಾರ್ಮಿಕ ಸಂಘಗಳೊಂದಿಗೆ "ವ್ಯಾಪಕ ಸಮಾಲೋಚನೆ" ನಡೆಸುವುದಾಗಿ ಕೇಂದ್ರ ಸರಕಾರ ಭರವಸೆ ನೀಡಿತು. ಪಶ್ಚಿಮ ಬಂಗಾಳದ ಹಣಕಾಸು ಮಂತ್ರಿ ಡಾ.ಅಶಿಮ್‌ದಾಸ್‌ಗುಪ್ತಾರವರ ಭಾಷಣದ ಕೆಲವು ಅಂಶಗಳು :

ಹಣದುಬ್ಬರ ತಡೆಯುವ ಒಂದುಕ್ರಮವಾಗಿ ಕಾರ್ಮಿಕರಿಗೆ, ನೌಕರರಿಗೆ ತುಟ್ಟಿಭತ್ಯೆಯ ಹೆಚ್ಚಳವನ್ನು ಮಾಡದಿರುವ ಈ ಪ್ರಶ್ನೆ ಬಂದಿದೆ. ಇಲ್ಲಿ ಹಣದುಬ್ಬರದ ಕಾರಣ ಹಾಗೂ ಪರಿಣಾಮಗಳು ಈ ಎರಡರಲ್ಲಿನ ವ್ಯತ್ಯಾಸವನ್ನು ನಾವು ಸ್ಪಷ್ಟವಾಗಿ ಕಾಣಬೇಕು. ಸತತವಾಗಿ ಹಣದುಬ್ಬರಕ್ಕೆ ಮುಖ್ಯ ಕಾರಣಗಳೆಂದರೆ ಆಗಾಗ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು, ಹಾಗೂ ಈ ವಸ್ತುಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳ ಬೆಲೆಗಳನ್ನು ಸರಕಾರವೇ ಹೆಚ್ಚಿಸುತ್ತಾ ಬಂದಿರುವದು, ಕೈಗಾರಿಕಾ ಉತ್ಪಾದನೆಗಳ ಬೆಲೆ ಏರಿಸಲು ಅವಕಾಶ ನೀಡಿರುವುದು ಹಾಗೂ ಕೃಷಿ ಉತ್ಪಾದನೆಗಳಲ್ಲಿ, ಮುಖ್ಯವಾಗಿ ಆಹಾರ ಧಾನ್ಯಗಳಲ್ಲಿ ಸತತವಾಗಿ ಸಾಕಷ್ಟು ಬೆಳವಣಿಗೆಯಾಗದಿರುವುದು.

ಹಣದುಬ್ಬರ ತರುವ ಈ ಕಾರಣಗಳನ್ನು ನಿವಾರಿಸಬೇಕಾದರೆ ಕೇಂದ್ರ ಸರಕಾರ ಹೀಗೆ ಜೀವನಾವಶ್ಯಕ ಸರಕುಗಳ ಬೆಲೆಗಳನ್ನು ತೀವ್ರವಾಗಿ ಏರಿಸುವುದನ್ನು ನಿಲ್ಲಿಸಬೇಕು; ಕೈಗಾರಿಕಾ ಸರಕುಗಳ ಬೆಲೆ ನಿರ್ಧರಿಸುವಲ್ಲಿ ಒಂದು ಶಿಸ್ತು ಇರುವಂತೆ ಮಾಡಬೇಕು; ಭೂ ಸುಧಾರಣೆಯತ್ತ ಸರ್ವತೋಮುಖ ಪ್ರಯತ್ನ ನಡೆಸಬೇಕು - ನೀರಾವರಿ ಮತ್ತಿತರ ಸಲಕರಣೆಗಳು ಸರಿಯಾಗಿ ಸಿಗುವಂತೆ ಮಾಡಿ ಆಹಾರ ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಲು ಅಗತ್ಯವಾದ ಶಾಶ್ವತ ವ್ಯವಸ್ಥೆ ಕಲ್ಪಿಸಬೇಕು.

ಹಣದುಬ್ಬರ ತಡೆಯುವ ಇಂತಹ ಮೂಲಭೂತ ಕ್ರಮಗಳನ್ನು ಕೈಗೊಳ್ಳದಿದ್ದರೆ ತುಟ್ಟಿಭತ್ಯೆ ಮುಂತಾದ ಖರ್ಚುಗಳ ಸ್ವಲ್ಪ ಭಾಗವನ್ನಾದರೂ ಹೊರಲು ಅದು ಸಿದ್ಧವಾಗಬೇಕು. ಸಮಗ್ರ ರೇಶನ್ ವ್ಯವಸ್ಥೆಯ ಮೂಲಕ ಜೀವನಾವಶ್ಯಕ ವಸ್ತುಗಳ ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು.........

.........ಇನ್ನೊಂದು ಸಂಗತಿ ತುಟ್ಟಿಭತ್ಯೆಯ ಮೇಲೆ ಮಿತಿ ಹಾಕಬೇಕೆನ್ನುವ ಸರಕಾರ ಲಾಭದ ಆದಾಯದ ಮೇಲೆ ಏಕೆ ಮಿತಿ ಹಾಕುತ್ತಿಲ್ಲ? ಕಪ್ಪು ಹಣವನ್ನು ಹೊರತೆಗೆಯುವ ಬಗ್ಗೆ ಮಾತನಾಡುತ್ತಿಲ್ಲ? ಕಪ್ಪು ಹಣ ಸುಮಾರು 50 ಸಾವಿರ ಕೋಟಿ ರೂ. ಎಂದು ಲೆಕ್ಕ ಹಾಕಲಾಗಿದೆ. ಕೇಂದ್ರದ ಹಾಗೂ ಎಲ್ಲಾ ರಾಜ್ಯ ಸರಕಾರಗಳ ನೌಕರರ ಒಟ್ಟು ತುಟ್ಟಿಭತ್ಯೆಗಿಂತಲೂ ಎಷ್ಟೋ ದೊಡ್ಡ ಮೊತ್ತವಿದು. ಈ ಅಪಾರ ಕಪ್ಪು ಹಣದ ಒಂದಂಶವನ್ನು ಹೊರಗೆಳೆದರೂ ಸಾಕು, ಅದು ಬಹಳ ಪರಿಣಾಮಕಾರಿಯಾಗಬಲ್ಲದು. ಹಾಗಿದ್ದರೂ ಹಣದುಬ್ಬರದಿಂದಾಗಿ ಮಾಡಬೇಕಾದ ಹೊಂದಾಣಿಕೆಯ ಹೊರೆಯನ್ನು, ಯೋಜನೇತರ ರೆವಿನ್ಯೂ ಖರ್ಚಿನ ಬಾಬ್ತನ್ನು ಕಡಿಮೆ ಮಾಡುವ ಹೊರೆಯನ್ನು ಕೇವಲ ಕಾರ್ಮಿಕರು ಹಾಗೂ ನೌಕರರ ಮೇಲೆ ಏಕೆ ಹಾಕಬೇಕು? ಶ್ರೀಮಂತರ ವಿಭಾಗಗಳಿಗೆ ಈ ಹೊರೆಯಿಂದ ಏಕೆ ವಿನಾಯ್ತಿ ನೀಡಬೇಕು?

ಒಂದೆಡೆ ಕೈಗಾರಿಕೋದ್ಯಮಿಗಳು ತಮ್ಮ ಉತ್ಪಾದನೆಗಳ ಬೆಲೆಗಳನ್ನು ಹಾಗೂ ಲಾಭಾಂಶಗಳನ್ನು ವಿಪರೀತ ಹೆಚ್ಚಿಸಲು ಅವಕಾಶ ನೀಡುತ್ತಿರುವಾಗ ಕಾರ್ಮಿಕರ ತುಟ್ಟಿಭತ್ಯೆಯನ್ನು ನಿರ್ಬಂಧಿಸಬೇಕೆನ್ನುವ ಏಕಪಕ್ಷೀಯ ಕ್ರಮಕ್ಕೆ ಒಪ್ಪುವುದು ನಮಗೆ ಸಾಧ್ಯವಿಲ್ಲ.

ಕಪ್ಪು ಹಣವನ್ನು ಹೊರ ತೆಗೆಯುವ ಬಗ್ಗೆ ಮಾತನಾಡುತ್ತಿಲ್ಲ? ಕಪ್ಪು ಹಣ ಸುಮಾರು 50 ಸಾವಿರ ಕೋಟಿ ರೂ. ಎಂದು ಲೆಕ್ಕ ಹಾಕಲಾಗಿದೆ. ಕೇಂದ್ರದ ಹಾಗೂ ಎಲ್ಲಾ ರಾಜ್ಯ ಸರಕಾರಗಳ ನೌಕರರ ಒಟ್ಟು ತುಟ್ಟಿಭತ್ಯೆಗಿಂತಲೂ ಎಷ್ಟೋ ದೊಡ್ಡ ಮೊತ್ತವಿದು. ಈ ಅಪಾರ ಕಪ್ಪು ಹಣದ ಒಂದಂಶವನ್ನು ಹೊರಗೆಳೆದರೂ ಸಾಕು, ಅದು ಬಹಳ ಪರಿಣಾಮಕಾರಿಯಾಗಬಲ್ಲದು.

ಯೋಜನೆ ಅವಶ್ಯ: ಉಳ್ಳವರಿಗಾಗಿ


ಭಾರತೀಯ ರಿಸರ್ವ್ ಬ್ಯಾಂಕ್‌ನ ಹೊಸ ಗವರ್ನರ್ ಡಾ. ಸಿ.ರಂಗರಾಜನ್ ಈಗ ಯೋಜನೆಯ ಅವಶ್ಯಕತೆಯ ಬಗ್ಗೆ ಹೇಳುತ್ತಿದ್ದಾರೆ. ಆಧರೆ ಅದು ಆರ್ಥಿಕ ಸುಧಾರಣೆಯ ಅಂದರೆ ಉದಾರೀಕರಣದ ಯಶಸ್ಸಿಗಾಗಿ. ಇದರರ್ಥ ಉದಾರೀಕರಣದ ಉದ್ದೇಶ ಸಫಲಗೊಳಿಸಲು ನಮಗೆ ಯೋಜನೆಗಳ ಅವಶ್ಯಕತೆ ಇದೆ.

ಬ್ಯಾಂಕುಗಳ ಬಂಡವಾಳ ಮಟ್ಟವನ್ನು ಹೆಚ್ಚಿಸುವ ಬಗ್ಗೆ, ಬ್ಯಾಂಕುಗಳ ಲಾಭ ಹೆಚ್ಚಿಸುವ ಬಗ್ಗೆ ಅವುಗಳ ಉತ್ಪಾದಕತೆ ಹೆಚ್ಚಿಸುವ ಬಗ್ಗೆ, ಹೀಗೆ ಇಂತಹ ಹಲವು ವಿಷಯಗಳ ಬಗೆಗೆ ಹೆಚ್ಚು ಹೆಚ್ಚು ಮಾತುಗಳು ಕೇಳಿ ಬರುತ್ತಿವೆ. ಆದರೆ ಆದ್ಯತೆಯ ವಲಯಕ್ಕೆ ನೆರವು, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಇತ್ಯಾದಿಗಳ ಬಗ್ಗೆ ಯಾರೂ ಕ್ಯಾರೇ ಎನ್ನುವವರಿಲ್ಲವಾಗಿದೆ. ಇಂತಹ ಸಂದರ್ಭವಲ್ಲಿ ಯೋಜನೆಯ ಅವಶ್ಯಕತೆಯ ಬಗ್ಗೆ ಮಾತನಾಡುವ ಈ ಕೇಂದ್ರೀಯ ಬ್ಯಾಂಕ್ ಗವರ್ನರ್ ಉಳ್ಳವರ ಹಿತಕ್ಕಾಗಿ ಮಾತ್ರ ಮಾತನಾಡುತ್ತಿದ್ದಾರೆ ಎಂದು ಅರ್ಥವಾಗುವುದಿಲ್ಲವೆ?

ದೇಶವನ್ನೇ ದಿವಾಳಿಯೆಬ್ಬಿಸ ಹೊರಟಿರುವ ಸರಕಾರ

ದೇಶದ ವಿದೇಶೀ ವಿನಿಮಯ ಬಿಕ್ಕಟ್ಟಿನ ಪರಿಹಾರಕ್ಕಾಗಿ ಆಪದ್ಧನವಾದ ಚಿನ್ನವನ್ನೇ ಒತ್ತೆಯಿಟ್ಟು ಸಾಲ ಪಡೆದ ಸರಕಾರ ಈಗ ದೇಶದಲ್ಲಿನ ಬೆಳ್ಳಿಯನ್ನು ಮಾರಲಿದೆಯಂತೆ. ಏಕೆ ಗೊತ್ತೆ? ವಿಶ್ವಬ್ಯಾಂಕ್-ಐಎಂಎಫ್‌ಗಳು ನಿಗದಿಪಡಿಸಿದ ಹಣಕಾಸಿನ ಖೋತಾ ಮಟ್ಟವನ್ನು ತಲುಪಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಈ ಖೋತಾವನ್ನು ಬ್ಯಾಂಕ್ ಫಂಡ್ ಧಣಿಗಳ ಆಣತಿಯಂತೆ ಕಡಿಮೆ ಮಾಡಲು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ 2000 ಟನ್ನುಗಳಷ್ಟು ಬೆಳ್ಳಿಯನ್ನು ಮಾರುವ ಸನ್ನಾಹದಲ್ಲಿದೆಯಂತೆ. ಈ ಮಾರಾಟದಿಂದ 1000 ಕೋಟಿ ರೂಪಾಯಿಗಳು ಬರಲಿದ್ದು ಹಣಕಾಸಿನ ಖೋತಾವನ್ನು ಅಷ್ಟು ಕಡಿಮೆ ಮಾಡಿ ಧಣಿಗಳನ್ನು ಮೆಚ್ಚಿಸಬಹುದಲ್ಲವೇ?

ಚಿನ್ನ, ಬೆಳ್ಳಿ, ಮಾರಿದ ನಂತರ ಸರಕಾರ ತಾಮ್ರ, ಕಬ್ಬಿಣ ಇತ್ಯಾದಿಗಳನ್ನೆಲ್ಲಾ ಮಾರಲು ಪ್ರಾರಂಭಿಸೀತೆ?



ಐಎಂಎಫ್ ಸಾಲದ ಕೊನೆಯ ಕಂತಿಗಾಗಿ

"ಬಗ್ಗು" ಎಂದು ಐಎಂಎಫ್ ಧಣಿಗಳು ಹೇಳಿದ ಕೂಡಲೇ ಭೂಮಿಗೂ ಕೆಳಗೆ ಬಗ್ಗಲು ಪ್ರಯತ್ನಿಸುತ್ತಿರುವ ಕೇಂದ್ರ ಸರಕಾರ ಐಎಂಎಫ್‌ನವರಿಂದ ಅಪರಿಮಿತ ಶಹಬ್ಬಾಸ್‌ಗಿರಿಗಳನ್ನು ಪಡೆಯುತ್ತಿದೆ. ಹಣಕಾಸು ಖೋತಾ ಕಡಿಮೆ ಮಾಡಲು ಶತಾಯಗತಾಯ ಪ್ರಯತ್ನಿಸುತ್ತಾ ಬಡವರ ಹೊಟ್ಟೆಯ ಮೇಲೆ ಹೊಡೆಯುತ್ತಾ ಶ್ರೀಮಂತರ ಹಿತ ಕಾಯುತ್ತಿರುವ ಕೇಂದ್ರ ಸರಕಾರ ಈ ತಾರೀಫು ಪಡೆದಿರುವುದು ಸಹಜ ತಾನೇ? ಈಗ ಐಎಂಎಫ್ ಸಾಲದ ಕೊನೆಯ ಕಂತಿನ 2.2 ಬಿಲಿಯ ಡಾಲರುಗಳ ಬಿಡುಗಡೆಗೆ ಐಎಂಎಫ್ ಸಿದ್ಧವಾಗಿದೆ.

ಅಯೋಧ್ಯಾಪೀಡನೆ

ಅಯೋಧ್ಯೆಯ ಘಟನೆಗಳು ಕೋಮು ಗಲಭೆಗಳು ನಡೆದು ಬಹಳ ದಿನಗಳೇ ನಡೆದಿವೆ. ದೂರದಲ್ಲಿರುವ ನಮಗೆ ಇವುಗಳು ನಡೆಯುತ್ತಿರಬಹುದು. ಆದರೆ ಘಟನೆಗಳು ದೇಶದ ವಿವಿಧ ರಂಗಗಳ ಮೇಲೆ ಮಾಡಿದ ಗಾಯಗಳು ಮಾಯ್ದಿಲ್ಲ.

ಡಿಸೆಂಬರ್ ತಿಂಗಳಿನ ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆಯ ಅನುಸೂಚಿ ಶೇ. 1.4ಕ್ಕೆ ಇಳಿದಿತ್ತು. ನವೆಂಬರ್ ತಿಂಗಳಿಗೆ ಶೇ. 4.5ರಷ್ಟಿದ್ದ ಈ ಬೆಳವಣಿಗೆ ಎಷ್ಟು ತೀವ್ರವಾಗಿ ಇಳಿಯಿತೆಂದರೆ ಆ ಮಟ್ಟದಿಂದ ಮೇಲೇರುವುದು ಇಂದಿಗೂ ಸಾಧ್ಯವಾಗಿಲ್ಲ.

ಅಯೋಧ್ಯೆಯಲ್ಲೇ ಉಳಿದರೆ ಬಿಜೆಪಿಯ ರಾಮನಿಗೆ ನಿಜವಾಗೂ ನಿದ್ದೆ ಬಂದೀತೆ?

ಸಾರ್ವಜನಿಕ ವಲಯದ ಉದ್ಯಮಗಳ ಮೇಲೆ ಗೂಬೆ

ಸಾರ್ವಜನಿಕ ವಲಯದ ಉದ್ಯಮಗಳ ಬಗ್ಗೆ ಅವ್ಯಾಹತವಾಗಿ ಅಪಪ್ರಚಾರ ನಡೆಯುತ್ತಿದೆ. ಆರ್ಥಿಕವನ್ನೇ ಉದಾರೀಕರಿಸುತ್ತಿರುವ, ಖಾಸಗೀಕರಣವನ್ನು ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂದು ಮುಂದು ಮಾಡುತ್ತಿರುವ ಸರಕಾರಕ್ಕೆ ಇದೇ ಬೇಕಾಗಿರುವುದು.

ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದು ಖಂಡಿತವಾಗಿಯೂ ನಿಜ. ಈಗ ಬಂದಿರುವ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್(ಸಿಎಜಿ)ರ ವರದಿ ಸಾರ್ವಜನಿಕ ವಲಯದ ಉದ್ಯಮಗಳ ಕೆಲವು ಹುಳುಕುಗಳನ್ನು ಹೊರಹಾಕಿದೆ. ಭಾರತ್ ಪಂಪ್ಸ್ ಅಂಡ್ ಕಂಪ್ರೆಸ್ಸರ್, ಹೆವಿ ಇಂಜಿನಿಯರಿಂಗ್ ಕಾರ್ಪೋರೇಷನ್ ಇತ್ಯಾದಿಗಳೆಲ್ಲಾ ಅನಾವಶ್ಯಕ ಖರ್ಚುಗಳನ್ನು ಮಾಡುತ್ತಿರುವುದನ್ನು ಅದು ಬಯಲಿಗೆಳೆದಿದೆ.

ಹೀಗೆ ಬಯಲಿಗೆಳೆದಿದ್ದು ಖಂಡಿತವಾಗಿಯೂ ಸರಿ. ಆದರೆ ಇಂತಹ ಅಕ್ರಮಗಳ ಹಿಂದೆ ಇರುವ ಕೈಗಳನ್ನು ಪತ್ತೆ ಹಚ್ಚ ಹೊರಟಿದ್ದರೆ ಅದು ಅತ್ಯಂತ ಸಮಂಜಸವಾಗುತ್ತಿತ್ತು. ಯಾಕೆಂದರೆ ಅಕ್ರಮಗಳ ಹಿಂದೆ ವಿ. ಕೃಷ್ಣಮೂರ್ತಿ ತರಹದವರ(ಶೇರು ಹಗರಣದ ಮುಖ್ಯ ಪಾತ್ರಧಾರ) ಇದ್ದೇ ಇರುತ್ತಾರೆ.

ಈ ಕೈಗಳ ಹಿಂದೆ ಇವರನ್ನು ನೇಮಿಸಿದ ಕೇಂದ್ರ ಸರಕಾರ ಇರುವುದಿಲ್ಲವೆ?

“ಐದು ವರ್ಷಗಳ ಕರಾಳ ಶಾಸನ ಮುಗಿಯಿತು” ಎಂದು ಕುಣಿದಾಡಿದರು ತ್ರಿಪುರಾ ಜನತೆ

ತ್ರಿಪುರಾ ಚುನಾವಣೆಗಳಲ್ಲಿ ಎಡರಂಗದ ಪ್ರಚಂಡ ಜಯಭೇರಿ ಐದು ವರ್ಷಗಳ ಕಾಂಗ್ರೆಸ್-ಟಿಯುಜೆಎಸ್‌ನ ಭಯೋತ್ಪಾದಕ ಆಡಳಿತವನ್ನು ಕೊನೆಗೊಳಿಸಿದೆಯೆಂಬ ಹರ್ಷೋಲ್ಲಾಸ ಏಪ್ರಿಲ್ 7ರಂದು ತ್ರಿಪುರಾ ರಾಜಧಾನಿ ಅಗರ್ತಲಾದ ಬೀದಿ- ಬೀದಿಗಳಲ್ಲಿ ಕಂಡು ಬಂತು. ಸಾವಿರಾರು ಜನ ಹರ್ಷದಿಂದ ಕುಣಿದಾಡಿದರು. ಈ ಚಾರಿತ್ರಿಕ ವಿಜಯದಲ್ಲಿ ಎಡರಂಗ ಮುನ್ನಾಲಿಗಿಂತಲೂ ಹೆಚ್ಚು ಸ್ಥಾನಗಳನ್ನು ಗಳಿಸಿತು. ಸಿಪಿಐ(ಎಂ) ಸ್ಪರ್ಧಿಸಿದ್ದ 51 ಸ್ಥಾನಗಳಲ್ಲಿ 44 ಸ್ಥಾನಗಳನ್ನು ಗೆದ್ದುಕೊಂಡಿತು. ಕಾಂಗ್ರೆಸ್(ಐ) ಸಾರ್ವಜನಿಕವಾಗಿಯೇ ಮತಗಟ್ಟೆ ಕಸಿದುಕೊಂಡ ಎಂಟು ಕ್ಷೇತ್ರಗಳಲ್ಲಿ ಚುನಾವಣಾ ಆಯೋಗ ಮರು ಮತದಾನ ನಡೆಸಿದ್ದರೆ ಕಾಂಗ್ರೆ-ಟಿಯುಜೆಎಸ್ ಸೋಲು ಇನ್ನೂ ಶೋಚನೀಯವಾಗಿರುತ್ತಿತ್ತು.

ಮುಖ್ಯಮಂತ್ರಿಯಾಗಿ ಆಯ್ಕೆಯಾಗುವ ಮೊದಲು ಸಂದರ್ಶನವೊಂದರಲ್ಲಿ ಮಾತನಾಡುತ್ತಾ ದಶರಥ್‌ದೇಬ್ ರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಗೊಳಿಸುವುದು ಎಡರಂಗ ಸರಕಾರದ ಮೊದಲ ಕೆಲಸ ಎಂದರು. ಜನಗಳ ಜೀವನ ಪರಿಸ್ಥಿತಿಯನ್ನು ಸುಧಾರಿಸಲು, ಮುಖ್ಯವಾಗಿ ಕಾಂಗ್ರೆ-ಟಿಯುಜೆಎಸ್ ಕೂಟದ ಅತ್ಯಂತ ಅಮಾನುಷ, ಕ್ರೂರ ಆಳ್ವಿಕೆಯಲ್ಲಿ ಹಸಿವಿನಿಂದ ಸಾವುಗಳನ್ನು ಕಂಡ ಬುಡಕಟ್ಟು ಪ್ರದೇಶಗಳ ಜನಗಳ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರ ಗಮನ ಕೇಂದ್ರೀಕರಿಸುವುದು ಎಂದರು.

ಸಿಪಿಐ(ಎಂ) ಅಭ್ಯರ್ಥಿಗಳಿಗೆ ಸಂಪೂರ್ಣ ಬೆಂಬಲ ನೀಡಿ, ಟಿಯುಜೆಎಸ್ ಮುಖಂಡರನ್ನೆಲ್ಲಾ ಪರಾಭವಗೊಳಿಸಿ ತ್ರಿಪುರಾ ಬುಡಕಟ್ಟು ಜನತೆ ತಮ್ಮ ಮನವಾಳವನ್ನು ಸಿಟ್ಟನ್ನು ತೋರಿಸಿದ್ದಾರೆ.

ಎಡರಂಗದ ಈ ವಿಜಯ ದೇಶಾದ್ಯಂತ ಸಿಪಿಐ(ಎಂ) ಕಾರ್ಯಕರ್ತರು ಹಾಗೂ ಎಡಪಕ್ಷಗಳ ಹಿತೈಷಿಗಳ ಮೇಲೆ ಭಾರೀ ಪರಿಣಾಮ ಬೀರಿದೆ. ಎಲ್ಲೆಡೆಯಿಂದ ಅಭಿನಂದನಾ ಹಾಗೂ ಸೌಹಾರ್ದ ಸಂದೇಶಗಳು ಸತತವಾಗಿ ಬರುತ್ತಿವೆ. ತ್ರಿಪುರಾದ ತೀರ್ಪು ಎಡಪಕ್ಷಗಳು ರಾಷ್ಟ್ರೀಯ ಐಕ್ಯತೆಯ ಪ್ರತಿಪಾದಕರು ಎಂಬ ಜನತೆಯ ವಿಶ್ವಾಸವನ್ನು ವ್ಯಕ್ತಪಡಿಸಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ದೆಹಲಿಯಲ್ಲಿ ಹೇಳಿದ್ದಾರೆ. ದೇಶದ ಎಡಪಕ್ಷಗಳ ಮೇಲೆ ಮಾತ್ರವಲ್ಲ, ಇಡೀ ಜಗತ್ತಿನ ಎಡ ಆಂದೋಲನದ ಮೇಲೂ ಪ್ರಭಾವ ಬೀರಿದಂತೆ ಕಾಣುತ್ತಿದೆ. ವಿಶ್ವದೆಲ್ಲಾ ಕಡೆಗಳಿಂದಲೂ ಸಿಪಿಐ(ಎಂ)ಗೆ ಅಭಿನಂದನಾ ಸಂದೇಶಗಳು ಬರುತ್ತಿವೆ.

ಮೋಸದಿಂದ ಪಡೆದ ನಾಲ್ಕು ಸ್ಥಾನ - ತ್ರಿಪುರಾದ ಮಾಜಿ ಕಾಂಗ್ರೆ ಮುಖ್ಯಮಂತ್ರಿ ಸ್ಪರ್ಧಿಸಿದ್ದ ಬಕಾಲ್ ಘಡ್ ಕ್ಷೇತ್ರದಲ್ಲಿ ಹಾಗೂ ಕೃಷ್ಣಮೂಕ ಹಾಗೂ ಜೋಲ್ಯಾಬಾರಿ ಕ್ಷೇತ್ರಗಳ ಹಲವು ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿತ್ತು. 27 ಮತಗಟ್ಟೆಗಳಲ್ಲಿ 21 ಮತಗಟ್ಟೆಗಳನ್ನು ಅಪಹರಿಸಿದ್ದರಿಂದಲೇ ವಿಶಾಲಘಡ್‌ನಲ್ಲಿ ಮಾಜಿ ಕಾಂಗ್ರೆ ಮುಖ್ಯಮಂತ್ರಿ ಸಮೀರ್ ರಂಜನ್ ಬರ್ಮನ್ 15 ಸಾವಿರ ಮತಗಳ ಮೋಸದ "ಗೆಲುವು" ಪಡೆಯಲು ಸಾಧ್ಯವಾಯಿತು. ಅರ್ಧಗಂಟೆಯೊಳಗೇ ಶೇ. 50 ಮತದಾನ –ನಡೆದಿತ್ತು - ಕಾಂಗ್ರೆನ ಸಶಸ್ತ್ರ ಗೂಂಡಾಗಳಿಂದ. ಕೇಂದ್ರ ನಿರೀಕ್ಷಕರೂ ಮುಕ್ತವಾಗಿ ಸಂಚರಿಸಲು ಸಾಧ್ಯವಿರಲಿಲ್ಲ. ಇಲ್ಲಿಯ ಫಲಿತಾಂಶದ ಪ್ರಕಾರ ಕಾಂಗ್ರೆಸ್(ಐ) 7000 ಮತಗಳಿಂದ "ಗೆದ್ದಿದೆ". ಇಲ್ಲಿ ಕಳೆದ ಬಾರಿ ಸಿಪಿಐ(ಎಂ) ಗೆದ್ದಿತ್ತು. ಈ ಬಾರಿ ಮೋಸದಿಂದ ಅದು ಕಾಂಗ್ರೆ ಪಾಲಾಗಿದೆ. ಇನ್ನೊಂದು ಕ್ಷೇತ್ರ ಜಾರಿಲಾಂನಲ್ಲೂ ಚುನಾವಣಾ ಮೋಸದಿಂದ ಸಿಪಿಐ ಅಭ್ಯರ್ಥಿ ಸೋತು ಕಾಂಗ್ರೆ ಗೆಲ್ಲುವಂತಾಗಿದೆ.

‘ಒರಿಸ್ಸಾ ಉಳಿಸಿ ದಿನ’

ಏಪ್ರಿಲ್ 1 ಒರಿಸ್ಸಾ ರಾಜ್ಯ ಸ್ಥಾಪನೆಯಾದ ದಿನ ಸಿಪಿಐ(ಎಂ) ಒರಿಸ್ಸಾ ರಾಜ್ಯ ಸಮಿತಿ ಇದನ್ನು ‘ಒರಿಸ್ಸಾ ಉಳಿಸಿ ದಿನ’ವನ್ನಾಗಿ ಆಚರಿಸಿದೆ. ರಾಜಭವನದ ಎದುರು ಅಂದು ಉಪವಾಸ ಮುಷ್ಕರ ನಡೆಸಲಾಯಿತು. ಈ 24 ಗಂಟೆಗಳ ಉಪವಾಸ ಮುಷ್ಕರ ಹಸಿವಿನಿಂದ ಅಪರಿಚಿತ ಸಾಂಕ್ರಾಮಿಕ ರೋಗದಿಂದ ಸಾವು, ಮಕ್ಕಳ ಮಾರಾಟ, ಕಾಳಹಾಂದಿ, ಬೋಲಂಗೀರ್, ರಾಮಗಢ ಹಾಗೂ ಮುಲ್ಕಾನಗರಿ ಜಿಲ್ಲೆಗಳಿಂದ ದೊಡ್ಡ ಪ್ರಮಾಣದಲ್ಲಿ ಜನಗಳ ವಲಸೆ ನಡೆಯುತ್ತಿರುವಾಗಲೂ ಕೇಂದ್ರ ಸರಕಾರ ಹಾಗೂ ರಾಜ್ಯದ ಜನತಾದಳ ಸರಕಾರ ತೋರುತ್ತಿರುವ ನಿರ್ಲಕ್ಷ್ಯವನ್ನು ಪ್ರತಿಭಟಿಸಿ ನಡೆಯಿತು.

ರಾಜ್ಯ ಸಮಿತಿ ಕಾರ್ಯದರ್ಶಿ ಜನಾರ್ಧನಪತಿ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಗನ್ನಾಥ್ ಮಿಶ್ರಾ, ಈಶ್ವರ ದಾಸ್, ಸಂತೋಷ್ ದಾಸ್ ಹಾಗೂ ಅಲಿ ಕಿಶೋರ್ ಪಟ್ನಾಯಕ್ ನೇತೃತ್ವದಲ್ಲಿ ನೂರಾರು ಪಕ್ಷದ ಕಾರ್ಯಕರ್ತರು ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಮೇಲೆ ಹೇಳಿದ ಜಿಲ್ಲೆಗಳ ಬರಪೀಡಿತ ಜನಗಳ ರಕ್ಷಣೆಗೆ ವಿಶೇಷ ಧನ ಸಹಾಯ ನೀಡಬೇಕೆಂಬ ರಾಜ್ಯ ಸರಕಾರದ ಮನವಿಯನ್ನು ತಿರಸ್ಕರಿಸಿದ ಕೇಂದ್ರ ಸರಕಾರದ ಅಮಾನುಷ ನಿಲುವಿನ ಬಗ್ಗೆ ರಾಜ್ಯ ಸಿಪಿಐ(ಎಂ) ಆಘಾತ ವ್ಯಕ್ತಪಡಿಸಿದೆ.

ಕಾಂ. ದಶರಥ್‌ದೇಬ್ ತ್ರಿಪುರಾದ ಜನತೆಯ ಕಣ್ಮಣಿ

ತ್ರಿಪುರಾದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ 73 ವರ್ಷದ ಕಾಮ್ರೇಡ್ ದಶರಥ್ ದೇಬ್ ತ್ರಿಪುರಾ ಜನತೆಯ ಪ್ರೀತಿಪಾತ್ರ ಮುಖಂಡ. ಇವರು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು ಹಾಗೂ ತ್ರಿಪುರಾ ರಾಜ್ಯ ಸಮಿತಿಯ ಕಾರ್ಯ[...]ದರ್ಶಿ. 1948-50ರ ಅವಧಿಯಲ್ಲಿ ಮಹಾ[...]ರಾಜನ ಪಾಳೆಯಗಾರೀ ಆಳ್ವಿಕೆಯ ವಿರುದ್ಧ[...] ಬುಡಕಟ್ಟು ಜನಗಳ ಸಶಸ್ತ್ರ ಹೋರಾಟ[...] ಮುಂದಾಳು. ಬುಡಕಟ್ಟು ಜನಗಳ ಪ್ರಜಾ[...]ಸತ್ತಾತ್ಮಕ ಸಂಘಟನೆ ಗಣಮುಕ್ತಿ ಪರಿಷದ್‌[...] ಸ್ಥಾಪಕರು. ತ್ರಿಪುರಾದಲ್ಲಿ ಕಮ್ಯುನಿಸ್ಟ್ ಪಕ್ಷ[...] ಒಬ್ಬ ಪ್ರವರ್ತಕರೂ ಆಗಿರುವ ದಶರಥ[...]ದೇಬ್ 1952ರಲ್ಲಿ ತಲೆಮರೆಸಿಕೊಂಡಿದ್ದಾಗ[...] ಆಗಿನ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಕೇಂದ್ರ[...] ಸಮಿತಿಗೆ ಆಯ್ಕೆಗೊಂಡರು.

1952ರ ಮೊದಲ ಲೋಕಸಭಾ[...] ಚುನಾವಣೆಗಳಲ್ಲಿ ಸ್ಪರ್ಧಿಸಿದ ಇವರು ನಾಲ್ಕು[...] ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಗೊಂ[...]ಡರು. 1978-88ರ ಅವಧಿಯಲ್ಲಿ[...] ಎಡರಂಗ ರಾಜ್ಯ ಸರಕಾರದಲ್ಲಿ ಉಪಮು[...]ಖ್ಯಮಂತ್ರಿಯಾಗಿದ್ದರು.

ಅವರು ರಾಜ್ಯ ವಿಧಾನಸಭೆಯನ್ನು[...] ಪ್ರವೇಶಿಸಿದಂದಿನಿಂದ ಸತತವಾಗಿ ರಾಮಚಂ[...]ದ್ರಘಾಟ್(ಮೀಸಲು) ಕ್ಷೇತ್ರದಿಂದ ಭಾರಿ[...] ಬಹುಮತದಿಂದ ಗೆಲ್ಲುತ್ತಾ ಬಂದಿದ್ದಾರೆ. ಈ[...] ಬಾರಿ 10,500 ಮತದಿಂದ ಗೆದ್ದಿದ್ದಾರೆ[...] ಅವರು ರಾಜ್ಯದ ಮೊದಲ ಬುಡಕಟ್ಟು[...] ಮುಖ್ಯಮಂತ್ರಿ.

ಇವರ ಪತ್ನಿ ಮಂಗಳೇಶ್ವರಿ ದೇಬ[...]ಬರ್ಮಾ ಕೂಡಾ ಸಿಪಿಐ(ಎಂ) ರಾಜ್ಯ ಸಮಿ[...] ಸದಸ್ಯರು. ಈ ದಂಪತಿಗಳಿಗೆ ನಾಲ್ವ[...] ಮಕ್ಕಳು. ●

ಅಸಂಘಟಿತ ಕಾರ್ಮಿಕರ ಹೋರಾಟ ತೀವ್ರಗೊಳಿಸಲಾಗುವುದು

ಅಸಂಘಟಿತ ಮತ್ತು ಗುತ್ತಿಗೆ ಕಾರ್ಮಿಕರ ಹೋರಾಟವನ್ನು ತೀವ್ರಗೊಳಿಸಲು, ಅದನ್ನು ಸತತವಾಗಿ ಮುಂದುವರಿಸಿಕೊಂಡು ಹೋಗಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ತಿಳಿಸಿದೆ. ಮಾರ್ಚ್ 15ರಂದು ನಡೆದ ಒಂದು ದಿನದ ಮುಷ್ಕರವನ್ನು ಸಮಿತಿ ಏಪ್ರಿಲ್ 1ರಂದು ನಡೆದ ತನ್ನ ಸಭೆಯಲ್ಲಿ ವಿಮರ್ಶಿಸಿ ಈ ಕಾರ್ಯಕ್ರಮಗಳನ್ನು ರೂಪಿಸಿದೆ. ಮೇ ತಿಂಗಳಲ್ಲಿ ಕಾರ್ಮಿಕ ಸಮಾವೇಶಗಳನ್ನು ನಡೆಸಿ ಕೈಗಾರಿಕಾವಾರು ಈ ಹೋರಾಟವನ್ನು ವಿಶಾಲ ಮಟ್ಟದಲ್ಲಿ ಪ್ರಬಲಗೊಳಿಸಲು ತೀರ್ಮಾನಿಸಲಾಯಿತು. ಸಿಐಟಿಯು ಜಿಲ್ಲಾ ಅಧ್ಯಕ್ಷ ವಿ.ಜೆ.ಕೆ.ನಾಯರ್ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು. ಕಾರ್ಮಿಕರು ಕೋಮು ಸೌಹಾರ್ದತೆಗೆ ಹಾಗೂ ದೇಶದ ಸಮಗ್ರತೆಯ ರಕ್ಷಣೆಗೆ ಶ್ರಮಿಸುತ್ತೇವೆಂದು ಸಹಿ ಮಾಡಿದ ಪ್ರತಿಜ್ಞೆಯನ್ನು ರಾಷ್ಟ್ರೀಯ ಏಕತಾ ಆಂದೋಲನದ ನವದೆಹಲಿ ಕಛೇರಿಗೆ ಕಳಿಸಲು ಹಾಗೂ ಏಪ್ರಿಲ್ 15ರ ಅಖಿಲ ಭಾರತ ಸಮಾವೇಶಕ್ಕೆ 20ಮಂದಿ ಪ್ರತಿನಿಧಿಗಳನ್ನು ಕಳಿಸಲು ಸಭೆ ನಿರ್ಧರಿಸಲಾಯಿತು. ಹೂಡಿ ಗ್ರಾಮಸ್ಥರ ಮೇಲೆ ಪೋಲೀಸ್ ದೌರ್ಜನ್ಯ ಹಾಗೂ ಬದನವಾಳು ಗ್ರಾಮದಲ್ಲಿ ಮೇಲ್ಜಾತಿ ಜನರಿಂದ ನಡೆದ ದಲಿತರ ಕಗ್ಗೊಲೆಯನ್ನು ಹಾಗೂ ಪೋಲೀಸ್ ನಿಷ್ಕ್ರಿಯತೆಯನ್ನು ಸಭೆ ತೀವ್ರವಾಗಿ ಖಂಡಿಸಿತು.

ಎಂ.ಬಿ. ಕಟ್ಟಿಯವರಿಂದ ಅಮರಣ ಉಪವಾಸ

ಧಾರವಾಡ : ಥಮ್ಸಪ್ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಜನವರಿ 4, 1993ರಿಂದ ಮುಷ್ಕರವನ್ನು ಪ್ರಾರಂಭಿಸಿದ್ದು 4-2-93ರಿಂದ ಸರದಿ ಅನ್ನ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದು ಏನೂ ಪರಿಣಾಮವಾಗಲಿಲ್ಲ. ಆದ್ದರಿಂದ ದಿನಾಂಕ 22-3-93ರಿಂದ ಕಾಂ.ರಮೇಶ್ ಮೇಸ್ತ್ರಿಯವರು ಅಮರಣ ಉಪವಾಸ ಆರಂಭಿಸಿದರು. ಅದಕ್ಕೂ ಏನೂ ಪ್ರಯೋಜ[...]ವಾಗಲಿಲ್ಲ. ಆದ್ದರಿಂದ ದಿನಾಂಕ [...]-3-93ರಂದು ಸಂಜೆ 4 ಗಂಟೆಗೆ ಕಾಂ.ರಮೇಶ [...]ಸ್ತ್ರಿಯವರನ್ನು ಉಪವಾಸ ಕೈ ಬಿಡಲು ಸಿಐ[...] [...]ಲ್ಲಾ ಸಮಿತಿಯು ಹಿಂತೆಗೆಸಿಕೊಂಡು [...]ಸಿಐಟಿಯು ರಾಜ್ಯ ಸಮಿತಿಯ ಕಾಂ.ಎಂ.ಬಿ. ಕಟ್ಟಿಯವರು ತಮ್ಮ [...]ಉಪವಾಸ ಪ್ರಾರಂಭಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ.ಡಿ.ಜೆ.ಗೊಂದಕರ ಹಾಗೂ ಉಪಾಧ್ಯಕ್ಷ ಕಾಂ.ಕಲ್ಲಪ್ಪ ಬೆನಕೊಪ್ಪ ಅವರು ಹೋರಾಟವನ್ನು ತೀವ್ರಗೊಳಿಸಲು ಕರೆ ಕೊಟ್ಟರು. ಅದಕ್ಕಾಗಿ ಸಿಐಟಿಯು ಹಾಗೂ ಮಿತ್ರ ಸಂಘಟನೆಗಳ ಸಭೆಯನ್ನು ಕರೆದಿದ್ದಾರೆ.

ಕ್ಲೀನರರಿಗೆ ಮನೆ ಕೊಡಲು ಒತ್ತಾಯ

ವಿಜಾಪುರ : ಸಿಐಟಿಯುಗೆ ಸೇರಿದ ಲಾರಿ ಚಾಲಕ ಮತ್ತು ಕ್ಲೀನರರ ಯೂನಿಯನ್ ಏಪ್ರಿಲ್ 5 ರಂದು ಸಿಕಂದರ ಎಸ್.ಬಡಕಲ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಏಪ್ರಿಲ್ 6 ರಿಂದ ಅನಿರ್ದಿಷ್ಟ ಧರಣಿ ಕೂಡಲು ಸಭೆ ತೀರ್ಮಾನಿಸಿತು.

ದಿನಗೂಲಿಯಂತೆ ದುಡಿಯುವ ಖಾಸಗಿ ಲಾರಿಯ ಚಾಲಕ ಮತ್ತು ಕ್ಲೀನರಿಗೆ ಮನೆಗಳನ್ನು ನಿರ್ಮಿಸಿ ಕಾಲನಿ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳಲ್ಲಿ ಒತ್ತಾಯಿಸಲು ಈ ಧರಣಿ ನಡೆಯಲಿದೆ.

ಅಸಂಘಟಿತರಾದ ಚಾಲಕ ಮತ್ತು ಕ್ಲೀನರ್ ಅವರಿಗೆ ಸರಕಾರದಿಂದ ಯಾವುದೇ ಸಹಾಯ, ಸೌಲಭ್ಯ ಪರಿಹಾರ ಸಿಕ್ಕಿರುವುದಿಲ್ಲ. ಕಾರಣ ಸರಕಾರ ಕೂಡಲೇ ಇತ್ತ ಗಮನ ಹರಿಸಿ ಬಡಕಾರ್ಮಿಕರಾದ ಚಾಲಕ ಮತ್ತು ಕ್ಲೀನರರಿಗೆ ಮನೆಗಳನ್ನು ಕೊಡಬೇಕೆಂದು ಜಿಲ್ಲಾ ಲಾರಿ ಚಾಲಕ ಮತ್ತು ಕ್ಲೀನರ್ ಯೂನಿಯನ್ ಸರಕಾರವನ್ನು ಒತ್ತಾಯಿಸಿದೆ.

ಸಭೆಯಲ್ಲಿ ಮೈಬುಸಾಬ ತಾವರಗೆರೆ, ಅಬ್ದುಲಖಾದರ ಲಾಂಬೆವಾಲೆ, ಶರಣಪ್ಪಾ ಮೈತ್ರಿ, ಉಮರ ಫರುಕ, ಮಣಿಯಾರ ಮುಂತಾದವರು ವೇದಿಕೆ ಮೇಲೆ ಉಪಸ್ಥಿತರಿದ್ದರು ಎಂದು ಜಿಲ್ಲಾ ಲಾರಿ ಚಾಲಕ ಮತ್ತು ಕ್ಲೀನರ್ ಯೂನಿಯನ್‌ನ ಸಹ ಕಾರ್ಯದರ್ಶಿ ಕಾಂ.ಮನ್ನೂಸಾಬ ಕಲಾದಗಿ ಹಾಗೂ ಕೋಶಾಧ್ಯಕ್ಷರಾದ ರಾಮದಾಸ ನಲವಡೆ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಜಾಪುರದಲ್ಲಿ ಸಿಪಿಐ(ಎಂ) ಅಧ್ಯಯನ ಶಿಬಿರ

ಸಿಪಿಐ(ಎಂ)ನ ನಗರ ಸಮಿತಿಯ ಆಶ್ರಯದಲ್ಲಿ ಏಪ್ರಿಲ್ 3ರಂದು ಮುಖ್ಯ ಕಾರ್ಯಕರ್ತರಿಗೆ ಒಂದು ದಿನದ ಅಧ್ಯಯನ ಶಿಬಿರ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಮಾಡಿದ ಜಿಲ್ಲಾ ಕಾರ್ಯದರ್ಶಿ ಭೀಮಸೀ ಕಲಾದಗಿ ಮಾತನಾಡುತ್ತಾ ಈ ಅಧ್ಯಯನ ಶಿಬಿರ ಬದಲಾದ ರಾಜಕೀಯ ಪರಿಸ್ಥಿತಿಯನ್ನು ಪ್ರತಿಬಿಂಬಿಸಿ ಸೂಕ್ತ ಮಾರ್ಗದರ್ಶನ ನೀಡುವಂತೆ ಆಗಲೆಂದು ನುಡಿದರು. ಮಾನವೀಯತೆಯ ಅರಿವು ಮೂಡಿಸಲು ಕೋಮು ಶಕ್ತಿಗಳ ದಮನ ಮಾಡಲು ಆರ್ಥಿಕ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟಕ್ಕೆ ಸ್ಫೂರ್ತಿ ಕೊಡಲೆಂದು ಆಶಿಸಿದರು.

ಉಪನ್ಯಾಸಕರಾದ ಕಾಂ.ಮನ್ನೂಸಾಬ ಕಲಾದಗಿ ಪಕ್ಷ ಮತ್ತು ಸಾಮೂಹಿಕ ಸಂಘಟನೆ ವಿಷಯದ ಮೇಲೆ ಉಪನ್ಯಾಸ ಮಾಡಿದರು. ಮೂಢನಂಬಿಕೆಯು ಶೋಷಿತ ಜನಕ್ಕೆ ಹೀನಾಯ ಘಟ್ಟಕ್ಕೆ ತಳ್ಳಿದೆಯೆಂದರು.

ಈ ಅಧ್ಯಯನದ ಶಿಬಿರದಲ್ಲಿ 40ಜನ ಮುಖ್ಯ ಕಾರ್ಯಕರ್ತರು ಭಾಗವಹಿಸಿದ್ದರು ಎಂದು ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ.ಭೀಮಸೀ ಕಲಾದಗಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೇಂದ್ರೀಯ ಬಜೆಟ್‌ಗಳನ್ನು ವಿರೋಧಿಸಿ ಡಿವೈಎಫ್‌ಐನಿಂದ ರೈಲು ತಡೆ

ವಿಜಾಪುರ : ಕೇಂದ್ರ ಸರಕಾರದ ಸಾರ್ವತ್ರಿಕ ಬಜೆಟ್ ಹಾಗೂ ರೈಲು ದರ ಏರಿಕೆ ವಿರೋಧಿಸಿ ಡಿವೈಎಫ್‌ಐ ಹಾಗೂ ಎಸ್‌ಎಫ್‌ಐ ಜಿಲ್ಲಾ ಸಮಿತಿಗಳು ಜಂಟಿಯಾಗಿ ಏಪ್ರಿಲ್ 1ರಂದು ಹುಬ್ಬಳ್ಳಿ ಸೋಲಾಪುರ ಪ್ಯಾಸೆಂಜರ್ ರೈಲನ್ನು ತಡೆದು ಕೇಂದ್ರ ಸರಕಾರದ ಜನವಿರೋಧಿ ಹೊಸ ಆರ್ಥಿಕ ನೀತಿಯನ್ನು ಪ್ರತಿಭಟಿಸಿದವು.

ರೈಲು ತಡೆದ ಪ್ರಯಾಣಿಕರನ್ನುದ್ದೇಶಿಸಿ ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಮನ್ನುಸಾಬ ಕಲಾದಗಿ ಹಾಗೂ ಕಾರ್ಯದರ್ಶಿ ಸದಾನಂದ ಮೋದಿ ಮಾತನಾಡಿ ಕೇಂದ್ರ ಸರಕಾರವು ಮಂಡಿಸಿದ ಸಾರ್ವತ್ರಿಕ ಬಜೆಟ್ ಸಿಹಿಲೇಪಿತ ಕಹಿ ಬಜೆಟ್ ಆಗಿದ್ದು ಅಲ್ಲದೆ ಬಜೆಟ್‌ನಿಂದ ಬಡವರು ಉಪಯೋಗಿಸುವ ಅಗತ್ಯ ವಸ್ತುಗಳ ಬೆಲೆಗಳು ವಿಪರೀತ ಏರಿದೆ. ಶ್ರೀಮಂತರ ಪರವಾಗಿರುವ ಬಜೆಟ್ ಇದಾಗಿದೆ ಎಂದು ಸರಕಾರದ ಜನವಿರೋಧಿ ನೀತಿಯನ್ನು ವಿವರಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ರೈಲು ಅಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಲಾಯಿತು.

ರೈಲು ತಡೆಯ ನೇತೃತ್ವವನ್ನು ಎಲ್.ವೈ.ಹಂದ್ರಾಳ, ಮೈಬೂಬ ಗುಡಗುಂಟಿ, ರಫೀಕ ಹಂಚಿನಾಳ, ಎಂ.ಎ. ಮೊಕಾಶಿ, ಶೇಸರಾವ್ ಮಾನ್, ಹುಸೇರಿ ಹೆಬ್ಬಾ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಂಚಾಲಕಿ ಅನಸೂಯಾ ಕಾಶೆ ವಹಿಸಿದರೆಂದು ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸದಾನಂದ ಮೋದಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ಯುವಜನರಿಂದ ನಿರುದ್ಯೋಗ ವಿರೋಧಿ ದಿನಾಚರಣೆ

ವಿಜಾಪುರ : ಎಲ್ಲರಿಗೂ ಉಚಿತವಾಗಿ ಶಿಕ್ಷಣ ನೀಡಬೇಕು. ಎಲ್ಲರಿಗೂ ಉದ್ಯೋಗ ಕೊಡಬೇಕು ಇಲ್ಲವಾದರೆ ಉದ್ಯೋಗ ಕೊಡುವವರೆಗೆ ನಿರುದ್ಯೋಗ ಭತ್ಯೆ ಕೊಡಬೇಕು. ಸರಕಾರದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಸುಮಾರು 60 ಸಾವಿರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು, ಉದ್ಯೋಗದ ಯೋಜನೆಗಳನ್ನು ಪ್ರಾರಂಭಿಸಬೇಕು, ವಿಜಯನಗರ ಉಕ್ಕಿನ ಕಾರ್ಖಾನೆ ಕೂಡಲೇ ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿ ನಗರದ ಉದ್ಯೋಗ ವಿನಿಮಯ ಕಾರ್ಯಾಲಯದ ಮುಂದೆ ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಜಿಲ್ಲಾ ಸಮಿತಿಗಳು ಸಂಯುಕ್ತವಾಗಿ ಮಾರ್ಚ್ 29ರಂದು ಮತ ಪ್ರದರ್ಶನ ಮಾಡಿ ಉದ್ಯೋಗ ವಿನಿಮಯ ಕಛೇರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ನಿರುದ್ಯೋಗ ವಿರೋಧಿ ದಿನಾಚರಣೆಯನ್ನು ಆಚರಿಸಿದರು. ನಂತರ ಉದ್ಯೋಗ ವಿನಿಮಯ ಅಧಿಕಾರಿಗಳು ಮನವಿ ಸ್ವೀಕರಿಸಿ ಸರಕಾರಕ್ಕೆ ಕಳಿಸಿಕೊಡುತ್ತೇವೆ ಎಂದು ಭರವಸೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘ ಕಾರ್ಯಾಲಯದಿಂದ ಮೆರವಣಿಗೆಯಲ್ಲಿ ಎಸ್‌ಎಫ್‌ಐ-ಡಿವೈಎಫ್‌ಐ ಕಾರ್ಯಕರ್ತರು ಜನವಿರೋಧಿ ಸರಕಾರದ ನೀತಿಯನ್ನು ಪ್ರತಿಭಟಿಸಿ ಘೋಷಣೆ ಕೂಗುತ್ತಾ ಇದ್ದರು. ಇದನ್ನು ಕಂಡ ಸಾರ್ವಜನಿಕರು ತಮ್ಮ ಸಂತಸ ವ್ಯಕ್ತಪಡಿಸಿದರು.

ಮೆರವಣಿಗೆಯ ನೇತೃತ್ವವನ್ನು ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷ ಮನ್ನೂಸಾಬ ಕಲಾದಗಿ ಕಾರ್ಯದರ್ಶಿ ಸದಾನಂದ ಮೋದಿ, ಮಹಿಬೂಬ ಗುಡಗಂಟಿ, ಎಸ್‌ಎಫ್‌ಐನ ಎಂ.ಎ. ಮೊಕಾಶಿ, ಸಹ ಕಾರ್ಯದರ್ಶಿ ಯಲ್ಲಪ್ಪ ಇರಕಲ್, ಹಣಮಂತ ಹಡಪದ ಮುಂತಾದವರು ಮುಂಚೂಣಿಯಲ್ಲಿದ್ದರು ಎಂದು ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸದಾನಂದ ಮೋ[...] ಅಧ್ಯಕ್ಷ ಮನ್ನೂಸಾಬ ಕಲಾದಗಿ ಎಸ್‌ಎಫ್[...] ಎಂ.ಎ. ಮೊಕಾಶಿ ಅವರು ಪತ್ರಿಕಾ ಹೇಳಿಕೆಯ[...] ತಿಳಿಸಿದ್ದಾರೆ.

ಭಗತ್ ಸಿಂಗ್ ಹುತಾತ್ಮ ದಿನಾಚರಣೆ

ಶ್ರೀನಿವಾಸಪುರದಲ್ಲಿ ಮಾರ್ಚ್ 29ರ[...] ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ವತಿಯಿ[...] ಹುತಾತ್ಮ ಭಗತ್‌ಸಿಂಗ್‌ರ 62ನೇ ಹುತ[...] ದಿನಾಚರಣೆ ಅಂಗವಾಗಿ ಬಹಿರಂಗ [...]ಯನ್ನು ಏರ್ಪಡಿಸಲಾಗಿತ್ತು. ಎಸ್‌ಎಫ್[...] ಮುಖಂಡರಾದ ಪಿ.ಆರ್. ನಾರಾಯಣಸ್ವಾ[...] ಸ್ವಾಗತ ಮಾಡಿದರು.

ಸ್ವಾತಂತ್ರ್ಯ ಹೋರಾಟಗಾರರಾದ ಎಸ್[...] ವೀರಪ್ಪರವರು ಮೈತ್ರಿ ಜ್ಯೋತಿ ಬೆಳಗಿ[...] ಮೂಲಕ ಉದ್ಘಾಟನೆ ಮಾಡಿದರು. [...] ಭಾಷಣದಲ್ಲಿ ಭಗತ್ ಸಿಂಗ್‌ರ ದೇಶಪ್ರೇ[...] ತ್ಯಾಗ, ಬಲಿದಾನ ಮತ್ತು ಅಸಾಧಾರಣ ಧೈ[...] ನಮ್ಮೆಲ್ಲರ ದಾರಿದೀಪವಾಗಲಿ ಎಂದು [...]ದರು.

ಈ ಸಭೆಗೆ ಮುಖ್ಯ ಅತಿಥಿಗಳಾಗಿ [...]ಮಿಸಿದ್ದ ಶ್ರೀನಿವಾಸಪುರ ತಾಲೂಕಿನ ತಹ[...]ಶೀಲ್ದಾರರಾದ ಡಿ.ವಿ.ನರಸಿಂಹಯ್ಯನವರು [...] ಭಾಷಣದಲ್ಲಿ ಸಾರ್ವಜನಿಕರನ್ನು ಕುರಿತು [...]ತ್ತಿನ ಯುವಜನತೆ ಭಗತ್‌ಸಿಂಗ್ ಸುಖದೇ[...] ಮತ್ತು ರಾಜ್‌ಗುರುರವರಂತೆ ಆದರ್ಶ [...]ಳಾಗಿ ಬೆಳೆಯಬೇಕಾಗಿದೆ ಎಂದರು.

ಎಸ್‌ಎಫ್‌ಐನ ಮಾಜಿ ಮುಖಂಡ[...] ಎನ್.ವೀರಪ್ಪರೆಡ್ಡಿಯವರು ಈ ಸಭೆ[...] ಉಪಸ್ಥಿತರಿದ್ದರು.

ಅಧ್ಯಕ್ಷತೆಯನ್ನು ವಹಿಸಿದ್ದ ಡಿ.ಎಂ.ನಾ[...]ಯಣಸ್ವಾಮಿ(ಶ್ರೀನಿವಾಸಪುರ ತಾಲೂಕಿನ ಕ[...]ಟಕ ಪ್ರಾಂತ ರೈತಸಂಘದ ಅಧ್ಯಕ್ಷರು)ರ[...] ತಮ್ಮ ಭಾಷಣದಲ್ಲಿ ಭಗತ್‌ಸಿಂಗ್‌ರ ವಿದ್ಯಾ[...] ಜೀವನ, ಹೋರಾಟ ಜೀವನದ ಚರಿತ್ರೆಗ[...] ಹೇಳುತ್ತಾ ಯಾವ ಭಗತ್‌ಸಿಂಗ್ ನಗು ನ[...] ಸಾಮ್ರಾಜ್ಯಶಾಹಿಗಳ ವಿರುದ್ಧದ ಹೋರಾಟ[...] ನೇಣುಗಂಬ ಹತ್ತಿದ್ದನೋ ಅಂತಹ ಸಾಮ್[...]ಶಾಹಿಗಳಿಗೆ ಮತ್ತೇ ಈ ದೇಶಾ ಒತ್ತೆಯಾ[...] ಅಪಾಯ ಈಗ ಕಾದಿದೆ ಎಂದರು.

ಡಿವೈಎಫ್‌ಐ ಮುಖಂಡರಾದ ವಿ.[...]ಪ್ಪನವರು ವಂದನಾರ್ಪಣೆ ಮಾಡಿದರು.

'ಸಾರ್ಕ್' ಸಮ್ಮೇಳನ ಢಾಕ್ಕಾದಲ್ಲಿ: 'ಸಪ್ತ' ವ್ಯಾಪಾರ ಒಪ್ಪಂದಕ್ಕೆ ಸಹಿ

ಸಾರ್ಕ್(SAARC - ದಕ್ಷಿಣ ಷ್ಯಾ ಪ್ರಾದೇಶಿಕ ಸಹಕಾರ ಮಂಡಳಿ)ನ ನೇ ಶೃಂಗಸಭೆ ಬಾಂಗ್ಲಾದೇಶದ ರಾಜ ನಿ ಢಾಕ್ಕಾದಲ್ಲಿ ಜರುಗಿತು. ಇದು ಎರಡು ರಿ ಮುಂದಕ್ಕೆ ಹಾಕಲಾಗಿತ್ತು. ಡಿಸೆಂಬರ್ ಲ್ಲಿ ಮೊದಲು ನಡೆಯಬೇಕಾಗಿದ್ದ ಶೃಂಗ ಭೆ ಮೇಲೆ ಅಯೋಧ್ಯಾ ಘಟನೆಗಳ ಕರಿ ರಳು ಬಿತ್ತು. ಅದರಿಂದಾಗಿ ಜನವರಿಗೆ ಮುಂದಕ್ಕೆ ಹಾಕಲಾಯಿತು. ಪುನಃ ಭಾರ ದ ಪ್ರಧಾನಿ ನರಸಿಂಹರಾವ್ ವಿರುದ್ಧ ಬಾಂಗ್ಲಾದೇಶದ ಇಸ್ಲಾಮಿಕ್ ಮೂಲಭೂ ವಾದಿಗಳು ಹಾಕಿದ ವೃಷ್ಟಿಯಿಂದ ಪುನಃ ಮುಂದಕ್ಕೆ ಹಾಕಲಾಯಿತು.

ಈ ಬಾರಿಯ ಶೃಂಗಸಭೆಯಲ್ಲಿ ಬಾಂ ಗ್ಲಾದೇಶದ ಪ್ರಧಾನಿ ಬೇಗಂ ಖಲೀದಾ ಯಾ, ಶ್ರೀಲಂಕಾದ ಅಧ್ಯಕ್ಷ ಪ್ರೇಮದಾ ರಿಂದ ಸಾರ್ಕ್‌ನ ಅಧ್ಯಕ್ಷ ಪದವಿ ಬದಲಾ ಯಿತು. ಈ ಶೃಂಗಸಭೆಯೊಂದಿಗೆ 7 ದೇಶ ಳ ಈ ಕೂಟದಲ್ಲಿ ಎಲ್ಲಾ ದೇಶಗಳ ಮುಖ್ಯ ರು ಕೂಟದ ಅಧ್ಯಕ್ಷ ಪದವಿಗೆ ಬಂದ ಹಾಗೆ ಗಿದೆ.

ಈ ಬಾರಿಯ ಶೃಂಗಸಭೆಯ ಮುಂದೆ ರಡು ಪ್ರಶ್ನೆಗಳು ಪ್ರಮುಖವಾಗಿ ಇತ್ತು. ಕ್ಷಿಣ ಏಶ್ಯಾಕ್ಕೆ ವಾಣಿಜ್ಯ ಒಕ್ಕೂಟವೊಂದನ್ನು ಚಿಸುವುದು. ಒಂದು. ಭಯೋತ್ಪಾದನೆ ಡೆಗಟ್ಟಲು ಅನುಕೂಲವಾಗುವಂತೆ ಹಕಾರಕ್ಕೆ ಕಾನೂನು ರೂಪ ಕೊಡು ದು ಇನ್ನೊಂದು. ಮೊದಲನೆಯ ವಿಷ ದಲ್ಲಿ ಈ ಶೃಂಗಸಭೆ ಪ್ರಮುಖ ಹೆಜ್ಜೆ ಟ್ಟಿದೆ ಎನ್ನಬಹುದು. ಸಪ್ತ(SAPTA Saarc Preferential Trading greement) ಒಪ್ಪಂದದ ಚೌಕಟ್ಟಿಗೆ ಪ್ಪಿಗೆ ನೀಡುವ ಮೂಲಕ ಎರಡನೆಯದ ರಲ್ಲಿ ಅಂತಹ ಏನೂ ಪ್ರಗತಿಯಾಗಲಿಲ್ಲ.

ಪ್ರಾದೇಶಿಕ ವ್ಯಾಪಾರ ಕೂಟಗಳು ಜಗತ್ತಿನಲ್ಲಿ ಇತ್ತೀಚೆಗೆ ಹಲವು ಪ್ರದೇಶಗಳಲ್ಲಿ ಆಗಿವೆ. ಪ್ರಾದೇಶಿಕ ವ್ಯಾಪಾರ ಒಕ್ಕೂಟಗಳೆಂದರೆ ಒಂದು ಪ್ರದೇಶದಲ್ಲಿರುವ ಹಲವು ದೇಶಗಳು ಸೇರಿ, ಆ ಪ್ರದೇಶದ ಒಳಗಿರುವ ದೇಶಗಳ ನಡುವಣ ವ್ಯಾಪಾರದ ನಿಯಮಗಳು, ಇತರ ದೇಶಗಳ ಜತೆ ವ್ಯಾಪಾರಕ್ಕಿಂತ ಹೆಚ್ಚು ಮುಕ್ತವಿರುವಂತೆ(ಹೆಚ್ಚಿನ ಶುಲ್ಕ ಇತ್ಯಾದಿ ನಿರ್ಬಂಧ ಇಲ್ಲದಂತೆ) ನೋಡಿಕೊಳ್ಳುವ ಒಪ್ಪಂದ. ಯುರೋಪಿಯನ್ ಮಾರುಕಟ್ಟೆ ಸಮುದಾಯ, ಉತ್ತರ ಅಮೇರಿಕಾದ ಒಕ್ಕೂಟ(NAFTA), ದಕ್ಷಿಣ ಪೂರ್ವ ಏಶ್ಯಾದ ASEAN - ಇಂತಹ ಒಕ್ಕೂಟಗಳಿಗೆ ಉದಾಹರಣೆಗಳು.

ಸಾಮಾನ್ಯವಾಗಿ ನೆರೆಹೊರೆಯ ದೇಶಗಳ ನಡುವೆ ಸ್ವಾಭಾವಿಕವಾಗಿ ಚಾರಿತ್ರಿಕವಾಗಿ ಪ್ರಾಕೃತಿಕ ಕಾರಣಗಳಿಂದ ಪರಸ್ಪರ ಅವಲಂಬನೆ ಬಹಳ ಹೆಚ್ಚಿರುತ್ತದೆ. ಅಲ್ಲದೆ ವ್ಯಾಪಾರ ಸಹ ಹೆಚ್ಚಿರುತ್ತದೆ. ಇಂತಹ ವ್ಯಾಪಾರ ಒಪ್ಪಂದಗಳಿಂದ ಎಲ್ಲಾ ದೇಶಗಳ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಅದರಲ್ಲೂ ಮೂರನೇ ಜಗತ್ತಿನ ದೇಶಗಳ ಕೂಟದ ಸಂದರ್ಭದಲ್ಲಿ ಇದು ವಿಶೇಷವಾಗಿ ಪ್ರಯೋಜನಕಾರಿ. ಏಕೆಂದರೆ ಹೆಚ್ಚಿನ ಮೂರನೇ ಜಗತ್ತಿನ ದೇಶಗಳ ವ್ಯಾಪಾರ, ಪಾಶ್ಚಿಮಾತ್ಯ ದೇಶಗಳ ಜತೆ. ಇಂತಹ ವ್ಯಾಪಾರ ಯಾವಾಗಲೂ ಮೂರನೇ ಜಗತ್ತಿನ ದೇಶಗಳಿಗೆ ಅನುಕೂಲಕರವಾಗಿ ಇರುವುದಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ.

ಸಾರ್ಕ್ 1985ರಲ್ಲಿ ಸ್ಥಾಪನೆಯಾದಾಗಿನಿಂದಲೂ, ಇಂತಹ ಒಂದು ವ್ಯಾಪಾರ ಒಪ್ಪಂದಕ್ಕೆ ಬರಬೇಕೆಂದು ಮಾತುಕತೆ ನಡೆಯುತ್ತಿತ್ತು. ಈ ನಿಟ್ಟಿನಲ್ಲಿ 'ಸಪ್ತ'(ಸಾರ್ಕ್ ವಿಶೇಷ ವಾಣಿಜ್ಯ ಒಪ್ಪಂದ) ಒಂದು ಪ್ರಮುಖ ಹೆಜ್ಜೆ. ಒಪ್ಪಂದದ ಪ್ರಕಾರ ಯಾವ ಸರಕುಗಳಿಗೆ ಸುಂಕ ರಿಯಾಯಿತ ಎಷ್ಟು ಇರುತ್ತದೆ ಇತ್ಯಾದಿ ವಿವರಗಳನ್ನು ಸಾರ್ಕ್ ದೇಶಗಳು ತಯಾರಿಸಬೇಕಾಗಿದೆ.

ಭಯೋತ್ಪಾದಕತೆ ಬಗ್ಗೆ ಯಾವುದೇ ನಿರ್ದಿಷ್ಟ ಕ್ರಮದ ಬಗ್ಗೆ ಒಪ್ಪಂದ ಸಾಧ್ಯವಾಗಿಲ್ಲ.

ಪ್ರತಿ ಸಾರ್ಕ್ ಶೃಂಗಸಭೆಯಲ್ಲೂ ಯಾವುವಾದರೂ ಎರಡು ದೇಶಗಳ ನಡುವಣ ವೈಮನಸ್ಯ ಸಭೆಯ ಹೊರಗೆ ಚರ್ಚಿಸಲ್ಪಡುತ್ತಿತ್ತು.

ಈ ಬಾರಿ ಮುಂಬಯಿ ಬಾಂಬ್ ಸ್ಫೋಟದ ಸಂಬಂಧವಾಗಿ ಭಾರತಕ್ಕೆ ಬೇಕಾಗಿರುವ ಮೆಮೋನ್ ಸೋದರರು ಪಾಕಿಸ್ತಾನದಲ್ಲಿ ಇದ್ದಾರೆ. ಅವರನ್ನು ಹಿಡಿದುಕೊಡಲು ಪಾಕಿಸ್ತಾನ ಮುತುವರ್ಜಿ ವಹಿಸುತ್ತಿಲ್ಲ ಎಂಬ ವಿವಾದದ ಬಗ್ಗೆ ಭಾರತ-ಪಾಕಿಸ್ತಾನದ ಪ್ರಧಾನಿಗಳು ಖಾಸಗಿಯಾಗಿ ಚರ್ಚಿಸಿದರು.

ಶರತ್ ಚಂದ್ರ

ದ.ಆಫ್ರಿಕ ಕಮ್ಯುನಿಸ್ಟ್ ನಾಯಕನ ಕೊಲೆ

ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕ್ರಿಸ್ ಹನಿಯವರನ್ನು ಕೊಲೆ ಮಾಡಲಾಗಿದೆ. ಅವರನ್ನು ಜೊಹೆನ್ಸ್‌ಬರ್ಗ್ ಮನೆಯಲ್ಲಿ ಪೇಪರ್ ತೆಗೆದುಕೊಳ್ಳಲು ಹೊರಗೆ ಬಂದಾಗ ಕೊಲೆ ಮಾಡಲಾಗಿದೆ ಎಂದು ವರದಿಯಾಗಿದೆ.

ಕ್ರಿಸ್ ಹನಿ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ನ ಹಿರಿಯ ನಾಯಕರಲ್ಲೊಬ್ಬರೂ ಆಗಿದ್ದರು. ಹಲವಾರು ವರ್ಷ ಅವರು ಎಎನ್‌ಸಿಯ ಸೈನಿಕ ವಿಭಾಗದ ಮುಖ್ಯಸ್ಥರಾಗಿದ್ದರು. ಅವರಿಗೆ 50 ವರ್ಷ ವಯಸ್ಸಾಗಿತ್ತು. ಅವರು ಕರಿಯರ ವಿಮೋಚನಾ ಚಳುವಳಿಯ ಅತ್ಯಂತ ಜನಪ್ರಿಯ ನಾಯಕರಲ್ಲೊಬ್ಬರಾಗಿದ್ದರು.

ಕ್ರಿಸ್ ಹನಿಯವರ ಕೊಲೆ ಪುನಃ ಕರಿಯ-ಬಿಳಿಯರ ಘರ್ಷಣೆಗೆ ಎಡೆಕೊಡಬಹುದೆಂಬ ತೀವ್ರ ಆತಂಕ ಹರಡಿದೆ. ಇದರಿಂದ ಮಂದಗತಿಯಲ್ಲಾದರೂ ಸಾಗುತ್ತಿದ್ದ, ಸರಕಾರ-ಎಎನ್‌ಸಿ ಮಾತುಕತೆಗಳಿಗೆ ಧಕ್ಕೆ ಬರಬಹುದು ಎನ್ನಲಾಗಿದೆ. ಕೊಲೆಗಾರರ ಉದ್ದೇಶವೇ ಅದು ಆಗಿರಬಹುದು. ವರ್ಣ ಭೇದ ಕೊನೆಗಾಣಿಸಿ ಜನಾಂಗಭೇದವಿಲ್ಲದ ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾ ಸ್ಥಾಪಿಸುವ ಪ್ರಯತ್ನಗಳಿಗೂ ಧಕ್ಕೆ ಬರಬಹುದು. ಒಬ್ಬನನ್ನು ಈ ಸಂಬಂಧದಲ್ಲಿ ಬಂಧಿಸಲಾಗಿದೆ ಎಂದು ಸರಕಾರ ಹೇಳಿದೆ.

ನೆಲ್ಸನ್ ಮಂಡೇಲಾ ಸೇರಿದಂತೆ ಹಲವಾರು ರಾಜಕೀಯ, ಚರ್ಚ್ ನಾಯಕರು ಈ ಕೊಲೆಯಿಂದ ಪ್ರಚೋದಿತಗೊಂಡು ಶಾಂತಿಭಂಗವಾಗದಂತೆ ವರ್ತಿಸಬೇಕೆಂದು ಜನತೆಗೆ ಕಳಕಳಿಯ ಮನವಿ ಮಾಡಿದ್ದಾರೆ.

ಕಾಂಬೋಡಿಯಾದಲ್ಲಿ ಚುನಾವಣಾ ಪ್ರಚಾರ ಆರಂಭ

ಕಾಂಬೋಡಿಯಾದಲ್ಲಿ ವಿಶ್ವ ಸಂಸ್ಥೆ ಉಸ್ತುವಾರಿಯಲ್ಲಿ ಮೇ 23-25 ಚುನಾವಣೆ ನಡೆಯಲಿದ್ದು, ಅದಕ್ಕೆ ತಯಾರಿ, ಪ್ರಚಾರ ಈಗಾಗಲೇ ಆರಂಭವಾಗಿದೆ. ಖೇಮರ್ ರೋಜ್ ಎಂಬ ಪ್ರಮುಖ ಗೆರಿಲ್ಲಾ ಗುಂಪು ಚುನಾವಣೆ ಬಹಿಷ್ಕರಿಸಿದ್ದು, ವಿಶ್ವ ಸಂಸ್ಥೆ ಪಡೆಗಳ ಮೇಲೆ ಆಕ್ರಮಣ ಮಾಡಿದ್ದರೂ ಚುನಾವಣೆ ನಡೆಸುವ ತೀರ್ಮಾನವನ್ನು ಕೈಗೊಳ್ಳಲಾಗಿದೆ. ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಬೊಟ್ರೋಸ್ ಘಾಲಿ ಕಾಂಬೋಡಿಯಾಕ್ಕೆ ಭೇಟಿ ನೀಡಿ ವಿಶ್ವ ಸಂಸ್ಥೆ ಉಸ್ತುವಾರಿ ಪಡೆಗಳ ಮುಖ್ಯಸ್ಥರು ಹಾಗೂ ಸುಪ್ರೀಂ ನ್ಯಾಷನಲ್ ಕೌನ್ಸಿಲ್‌ನ ನಾಯಕರೊಂದಿಗೆ ಚುನಾವಣಾ ವ್ಯವಸ್ಥೆ, ಕಾನೂನು ಹಾಗೂ ಸುವ್ಯವಸ್ಥೆ ಸ್ಥಿತಿ ಬಗ್ಗೆ ಮಾತುಕತೆ ನಡೆಸಿದರು. 43 ಲಕ್ಷ ಮತದಾರರು ಮತದಾನದಲ್ಲಿ ಭಾಗವಹಿಸಲಿದ್ದು 50 ಸಾವಿರ ವಿಶ್ವಸಂಸ್ಥೆ ಪಡೆಗಳು ಚುನಾವಣಾ ಮೇಲ್ವಿಚಾರಣೆ ನೋಡಿಕೊಳ್ಳಲಿವೆ.



ಸೈಬಿರಿಯಾದಲ್ಲಿ ಅಣ್ವಸ್ತ್ರ ಸ್ಥಾವರದಲ್ಲಿ ಅಪಘಾತ

ರಶ್ಯದ ಸೈಬಿರಿಯಾದಲ್ಲಿ ಟೋಮ್‌ಸ್ಕ್-7 ಎಂಬ ಪಟ್ಟಣದಲ್ಲಿ ಅಣ್ವಸ್ತ್ರ ಸ್ಥಾವರ ಒಂದರಲ್ಲಿ, ವಿಕಿರಣಯುಕ್ತ ಕಲ್ಮಶ ಶೇಖರಿಸುವ ಟ್ಯಾಂಕ್ ಒಂದು ಸ್ಫೋಟಗೊಂಡಿದೆಯೆಂದು ವರದಿಯಾಗಿದೆ. ಇದರಿಂದ ವಿಕಿರಣವಾಗಿದ್ದು, ಸುತ್ತಮುತ್ತಲ ಪ್ರದೇಶದ ಜನರಿಗೆ ಅಪಾಯವಿದೆ ಎನ್ನಲಾಗಿದೆ. ಆದರೆ ವಿಕಿರಣ ಪರಿಣಾಮಕ್ಕೊಳಗಾದ ಪ್ರದೇಶ ಮತ್ತು ಜನರ ನಿಖರ ವಿವರಗಳು ಇನ್ನೂ ದೊರೆತಿಲ್ಲ. ರಶ್ಯದಲ್ಲಿ ಚೆರ್ನೋಬಿಲ್‌ನಂತರ ಇದು ಅತಿ ದೊಡ್ಡ ಅಣು ಸ್ಥಾವರ ಅಪಘಾತ ಎನ್ನಲಾಗಿದೆ.

ಸೈಬಿರಿಯಾದ ಟೋಮ್‌ಸ್ಕ್- ಸ್ಥಾವರ ಪ್ಲುಟೋನಿಯಂನ್ನು ಬಳಸಿದ ವಿಕಿರಣ ವಸ್ತುಗಳಿಂದ ತಯಾರಿಸುವ ಮೂರು ಸ್ಥಾವರಗಳಲ್ಲಿ ಒಂದು.

ಕಾಂಗ್ರೆಸ್ಸಿಗರ ಚಡಪಡಿಕೆಯನ್ನು ಬಗೆಹರಿಸದ ಸೂರಜ್‌ಕುಂಡ್ ಅಧಿವೇಶನ

ಹರ್ಯಾಣದ ಸೂರಜ್‌ಕುಂಡ್‌ನಲ್ಲಿ ಮಾರ್ಚ್ 27-28ರಂದು ನಡೆದ ಅಖಿಲ ರತ ಕಾಂಗ್ರೆಸ್(ಐ) ಸಮಿತಿ[ಎಐಸಿಸಿ(ಐ)] ಅಧಿವೇಶನ ಈ ಆಳುವ ಪಕ್ಷದ ಒಳ ನ ಪ್ರಜಾಪ್ರಭುತ್ವ' ಮಾದರಿ ಎಂತದ್ದು ಂದು ಬಿಚ್ಚಿಟ್ಟ ಅಧಿವೇಶನ. ಒಂದೆಡೆ ವಿ. ನರಸಿಂಹರಾವ್ ಮತ್ತು ಅವರ ರಾಕು ಹೇಳುವ ಮಂದಿ ಎಲ್ಲಾ ವಿರೋಧ ನ್ನು ಹತ್ತಿಕ್ಕಿ ಕಾಂಗ್ರೆಸ್(ಐ) ಮತ್ತೆ 'ನಾಮಕ ಣ ರಾಜ್ಯಭಾರ'ಕ್ಕೆ ಹಿಂದಿರುಗುವಂತೆ ಮಾಡಿ ರೆ ಮತ್ತೊಂದು ಕಡೆ ಕೋಮುವಾದವನ್ನು ದುರಿಸುವ ಸಮರದಲ್ಲಿ, ದೇಶದ ಆರ್ಥಿಕ ಕ್ಕಟ್ಟನ್ನು ಎದುರಿಸುವಲ್ಲಿ ಆಳುವ ಪಕ್ಷದ ಪೂರ್ಣ ಸೋಲನ್ನು, ದಿವಾಳಿಕೋರತನ ನ್ನು ಎತ್ತಿ ತೋರಿತು ಈ ಅಧಿವೇಶನ.

ಅಧಿವೇಶನದ ಮೊದಲು ತೀವ್ರವಾಗಿ ಟಗೊಂಡ 'ಭಿನ್ನಮತ'ವನ್ನು ಯಶಸ್ವಿ ಾಗಿ ತೊಡೆದುಹಾಕಿದ್ದೇವೆಂದು ಕಾಂಗ್ರೆಸ್)ನ ಮುಖಂಡರು ಈಗ ಬೀಗುತ್ತಿ ಹುದು. ಆದರೆ ಅವರು ಅದನ್ನು ಧಿಸಿದ ರೀತಿ ಅವರು ಎಷ್ಟೊಂದು ತಗೊಂಡಿದ್ದರೆಂಬು ನ್ನು ಬಯಲಿಗೆಳೆಯಿತು.

ಕೋಮುವಾದೀ ಶಕ್ತಿಗಳನ್ನು ಎದುರಿ ದ ಚೈತನ್ಯವನ್ನು ಪಕ್ಷದಲ್ಲಿ ಮೂಡಿಸಲು ಕ್ಷದ ಸಂಘಟನೆಯತ್ತ ಪ್ರಮುಖ ಗಮನ ರಬಲ್ಲ ಒಬ್ಬ ಅಧ್ಯಕ್ಷ ಬೇಕು ಎನ್ನುತ್ತಾ ಮುಖೀಯರು', 'ಒಬ್ಬರಿಗೆ ಒಂದೇ ಹುದ್ದೆ' ಬ ಘೋಷಣೆ ಹಾಕಿದ್ದರು. ಈ ಬಗ್ಗೆ ಮತದಾನ ನಡೆಯಬೇಕು ಎಂದಿದ್ದರು. ಘೋಷಣೆ ಪ್ರಧಾನಮಂತ್ರಿಗಳಿಗೆ ಅನ್ವ ಾಗುವುದಿಲ್ಲ ಎಂಬ ಅಧಿಕೃತ ನಿರ್ಣಯವನ್ನು ಅಂಗೀಕರಿಸುವಂತೆ ಮಾಡಿ ಅವರ ಬಾಯಿ ಮುಚ್ಚಲಾಯಿತು.

ಇದರಲ್ಲಿ ಆಶ್ಚರ್ಯವೇನೂ ಇಲ್ಲದಿದ್ದರೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಖಾಲಿ ಇರುವ ಎರಡು ಹುದ್ದೆಗಳಿಗೆ ಚುನಾವಣೆ ನಡೆಯದಂತೆ ಮಾಡಿ ನಾಮಕರಣ ಮಾಡುವಂತೆ ಮಾಡಿಸಿಕೊಂಡ ರೀತಿ ಮಾತ್ರ ದಿಗಿಲು ಹುಟ್ಟಿಸುವಂತದ್ದು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರೂ ಸೇರಿದಂತೆ 21 ಸದಸ್ಯರು. ಇದರಲ್ಲಿ 10 ಮಂದಿ ಚುನಾಯಿತರು, 10 ಮಂದಿ ನಾಮಕರಣ ಸದಸ್ಯರು. ಕಳೆದ ಬಾರಿ ತಿರುಪತಿಯಲ್ಲಿ ನಡೆದ ಚುನಾವಣೆಯಲ್ಲಿ ಒಬ್ಬರೂ ಮಹಿಳಾ ಸದಸ್ಯರು, ಹರಿಜನ-ಗಿರಿಜನ ಸದಸ್ಯರು ಆರಿಸಿ ಬರಲಿಲ್ಲ ಎಂಬ ಬಗ್ಗೆ ಪ್ರಧಾನಿಗಳ 'ಆತಂಕ'ದ ನಾಟಕ ನಡೆದು ಎಲ್ಲಾ ಚುನಾಯಿತ ಸದಸ್ಯರು ಕಾಂಗ್ರೆಸ್ ಅಧ್ಯಕ್ಷರಿಗೆ ತಮ್ಮ ರಾಜಿನಾಮೆ ಸಲ್ಲಿಸಿದ್ದರು. ಸ್ವಲ್ಪ ಸಮಯದ ನಂತರ ಕಾಂಗ್ರೆಸ್ ಅಧ್ಯಕ್ಷರು ಅರ್ಜುನ್‌ಸಿಂಗ್ ಮತ್ತು ಶರದ್ ಪವಾರ್‌ರವರ ರಾಜಿನಾಮೆಯನ್ನು ಮಾತ್ರ ಸ್ವೀಕರಿಸಿ ಅವರನ್ನು ನಾಮಕರಣ ಮಾಡಿದರು.

ಈ ಎರಡು ಸ್ಥಾನಗಳಿಗೆ ಚುನಾವಣೆ ನಡೆಯಬೇಕಾಗಿತ್ತು. ಮೊದಲ ದಿನ ಸೂರಜ್‌ಕುಂಡ್ ಅಧಿವೇಶನದಲ್ಲಿ ಈ ಪ್ರಶ್ನೆ ಎದ್ದಾಗ ಮೊದಲ ಸಾಲಲ್ಲಿ ಕುಳಿತಿದ್ದ ಕೆಲವು ಬಾಲಬಡುಕರು "ಚುನಾವಣೆಯ ಅಗತ್ಯವಿಲ್ಲ. ನೀವೇ ಆರಿಸಲು ಅಧಿಕಾರ ನೀಡುತ್ತೇವೆ" ಎಂದು ದೊಬ್ಬೆ ಆರಂಭಿಸಿದರು. ತಕ್ಷಣ ಕೇರಳ ಪ್ರದೇಶ ಕಾಂಗ್ರೆ ಸಮಿತಿ ಅಧ್ಯಕ್ಷ, ವಯಲಾರ್ ರವಿ ಕಾಂಗ್ರೆಸ್(ಐ) ಅಧ್ಯಕ್ಷರಿಗೆ ಅಧಿಕಾರ ನೀಡುವ ನಿರ್ಣಯ ಮಂಡಿಸಿದರು. ಬಿಹಾರದ ಜಗನ್ನಾಥ್ ಮಿಶ್ರಾ ಅನುಮೋದಿಸಿದರು. ಇವೆಲ್ಲಾ ಎಷ್ಟು ವೇಗವಾಗಿ ನಡೆಯಿತೆಂದರೆ ಚುನಾವಣೆ ನಡೆಯಬೇಕು ಎಂದಿದ್ದವರು ಕಕ್ಕಾಬಿಕ್ಕಿಯಾದರು. ಈ ಪ್ರಜಾಪ್ರಭುತ್ವ-ವಿರೋಧಿ ವರ್ತನೆಯನ್ನು ಪ್ರತಿಭಟಿಸಲು ಎದ್ದು ಧಾವಿಸಿದ ಅವರನ್ನು ಎತ್ತಿ ಹೊರ ಹಾಕಲಾಯಿತು. ಏಕೆಂದರೆ ಅಧಿವೇಶನದ ಪೆಂಡಾಲಿನ ಮೊದಲ ಸಾಲುಗಳಲ್ಲೆಲ್ಲಾ ನರಸಿಂಹರಾವ್ 'ವಿಧೇಯ' ಪ್ರತಿನಿಧಿಗಳೇ ತುಂಬಿದ್ದರು. ಕಾಂಗ್ರೆಸ್(ಐ) ಅಧ್ಯಕ್ಷ, ನರಸಿಂಹರಾವ್ "ಆಯ್ಕೆಯನ್ನು ನನಗೇ ಬಿಟ್ಟಿದ್ದೀರಿ. ನಾನು ಅಸಹಾಯಕ. ನೀವು ಬಯಸಿದಂತೆ ನಡೆಯಬೇಕು" ಎಂಬ ನಾಟಕವಾಡಿದರು. ಅಲ್ಲಿಗೆ ಪ್ರಶ್ನೆ ಪರಿಹಾರವಾಯಿತು!

> ***ಡಿಸೆಂಬರ್ 6ರ ನಂತರ ದೇಶದಲ್ಲುಂಟಾದ ಕ್ಷುಬ್ಧ ಪರಿಸ್ಥಿತಿ, ಅದನ್ನು ಎದುರಿಸುವಲ್ಲಿ ಕಾಂಗ್ರೆ ಮುಖಂಡತ್ವ ತೋರಿರುವ ಪುಕ್ಕಲುತನ, ಹಿಂಜರಿಕೆ, ಸಾಮಾನ್ಯ ಕಾಂಗ್ರೆಸ್ಸಿಗರಲ್ಲಿ ಚಡಪಡಿಕೆ, ಮುಖಂಡತ್ವದ ಬಗ್ಗೆ ಅಸಮಾಧಾನ ಉಂಟು ಮಾಡಿದ್ದ ಹಿನ್ನೆಲೆಯಲ್ಲಿ ಅಖಿಲ ಭಾರತ ಕಾಂಗ್ರೆಸ್(ಐ) ಸಮಿತಿಯ ಸೂರಜ್‌ಕುಂಡ್ ಅಧಿವೇಶನ ನಡೆದರೂ, ಅದರಲ್ಲಿ ನರಸಿಂಹರಾಯರ ಕೈ ಮೇಲಾದಂತೆ ಕಂಡರೂ ಅದರಿಂದ ಕಾಂಗ್ರೆಸ್ಸಿಗರಿಗೆ ಏನೂ ಉಪಯೋಗವಾದಂತೆ ಕಾಣುತ್ತಿಲ್ಲ. ಸರಿಯಾದ ದಿಕ್ಕು ತೋರಿಸಿಲ್ಲ ಎನ್ನುತ್ತಾರೆ ಇಂಡಿಯಾ ನ್ಯೂಸ್ ನೆಟ್‌ವರ್ಕ್ (ಐಎ.ನ್.ಎನ್)ನ ಮಾನಿನಿ ಚಟರ್ಜಿ ಈ ಲೇಖನದಲ್ಲಿ.***

ಆದರೆ ಚುನಾವಣೆ ನಡೆಸದಿರುವುದೇ ಕಾಂಗ್ರೆಸ್(ಐ) ಮುಖಂಡತ್ವದಲ್ಲಿ ಆತ್ಮವಿಶ್ವಾಸವಿಲ್ಲ, ಚುನಾವಣೆ ನಡೆದಿದ್ದರೆ ನರಸಿಂಹರಾವ್ ಬೆಂಬಲಿಗರ ಹಾಗೂ ಅವರ ನಿಲುವನ್ನು ವಿರೋಧಿಸುವವರ ನಡುವಿನ ಶಕ್ತಿ ಪ್ರದರ್ಶನ ತಡೆಯುವುದೇ ಅದರ ಉದ್ದೇಶವಾಗಿತ್ತು ಎಂಬುದಂತೂ ಸ್ಪಷ್ಟವಾಗಿದೆ.

ದೊಡ್ಡ ಪತ್ರಿಕೆಗಳಲ್ಲಿ ಸೂರಜ್‌ಕುಂಡ್ ಅಧಿವೇಶನದಲ್ಲಿ ಕಾಂಗ್ರೆ ಒಳಜಗಳದ ಬಗ್ಗೆಯೇ ಮುಖ್ಯ ಪ್ರಚಾರ ದೊರೆಯಿತು. ಉಳಿದ ಅಂಶಗಳು ಹಿನ್ನೆಲೆಗೆ ದೂಡಲ್ಪಟ್ಟವು. ಆಳುವ ಪಕ್ಷದ ಮಹತ್ವಪೂರ್ಣ ಅಧಿವೇಶನ ರಾಜಕೀಯ ವರದಿಯಲ್ಲಂತೂ ದೇಶದ ಪರಿಸ್ಥಿತಿಯ ಬಗ್ಗೆ ಯಾವುದೇ ವಿಶ್ಲೇಷಣೆಯಿಲ್ಲ, ಸ್ವಯಂ ಪರೀಕ್ಷೆಯಿಲ್ಲ, ಗಂಭೀರ ಕೋಮು ಪರಿಸ್ಥಿತಿಯನ್ನು ಎದುರಿಸುವ ತಂತ್ರದ ಪ್ರಸ್ತಾಪ ಇಲ್ಲ. ಕೇವಲ ಕಾಂಗ್ರೆ ಜಾತ್ಯಾತೀತತೆಗೆ ಬದ್ಧ ಎಂದು ಸಾರುವ ಟೊಳ್ಳು ಮಾತುಗಳಷ್ಟೇ. ಡಿಸೆಂಬರ್ 6, 1992 ಘಟನೆಯಲ್ಲಿ ತನ್ನ ಬೇಜವಾಬ್ದಾರಿತನದ ಬಗ್ಗೆ ಸ್ವಯಂಟೀಕೆಯ ಒಂದು ಮಾತೂ ಇಲ್ಲ. ಬಿಜೆಪಿಯ ಬೆಳವಣಿಗೆಗೆ ಇತರ ವಿರೋಧಿ ಪಕ್ಷಗಳು ಕಾರಣ ಎಂದು ದೂರಿದೆಯೇ ಹೊರತು ಇದರಲ್ಲಿ ಡಿಸೆಂಬರ್ 6 ರ ಮೊದಲು ಹಾಗೂ ನಂತರದ ತನ್ನ ಪಾತ್ರ ಏನು ಎಂಬ ಮಾತೇ ಇಲ್ಲ. "ಡಿಸೆಂಬರ್ 24, 1992ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಂಗೀಕರಿಸಿದ ಕಾರ್ಯಾಚರಣೆಯ ಕಾರ್ಯಕ್ರಮವನ್ನು" ಅಧಿವೇಶನ ಅನುಮೋದಿಸಿತಂತೆ. ಈ "ಕಾರ್ಯಾಚರಣೆಯ ಕಾರ್ಯಕ್ರಮ"ದಡಿಯಲ್ಲಿ ಇದುವರೆಗೆ ನಡೆದಿರುವುದು ಸೊನ್ನೆಯೇ. ಇದನ್ನೇ ಅನುಮೋದಿಸಿದೆಯೆಂದರೆ ಮುಂದಿನ ಕಾರ್ಯಾಚರಣೆಯಲ್ಲಿ ಸೊನ್ನೆಯೆಂದೇ ಅರ್ಥವೇ?

ಸೂರಜ್‌ಕುಂಡ್ ಅಧಿವೇಶನದ ಆರ್ಥಿಕ ನಿರ್ಣಯವಂತೂ ಸಂಸತ್ತಿನಲ್ಲಿ ಹಣಕಾಸು ಮಂತ್ರಿಗಳ ಹೇಳಿಕೆಯಂತೆ ಇತ್ತು. - ಸರಕಾರದ ಕ್ರಮಗಳಿಗೆ ಹೊಗಳಿಕೆಗಳ ಸುರಿಮಳೆ ಬಿಟ್ಟರೆ ಬೇರೇನಿಲ್ಲ. ದೇಶದ ಜನಗಳ ಮೇಲೆ ಏನು ಪರಿಣಾಮವಾಗಿದೆ ಎಂಬ ಬಗ್ಗೆ ಚಕಾರವಿಲ್ಲ. ಗಮನಾರ್ಹ ಸಂಗತಿಯೆಂದರೆ ಕೆಲವು ಹಳೆಯ ಕಾಂಗ್ರೆಸ್ಸಿಗರು ಹೊಸ ನೀತಿಗಳನ್ನು ಬಡ ಜನಗಳ ಹೊಟ್ಟೆ ಹೊಡೆದು ಜ್ಯಾರಿಗೆ ತಂದರೆ ಕೆಲವೇ ವರ್ಷಗಳಲ್ಲಿ ಕಾಂಗ್ರೆಸ್(ಐ) ಹೇಳ ಹೆಸರಿಲ್ಲವಾಗುತ್ತದೆ ಎಂದು ಎಚ್ಚರಿಸಿದರು. "ನಮಗೆ ಮಾರುಕಟ್ಟೆ ಪ್ರಿಯ ಆರ್ಥಿಕ ಬೇಡ, ಜನತೆಗೆ ಪ್ರಿಯವಾದ ಆರ್ಥಿಕ ನೀತಿ ಬೇಕು" ಎಂದು ಗುಜರಾತ್‌ನ ಹಿರಿಯ ಕಾಂಗ್ರೆಸ್ಸಿಗ ಸನತ್‌ಮೆಹ್ತಾ ಎಚ್ಚರಿಸಿದರೆ, ಮಧ್ಯಪ್ರದೇಶದ ಕಾಂಗ್ರೆ ಅಧ್ಯಕ್ಷ ದಿಗ್ವಿಜಯಸಿಂಗ್ "ಒಬ್ಬನಿಗೆ ಒಂದೇ ಹುದ್ದೆ" ಬಗ್ಗೆ ಸಾಮಾನ್ಯ ಕಾಂಗ್ರೆಸ್ಸಿಗರು ತಲೆಕೆಡಿಸಿಕೊಳ್ಳುತ್ತಿಲ್ಲ, ಮುಖಂಡತ್ವದಿಂದ ಸರಿಯಾದ ಮಾರ್ಗದರ್ಶನ ಬರುತ್ತಿಲ್ಲ ಎಂದು ಅವರು ನಿಸ್ಸಹಾಯಕರಾಗಿದ್ದಾರೆ. ಕಾಂಗ್ರೆಸ್(ಐ) ಬಡವರು, ಅಲ್ಪಸಂಖ್ಯಾತರು, ದುರ್ಬಲ ವರ್ಗಗಳ ನಡುವೆ ಮತ್ತೆ ವಿಶ್ವಾಸ ಕುದುರಿಸುವುದೇ ಮುಖ್ಯ ಎಂದರು.

ಬಹುಮಂದಿ ಕಾಂಗ್ರೆಸ್ಸಿಗರು ತಮ್ಮ ಮುಖಂಡರ ಬಗ್ಗೆ ಅಸಂತುಷ್ಟರಾಗಿದ್ದರೆ, ಪರ್ಯಾಯ ಮುಖಂಡತ್ವ ಇನ್ನೂ ಅವರಿಗೆ ಸಿಕ್ಕಿಲ್ಲ. ಸೂರಜ್‌ಕುಂಡ್ ಅಧಿವೇಶನ ಕೂಡಾ ಅವರಿಗೆ ಸರಿಯಾದ ದಿಕ್ಕು ತೋರಿಸಿಲ್ಲವಾದ್ದರಿಂದ ಅವರ ಚಡಪಡಿಕೆ ಮುಂದೆ ಮತ್ತಷ್ಟು ಹೆಚ್ಚುವುದು ಖಂಡಿತ. ಸೂರಜ್‌ಕುಂಡ್‌ನಲ್ಲಿ ನರಸಿಂಹರಾಯರ 'ವಿಜಯ' ಒಂದು ತಾತ್ಕಾಲಿಕ ಅವಕಾಶವಷ್ಟೇ.

KRNM/BGS-405 MAG(2) PRB DECR 319-78/79

ಜುಲೈ 28 : ಜವಳಿ ಕಾರ್ಮಿಕರಿಂದ "ಪಾರ್ಲಿಮೆಂಟ್ ಚಲೋ"

4.3.93ರಂದು ಕಲ್ಕತ್ತಾದಲ್ಲಿ ಸಭೆ ಸೇರಿದ ಅಖಿಲ ಭಾರತ ಜವಳಿ ಕಾರ್ಮಿಕರ ಸಮನ್ವಯ ಸಮಿತಿಯು ಬರುವ ಜುಲೈ ತಿಂಗಳ 28ರಂದು ಸಂಸತ್ತಿನ ಮಳೆಗಾಲ ಅಧಿವೇಶನ ನಡೆಯುತ್ತಿರುವಾಗ ಅಖಿಲ ಭಾರತ ಜವಳಿ ಕಾರ್ಮಿಕರ "ಪಾರ್ಲಿಮೆಂಟ್ ಚಲೋ" ಚಳುವಳಿಯನ್ನು ಏರ್ಪಡಿಸಲು ತೀರ್ಮಾನಿಸಿದೆ. ಸಮಿತಿಯ ಸಂಚಾಲಕರಾದ ಕಾಮ್ರೇಡ್ ಪಿ.ಕೆ.ಗಂಗೂಲಿ ಅವರು ಹೋರಾಟದ ಕಾರ್ಯಕ್ರಮವನ್ನು ಮಂಡಿಸುತ್ತಾ ಐಎಂಎಫ್ ಮತ್ತು ಜಾಗತಿಕ ಬ್ಯಾಂಕಿನ "ಹಿಟ್ ಲಿಸ್ಟ್"ನಲ್ಲಿರುವ ಎನ್‌ಟಿಸಿ ಮಿಲ್ಲುಗಳ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಖಾಸಗಿ ಮಿಲ್ಲುಗಳನ್ನು ತಮ್ಮ ಮನಸ್ಸಿಚ್ಛೆಯಂತೆ ಮುಚ್ಚಿಬಿಡಲು ಉದಾರೀಕರಣದ ನೀತಿ ಮಾಲಿಕರಿಗೆ ಅವಕಾಶ ಕಲ್ಪಿಸುತ್ತಿದೆ. ಕೈ ಮಗ್ಗ ಕ್ಷೇತ್ರಕ್ಕೆ ನೂಲಿನ ಪೂರೈಕೆಯನ್ನು ಕಡಿಮೆ ಮಾಡಿ ನೌಕರರನ್ನು ನಿರುದ್ಯೋಗಕ್ಕೆ ತಳ್ಳಲಾಗುತ್ತಿದೆ. ವಿದ್ಯುತ್ ಚಾಲಿತ ಮಗ್ಗಗಳ ಒಡೆಯರು ಕಾನೂನಿನ ಕಣ್ಣುಗಳಿಗೆ ಮಣ್ಣೆರಚಿ ಬಡ ನೇಕಾರರ ಅಸಹಾಯಕತೆಯ ದುರ್ಲಾಭ ಪಡೆಯುತ್ತಿದ್ದಾರೆ. ಕೇಂದ್ರ ಸರಕಾರ ಗಿರಣಿ ವಲಯ, ಕೈ ಮಗ್ಗ ವಲಯ ಮತ್ತು ವಿದ್ಯುತ್ ಚಾಲಿತ ಮಗ್ಗಗಳ ವಲಯಗಳನ್ನು ಸಮನ್ವಯಗೊಳಿಸುವ ಒಂದು ಆರೋಗ್ಯಕರ ರೀತಿಯನ್ನು ಅನುಸರಿಸುವ ಬದಲು ಒಂದು ವಲಯವನ್ನು ಇನ್ನೊಂದು ವಲಯದ ವಿರುದ್ಧ ಎತ್ತಿ ಕಟ್ಟುವ ನೀತಿಯನ್ನು ಅನುಸರಿಸುತ್ತಿದೆ. ಆದ್ದರಿಂದ ಜವಳಿ ಕಾರ್ಮಿಕರೆಲ್ಲರೂ ಒಟ್ಟಾಗಿ ಕೇಂದ್ರ ಸರಕಾರದ ನೀತಿಯ ವಿರುದ್ಧ ಹೋರಾಡದೇ ಕಾಗಿದೆ ಎಂದು ಹೇಳಿದರು.

ಜುಲೈ 28ರ 'ಪಾರ್ಲಿಮೆಂಟ್ ಚಲೋ' ಚಳುವಳಿಯನ್ನು ಅನುಮೋದಿಸಿದ ಸಭೆಯು, ಇತರ ಕೇಂದ್ರ ಕಾರ್ಮಿಕ ಸಂಘಟನೆಗಳು ಈ ಚಳುವಳಿಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯ ಕುರಿತು ಪರಿಶೀಲಿಸಲು ಸಿಐಟಿಯು ಕೇಂದ್ರವನ್ನು ಕೇಳಿಕೊಳ್ಳಲು ತೀರ್ಮಾನಿಸಲಾಯಿತು. ಜುಲೈ 28ರ ಒಳಗಾಗಿ ಎಲ್ಲಾ ರಾಜ್ಯಗಳಲ್ಲಿ ಸ್ಥಳೀಯ ಮಟ್ಟದ, ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ ಸಮಾವೇಶಗಳನ್ನು ಜಂಟಿಯಾಗಿ ನಡೆಸಲು ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ಬರುವ ಮೇ 12 ರಂದು ಭಾರತ ಸರಕಾರದ ಜವಳಿ ಸಚಿವಾಲಯದ ಎದುರು ಎನ್‌ಟಿಸಿ ಕಾರ್ಮಿಕರ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಗಿದ್ದು ಈ ಧರಣಿ ಸತ್ಯಾಗ್ರಹದಲ್ಲಿ ದೆಹಲಿ ಮತ್ತು ದೆಹಲಿಗೆ ಹತ್ತಿರದ ರಾಜ್ಯಗಳಿಂದ ಹೆಚ್ಚಿನ ಕಾರ್ಮಿಕರನ್ನು ಕರೆತರಬೇಕೆಂದೂ ಇನ್ನುಳಿದ ಎಲ್ಲಾ ರಾಜ್ಯಗಳಿಂದಲೂ ಪ್ರತಿನಿಧಿಗಳು ಭಾಗವಹಿಸಬೇಕೆಂದು ತೀರ್ಮಾನಿಸಲಾಯಿತು.

ಬದಲೀ ಜವಳಿ ನೀತಿಯನ್ನು ರೂಪಿಸುವ ಅಂಗವಾಗಿ ಮೂರು ವಲಯಗಳ ಕುರಿತಾಗಿ 3 ದಿನಗಳ ವರ್ಕ್‌ಶಾಪ್ ನಡೆಸುವುದೆಂದು, ಈ ವರ್ಕ್‌ಶಾಪ್ ಬೊಂಬಾಯಿ ನಗರದಲ್ಲಿ ನಡೆಸಬಹುದೆಂದು, ಇವರಲ್ಲಿ ಒಂದೊಂದು ವಲಯದ ತಜ್ಞರನ್ನು ಪಾಲ್ಗೊಳ್ಳಿಸುವುದೆಂದು ತೀರ್ಮಾನಿಸಲಾಗಿದೆ. ಈ ವರ್ಕ್‌ಶಾಪನ್ನು ನವಂಬರ್- ಡಿಸೆಂಬರ್ ತಿಂಗಳಲ್ಲಿ ನಡೆಸುವುದೆಂದು ಇತರ ಕೇಂದ್ರ ಕಾರ್ಮಿಕ ಸಂಘಗಳನ್ನೂ ಆಮಂತ್ರಿಸುವುದೆಂದು ತೀರ್ಮಾನ ಮಾಡಲಾಯಿತು. ಜವಳಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರಿಗೆ ಬರುವ ಡಿಸೆಂಬರ್ ತಿಂಗಳ ಒಳಗಾಗಿ ತರಬೇತಿ ಶಾಲೆಗಳನ್ನು ನಡೆಸಲು ಸಮಿತಿಯು ತೀರ್ಮಾನಿಸಿದೆ.

ಅಸಂಘಟಿತ ಕಾರ್ಮಿಕರ ವಿವಿಧ ಹಂತದ ಚಳುವಳಿ ನಿರ್ಧಾರ

ಜುಲೈ 14ರಂದು ದೇಶವ್ಯಾಪಿ ಮುಷ್ಕರ

1992 ನವೆಂಬರ್ ತಿಂಗಳಲ್ಲಿ ಕಲ್ಕತ್ತಾದಲ್ಲಿ ನಡೆದ ಅಸಂಘಟಿತ ವಲಯದ ಕಾರ್ಮಿಕರ ಪ್ರಥಮ ಅಖಿಲ ಭಾರತ ಸಮಾವೇಶದಲ್ಲಿ ರೂಪಿಸಲಾಗಿದ್ದ 22 ಅಂಶಗಳ ಬೇಡಿಕೆಗಳಿಗಾಗಿ ಅಖಿಲ ಭಾರತ ಮುಷ್ಕರವೂ ಸೇರಿದಂತೆ ವಿವಿಧ ಹಂತದ ಚಳುವಳಿಯನ್ನು ಆರಂಭಿಸಲು ಅಸಂಘಟಿತ ವಲಯದ ಕಾರ್ಮಿಕರ ಅಖಿಲ ಭಾರತ ಸಮನ್ವಯ ಸಮಿತಿಯು ತೀರ್ಮಾನಿಸಿದೆ. ಸಮನ್ವಯ ಸಮಿತಿಯ ಸಭೆ ಇದೇ ಏಪ್ರಿಲ್ 5ರಂದು ಕಲ್ಕತ್ತಾದಲ್ಲಿ ನಡೆಯಿತು. ತಮಿಳುನಾಡಿನ ಕಾಮ್ರೇಡ್ ಚಂದ್ರಶೇಖರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ಅಂಗೀಕರಿಸಲಾದ ಚಳುವಳಿಯ ಕಾರ್ಯಕ್ರಮ ಈ ಕೆಳಗಿನಂತಿದೆ.

ಏಪ್ರಿಲ್ 20ರಿಂದ ಮೇ 31ರವರೆಗೆ ಪ್ರದೇಶವಾರು/ಜಿಲ್ಲಾವಾರು ಮತ್ತು ರಾಜ್ಯ ಮಟ್ಟದ ಸಮಾವೇಶಗಳು.

ಜೂನ್ 1ರಿಂದ 20ರವರೆಗೆ ವ್ಯಾಪಕ ಸಹಿಸಂಗ್ರಹ ಚಳುವಳಿ. ಬೇಡಿಕೆ ಸಪ್ತಾಹ / ಬ್ಯಾಡ್ಜ್ ಧರಿಸುವುದು.

ಜೂನ್ 21ರಿಂದ 30ರವರೆಗೆ ತಾಲ್ಲೂಕು/ ಜಿಲ್ಲಾ ಮಟ್ಟದಲ್ಲಿ ಮತ ಪ್ರದರ್ಶನ. ಜಿಲ್ಲಾ ಮಟ್ಟದಲ್ಲಿ 6 ಗಂಟೆಗಳ ಧರಣಿ/ಮನವಿ ಸಲ್ಲಿಸುವುದು.

ಜುಲೈ 1ರಿಂದ 7ರವರೆಗೆ ರಾಜ್ಯಮಟ್ಟದ ರ್‍ಯಾಲಿ. ರಾಜ್ಯಪಾಲ/ಮುಖ್ಯಮಂತ್ರಿ/ ಕಾರ್ಮಿಕ ಮಂತ್ರಿ ಇವರಲ್ಲಿಗೆ ನಿಯೋಗ ಹೋಗುವುದು.

ಜುಲೈ ಮೊದಲ ವಾರದಲ್ಲಿ ಲೋಕಸಭೆಗೆ ಮನವಿ ಸಲ್ಲಿಸುವುದು.

ಜುಲೈ 14ರಂದು ಅಖಿಲ ಭಾರತ ಮುಷ್ಕರ.

ಸಮನ್ವಯ ಸಮಿತಿಯ ಸಭೆಯಲ್ಲಿ ಚರ್ಚೆಗೋಸ್ಕರ ಸಮಿತಿಯ ಸಂಚಾಲಕ ಪಶ್ಚಿಮ ಬಂಗಾಳದ ಕಾಮ್ರೇಡ್ ಮೃಣಾಲ್‌ದಾಸ್ ಅವರು ಮಂಡಿಸಿದ ಲಿಖಿತ ವರದಿಯಲ್ಲಿ ನವೆಂಬರ್ ಸಮಾವೇಶದ ತೀರ್ಮಾನದ ಪ್ರಕಾರ ಮಾರ್ಚ್ ತಿಂಗಳಲ್ಲಿ ಅಸಂಘಟಿತ ಕಾರ್ಮಿಕರ ಅಖಿಲ ಭಾರತ ಮುಷ್ಕರವನ್ನು ಸಂಘಟಿಸಲು ಸಾಧ್ಯವಾಗದೆ ಹೋಗಿರುವುದನ್ನು ಪ್ರಸ್ತಾಪಿಸಿದ್ದರು. ಡಿಸೆಂಬರ್ 6ರ ನಂತರ ದೇಶಾದ್ಯಂತ ಭುಗಿಲೆದ್ದ ಕೋಮು ದಂಗೆಗಳ ಹಿನ್ನೆಲೆಯಲ್ಲಿ ಕೋಮು ದಳ್ಳುರಿಯನ್ನು ನಂದಿಸಿ ದೇಶದ ಏಕತೆಗಾಗಿ ಶ್ರಮಿಸಲು ನಾವು ನಮ್ಮ ಶಕ್ತಿಯನ್ನೆಲ್ಲಾ ಬಳಸಿಕೊಳ್ಳಬೇಕಾಗಿ ಬಂತು. ಆದರೆ ಕೇಂದ್ರ ಸರಕಾರದ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳಲ್ಲಿ ಅಡಗಿದ ಜನವಿರೋಧಿ ಅಂಶಗಳು ಈಗ ಹೆಚ್ಚೆಚ್ಚು ಪ್ರಕಟವಾಗತೊಡಗಿವೆ. 1993-94ನೇ ಸಾಲಿನ ಕೇಂದ್ರ ಮುಂಗಡ ಪತ್ರ ಅದರ ಐಎಂಎಫ್ ನಿರ್ದೇಶಿತ ನೀತಿಯ ಮುಂದುವರಿಕೆಯೇ ಆಗಿದ್ದು ಅಸಂಘಟಿತ ಕಾರ್ಮಿಕರೂ ಸೇರಿದಂತೆ ಜನಸಾಮಾನ್ಯರಿಗೆ ಯಾವುದೇ ಪರಿಹಾರವನ್ನು ನೀಡಿಲ್ಲ. ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ವಾಣಿಜ್ಯ ವಲಯದ ಬಿಕ್ಕಟ್ಟು ಮತ್ತಷ್ಟು ತೀವ್ರವಾಗಲಿದೆ. ಆದ್ದರಿಂದ ಅಸಂಘಟಿತ ವಲಯದ ಕಾರ್ಮಿಕರನ್ನು ಕೈಗಾರಿಕಾವಾರಾಗಿಯೂ, ಒಟ್ಟಾಗಿಯೂ ಹೋರಾಟಕ್ಕೆ ಇಳಿಸುವುದು ತುರ್ತಾಗಿ ಆಗಬೇಕಾಗಿದೆ ಎಂದು ಕಾಮ್ರೇಡ್ ಮೃಣಾಲ್ ದಾಸ್ ಹೇಳಿದರು.

ಅಸಂಘಟಿತ ಕಾರ್ಮಿಕರಿಗಾಗಿ ಪ್ರಾದೇಶಿಕ ಟ್ರೇಡ್ ಯೂನಿಯನ್ ಶಾಲೆಗಳನ್ನು ನಡೆಸುವ ಸಿಐಟಿಯು ಕಾರ್ಯದರ್ಶಿ ಪಿ.ಕೆ.ಗಂಗೂಲಿ ಅವರ ಸೂಚನೆಯನ್ನು ಸಭೆಯು ಅನುಮೋದಿಸಿತು. ಕರ್ನಾಟಕದ ಪ್ರತಿನಿಧಿಗಳಾಗಿ ಕಾಂ.ವಿ.ಜೆ.ಕೆ. ನಾಯರ್, ಕಾಂ. ನಿತ್ಯಾನಂದಸ್ವಾಮಿ, ಕಾಂ.ಇ.ಕೆ.ಎನ್. ರಾಜನ್ ಸಭೆಯಲ್ಲಿ ಭಾಗವಹಿಸಿದ್ದರು. ಸಮನ್ವಯ ಸಮಿತಿಗೆ ಕೆಲವು ರಾಜ್ಯಗಳಿಂದ ಇನ್ನು ಕೆಲವು ಸದಸ್ಯರನ್ನು ಸೇರ್ಪಡೆ ಮಾಡಲು ಸಭೆ ನಿರ್ಧರಿಸಿತು. ಕರ್ನಾಟಕದಿಂದ ಕಾಂ.ಕೆ.ಮೂಸಬ್ಬ ಮತ್ತು ಕಾಂ.ಕೆ. ಶಂಕರ್ ಅವರನ್ನು ಸಮಿತಿಗೆ ಸೇರ್ಪಡೆ ಮಾಡಲಾಯಿತು.

ಕಾಂ.ಬಾಲಾನಂದನ್ ಕರೆ

ಅಸಂಘಟಿತ ವಲಯದ ಕಾರ್ಮಿ... ಅಖಿಲ ಭಾರತ ಸಮನ್ವಯ ಸಮಿತಿ ... ನಡೆಯುತ್ತಿದ್ದಂತೆ ಸಿಐಟಿಯು ಅಧ್ಯಕ್ಷ... ಕಾಂ.ಇ.ಬಾಲಾನಂದನ್ ಆಗಮಿಸಿದ್ದು ... ಸ್ಯರಲ್ಲಿ ವಿಶೇಷ ಉತ್ಸಾಹವನ್ನು ಮ... ಸಿತು. ಸಭೆಯು ಅಂಗೀಕರಿಸಿದ ಚಳುವ... ಕಾರ್ಯಕ್ರಮದ ಬಗ್ಗೆ ಕಾಂ.ಬಾಲಾನಂ... ಸಂತಸ ವ್ಯಕ್ತಪಡಿಸಿದರು. ಹೋ... ಟದ ಸಾಂಪ್ರದಾಯಿಕ ಕಾರ್ಯಕ್ರಮಗಳ ... ತಮ್ಮ ಅನುಮಾನ ವ್ಯಕ್ತಪಡಿಸಿದ ಅ... ಅಸಂಘಟಿತ ಕಾರ್ಮಿಕರ ಚಳುವಳಿಯ... ಸಂಘಟಿಸುವ ಬಗ್ಗೆ ನಾವು ನಿಜವಾಗಿ ... ವಹಿಸುವುದಾದರೆ ಅಸಂಘಟಿತ ಕಾ... ಕರ ಕೆಲವು ನಿರ್ದಿಷ್ಟ ಕೇಂದ್ರಗಳನ್ನು ಗು... ತಿಸಬೇಕು. ನಮ್ಮ ಕಾರ್ಯಕರ್ತ... ಆ ಅಸಂಘಟಿತ ಕಾರ್ಮಿಕರ ಮಧ್ಯ... ಹೋಗಿ ವಾಸ ಮಾಡಬೇಕು. ಕೈಗಾರಿ... ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಸರಿಯ... ಬೇಡಿಕೆಗಳನ್ನು ರೂಪಿಸಬೇಕು. ಹೋ... ಟವನ್ನು ತೀವ್ರತೆಯ ಉನ್ನತಮಟ್ಟಕ್ಕೆ ... ಮಕೊಂಡು ಹೋಗಬೇಕು. ಹೋ... ಟದಿಂದ ಕೆಲವೊಮ್ಮೆ ಆರ್ಥಿಕ ಪರಿಹಾ... ಗಳು ಸಿಗುವಂತಾಗಬೇಕು. ಮ... ಕರ ದೌರ್ಜನ್ಯ ಮತ್ತು ಪೋಲೀಸರ ... ಗಳಿಗೆ ನಮ್ಮ ಕಾರ್ಯಕರ್ತರು ಹೆದರ... ರದು ಎಂದು ಹೇಳಿದರು. ಅಸಂ... ಕಾರ್ಮಿಕರು, ಹೋರಾಟಗಳ ಮೂ... ಆರ್ಥಿಕ ಪರಿಹಾರಗಳನ್ನು ಪಡೆಯು... ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅ... ಈ ಶೋಷಕ ವ್ಯವಸ್ಥೆಯ ನಿಜಸ್ವರೂಪ... ಅರಿತುಕೊಳ್ಳುವುದು ಆಗಿದೆ ಎಂದು ಹೇ... ಕಾಂ.ಬಾಲಾನಂದನ್ ಅಸಂಘಟಿತ ಕಾ... ಕರ ಹೋರಾಟಗಳ ಮೂಲಕ ಅವರು ... ಕೀಯ ಪ್ರಜ್ಞೆ ಹೆಚ್ಚಿಸುವುದರ ಕಡೆಗೆ ವಿಶೇ... ಗಮನ ನೀಡಬೇಕು ಎಂದು ಹೇಳಿದರು.

ದೇವದುರ್ಗದಲ್ಲಿ ರೈತರ ಸ್ವಾಭಿಮಾನ ಸಮಾವೇಶ

ಏಪ್ರಿಲ್ ಹತ್ತರಂದು ರಾಜ್ಯದ ಅತೀ ಹಿಂದುಳಿದ ತಾಲೂಕು ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಬಲದಂಡೆ ಕಾಲುವೆಗಾಗಿ ಅಂತಿಮ ಹೋರಾಟ ರೂಪಿಸಲು ಎಂಟು ಸಾವಿರ ಜನರ ಒಂದು ಬೃಹತ್ ಸಮಾವೇಶ ನಡೆಯಿತು.

ಎಲ್ಲಾ ರಾಜಕೀಯ ಹಿನ್ನೆಲೆಯಿರುವ ಮುಖಂಡರು ಹಾಗೂ ಜನತೆ ಪಾಲುಗೊಂಡಿರುವ ಅಪೂರ್ವವಾದ ಈ ಸಮಾವೇಶದಲ್ಲಿ ಸರ್ವಾನುಮತದಿಂದ ಕೃಷ್ಣಾ ಜಲಾನಯನದಲ್ಲಿರುವ ಕರ್ನಾಟಕದ ನೀರನ್ನು ಬಳಸಿಕೊಳ್ಳಲು ಒತ್ತಾಯಿಸಿ ನಿರ್ಣಯ ಸ್ವೀಕರಿಸಲಾಯಿತು.

ಈ ಕೆಳಗಿನ ಹೋರಾಟದ ಕಾರ್ಯಕ್ರಮಗಳಿಗೆ ಕರೆ ಕೊಡಲಾಗಿದೆ.

- ಮೇ ಮೊದಲ ವಾರದಲ್ಲಿ ಮುಖ್ಯಮಂತ್ರಿಗಳಿಗೆ, ಸಮಾವೇಶ ನಿರ್ಣಯಗಳ ಮನವಿ ಸಲ್ಲಿಸುವುದು.
- ಇದಕ್ಕೆ ಪೂರ್ವ ತಯಾರಿಯಾಗಿ ರಾಯಚೂರ ಜಿಲ್ಲೆಯ ಶಾಸಕ, ಸಚಿವರನ್ನು ಲೋಕಸಭೆ ರಾಜ್ಯ ಸಭೆ ಸದಸ್ಯರ ಸಭೆಯನ್ನು ಕರೆದು ಚರ್ಚಿಸುವುದು.
- ಮೇ 15ರಿಂದ 48 ಗಂಟೆಗಳ ರಸ್ತೆ ತಡೆ ಚಳುವಳಿಯನ್ನು ಸತತವಾಗಿ ನಡೆಸುವುದು.
- ಮೇ 31ರಂದು ರಾಯಚೂರ ಜಿಲ್ಲಾ ಬಂದ್.
- ಜೂನ್ 15ರಿಂದ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳ ರಾಜೀನಾಮೆಗೆ ಆಗ್ರಹಿಸುವುದು.
- ಜೂನ್ 30ರಂದು ರಾಜ್ಯಮಟ್ಟದ ರಾಜಕೀಯ ಪಕ್ಷಗಳ ಬೆಂಬಲ ಕೋರಿ ಕರ್ನಾಟಕ ಬಂದ್‌ಗೆ ಮನವಿ ಮಾಡುವುದು.
- ಆಗಲೂ ಸರಕಾರ ರಾಜಕೀಯ ದೃಢ ತೀರ್ಮಾನವನ್ನು ಮಾಡದಿದ್ದಲ್ಲಿ ರಾಜಕೀಯ ಪಕ್ಷಗಳ ಅಭಿಪ್ರಾಯ ಪಡೆದು ಅಸಹಕಾರ ಚಳುವಳಿಯನ್ನು ನಡೆಸುವುದು.

ಜನತೆಯ ಬೃಹತ್ ಚಳುವಳಿಯನ್ನು ನಡೆಸಲು 150 ಜನರ ಒಂದು ವಿಶಾಲವಾದ ಕೃಷ್ಣಾ ಮೇಲ್ದಂಡೆ ಯೋಜನೆ, ನಾರಾಯಣಪುರ ಬಲದಂಡೆ ಕಾಲುವೆ ಹೋರಾಟ ಸಮಿತಿಯನ್ನು ರಚಿಸಲಾಗಿದೆ. 32 ಜನರ ಸಂಚಾಲಕ ಸಮಿತಿಯನ್ನು ರಚಿಸಲಾಗಿದೆ.

ರಾಜ್ಯದಲ್ಲಿ ಅತೀ ಹಿಂದುಳಿದ, ಬರಪೀಡಿತ ತಾಲೂಕುಗಳಲ್ಲಿ ಒಂದಾದ ದೇವದುರ್ಗದಲ್ಲಿ 1982ರಿಂದ ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕಿನಲ್ಲಿ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದು, ಹಲವುಹತ್ತು ಹೋರಾಟಗಳನ್ನು ನಡೆಸುತ್ತಾ ಬಂದಿದ್ದರೂ, ಜಿಡ್ಡುಗಟ್ಟಿದ ಪಾಳೇಗಾರೀ ಒಡಿತವನ್ನು ಸಡಿಲಗೊಳಿಸಲು ಸಾಧ್ಯವಾಗಿರಲಿಲ್ಲ. ಆದರೆ ನಾರಾಯಣಪುರ ಬಲದಂಡೆಯ ಪ್ರಶ್ನೆಯನ್ನು ಪಾಳೇಗಾರೀ ವಿರೋಧಿ ಪ್ರಜಾಸತ್ತಾತ್ಮಕ ಬೇಡಿಕೆಯನ್ನಾಗಿಸುವಲ್ಲಿ ಪಾಳೇಗಾರಿ ಒಡಿತವನ್ನು ಸಡಿಲಗೊಳಿಸುವ ದಿಕ್ಕಿನಲ್ಲಿ ಒಂದು ದಿಟ್ಟ ಹೆಜ್ಜೆ ಹಾಕುವಂತಾಗಲು ಪ್ರಾಂತ ರೈತ ಸಂಘದ ಈ ಪ್ರಯತ್ನ ಅಪೂರ್ವವಾದ ಒಂದು ಹೊಸ ಅನುಭವವಾಗಿದೆ.

ಈ ಹಿಂದಿನ ಮೂರು ವರ್ಷಗಳಲ್ಲಿ ದೇವದುರ್ಗ ತಾಲೂಕಿನ ರಾಜಕೀಯ ಧುರೀಣರ ಸಭೆಯನ್ನು ಕರೆದು ಬಲದಂಡೆ ಕಾಲುವೆಗಾಗಿ ಒತ್ತಾಯಿಸುವ ಕುರಿತು ಚರ್ಚಿಸಲಾಯಿತು, ನೀರಾವರಿ ಬಂದರೆ ಭೂಮಿಯನ್ನು ಕಳೆದುಕೊಳ್ಳಬೇಕಾಗುತ್ತದೆ, ಹಾಗೆಯೇ ಕೂಲಿಕಾರರ ಬೇಡಿಕೆ ಹೆಚ್ಚಾಗುತ್ತದೆ, ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ, ಹೆಚ್ಚಿನ ಬಂಡವಾಳ ತೊಡಗಿಸಬೇಕಾಗುತ್ತದೆ, ಈಗ ತಾವು ಆರಾಮವಾಗಿದ್ದವೆಂದು ನೇರವಾಗಿ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದರು.

ಈ ಅನುಭವದ ಹಿನ್ನೆಲೆಯಲ್ಲಿ ರಾಜಕೀಯ ಮುಖಂಡರನ್ನು ಮೀರಿ ನೇರವಾಗಿ ಜನತೆಯತ್ತ ಹೋಗುವ ಕಾರ್ಯಕ್ರಮ ರೂಪಿಸಲು ತೀರ್ಮಾನಿಸಿ, ಮಾಜಿ ಮುಖ್ಯಮಂತ್ರಿ, ರಾಮಕೃಷ್ಣ ಹೆಗಡೆ ಹಾಗೂ ಲೋಕಸಭಾ ಸದಸ್ಯ ಹೆಚ್.ಡಿ. ದೇವೇಗೌಡರು ಬರುವ ದಿನವನ್ನು ನಿಗದಿ ಮಾಡಿಕೊಂಡು, ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು. ರೈತರ ಮಧ್ಯೆ ಪ್ರಚಾರ, ಗೋಡೆ ಬರಹ, ಪೋಸ್ಟರ್‌ಗಳ ಮುಖಾಂತರ ಸಮಾವೇಶಕ್ಕೆ ಕರೆ ನೀಡಲಾಯಿತು. ರೈತರು, ಕೃಷಿಕೂಲಿಕಾರರು, ವಿದ್ಯಾರ್ಥಿ ಯುವಜನರು, ಬಲದಂಡೆ ಕಾಲುವೆಯ ಪ್ರಶ್ನೆಗೆ ಸ್ಪಂದಿಸಿ ಜನರಲ್ಲಿ ಚರ್ಚೆ ಶುರುವಾಗುವ ಮುಖಾಂತರ ರಾಜಕೀಯ ಮುಖಂಡರಲ್ಲಿ ಗೊಂದಲಕ್ಕೆ ಕಾರಣವಾಯಿತು.

ಮಾರ್ಚ್ ಏಳರಂದು ತಾಲೂಕಿನ ಎಲ್ಲಾ ರಾಜಕೀಯ ಮುಖಂಡರನ್ನು ಪಕ್ಷ ಭೇದ ಬಿಟ್ಟು ಬಲದಂಡೆ ಕಾಲುವೆಗಾಗಿ ಒತ್ತಾಯಿಸಲು ಮುಂದೆ ಬರಬೇಕೆಂದು ಕರೆ ಕೊಡಲಾಗಿತ್ತು. ಹಿರಿಯರು, ಯುವಕರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲರೂ ಒಕ್ಕೊರಲಿನಿಂದ ಸಮಾವೇಶವನ್ನು ಯಶಸ್ವಿಗೊಳಿಸಲು ಶ್ರಮಿಸುವುದಾಗಿ ವಿಶ್ವಾಸ ನೀಡಿದರು. ಕಾಂ.ಚಂದ್ರಶೇಖರ್ ಬಾಳೆಯವರನ್ನು ಸಮಾವೇಶದವರೆಗೆ ಸಂಚಾಲಕರನ್ನಾಗಿ ಮೂರು ತಾಲೂಕಾವನ್ನು ಕ್ರೋಢೀಕರಿಸಲು ಸಮ್ಮತಿಸಿದರು.

9-3-93ರಂದು ವಿದ್ಯಾರ್ಥಿ ಯುವಕರ ಸಭೆಯನ್ನು 27-3-93ರಂದು ವಾಣಿಜ್ಯೋದ್ಯಮಿ, ಕೈಗಾರಿಕೋದ್ಯಮಿಗಳ ಸಭೆಯನ್ನು ಹಾಗೆಯೇ ಲಿಂಗಸುಗೂರು, ರಾಯಚೂರು ತಾಲೂಕಿನ ರಾಜಕೀಯ ಮುಖಂಡರ ಸಭೆಯನ್ನು ಕರೆದು ಸಮಾವೇಶಕ್ಕೆ ಬೆಂಬಲ ಕೇಳಲಾಯಿತು.

ಗ್ರಾಮಾಂತರ ಪ್ರದೇಶದಲ್ಲಿ 50,000 ಕರಪತ್ರಗಳನ್ನು ಜೀಪ್ ಮುಖಾಂತರ ಪ್ರಚಾರ ನಡೆಸಲಾಯಿತು. ಏಪ್ರಿಲ್ ಒಂದರಂದು ನೂರು ಜನ ಸದಸ್ಯರ ಒಂದು ಸ್ವಾಗತ ಸಮಿತಿಯನ್ನು ರಚಿಸಿ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಕೆ.ಸುರೇಶ್ ರೆಡ್ಡಿಯವರನ್ನು ಅಧ್ಯಕ್ಷರನ್ನಾಗಿ, ಚಂದ್ರಶೇಖರ ಬಾಳೆಯವರನ್ನು ಕಾರ್ಯದರ್ಶಿಯನ್ನಾಗಿ, ಕೆ.ಮುರಗೆಪ್ಪಾ ಸಾಹುಕಾರ ಅವರನ್ನು ಖಜಾಂಚಿಯನ್ನಾಗಿ ಆಯ್ಕೆ ಮಾಡಲಾಯಿತು. ಇದರಿಂದ ಪ್ರಚಾರ ಕಾರ್ಯ ಇನ್ನಷ್ಟು ಭರದಿಂದ ಸಾಗಿತು.

ದಿನಾಲು ಹತ್ತಾರು ಬಹಿರಂಗ ಸಭೆ ಹೋಬಳಿಗಳ ಮುಖಂಡರ ಸಭೆಗಳನ್ನು ನಡೆಸಲಾಯಿತು. ಜನರನ್ನು ಕರೆತರಲು ಹಾಗೂ ನಿಧಿ ಸಂಗ್ರಹಣೆಗೆ ಕರೆ ಕೊಡಲಾಯಿತು.

ಕಾಂಗ್ರೆಸ್ ಮುಖಂಡರು ಈ ಆಂದೋಲನ ಕಂಡು ಬೆಂಗಳೂರಿಗೆ ದೌಡಾಯಿಸಿ ಐದು ಕೋಟಿರೂ ಮಂಜೂರಾಗಿದೆಯೆಂದು ಪತ್ರಿಕಾ ಹೇಳಿಕೆ ನೀಡಿ ಕೀಳು ರಾಜಕೀಯ ಮಾಡಿದರೂ ಜನರ ಹುಮ್ಮಸ್ಸನ್ನು ತಡೆಯಲು ಅವರಿಗಾಗಲಿಲ್ಲ.

ರಾಷ್ಟ್ರದ ಉನ್ನತ ನಾಯಕರು ಬಂದಾಗಲೂ ಆಸಕ್ತಿಯಿಂದ ಸೇರದ ಜನ 41 ಡಿಗ್ರಿ ಉರಿಬಿಸಿಲನ್ನು ಲೆಕ್ಕಿಸದೆ ಟ್ರಾಕ್ಟರ್ ಹಾಗೂ ಟ್ರಕ್‌ಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಬೇಕೆ ಬೇಕು ಕೃಷ್ಣಾ ನೀರು ಎಂದು ಸಾರುತ್ತಾ ನಗರದ ಎಪಿಎಂಸಿ ಆವರಣಕ್ಕೆ ಎಂಟು ಸಾವಿರಕ್ಕೂ ಹೆಚ್ಚಿನ ರೈತರು, ಕೃಷಿ ಕೂಲಿಕಾರರು, ವಿದ್ಯಾರ್ಥಿ-ಯುವಜನರು ಬಂದು ಜಣನೆರೆದರು. ಎಲ್ಲಾ ರಾಜಕೀಯ ಮುಖಂಡರು ಆಸಕ್ತಿಯಿಂದ ಪಾಲುಗೊಂಡರು.

ಕೆ.ಸುರೇಶ್ ರೆಡ್ಡಿ ಮಾಜಿ ಜಿಲ್ಲಾ ಪರಿಷತ್ ಅಧ್ಯಕ್ಷರು ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಚಂದ್ರಶೇಖರ ಬಾಳೆ ಸ್ವಾಗತ ಕೋರಿ, ಸ್ವಾಭಿಮಾನ ಸಮಾವೇಶವೆಂದು ಯಾಕೆ ಕರೆ ಕೊಡಲಾಯಿತು. ಜನತೆಯ ಸ್ಪಂದನೆ ಮುಂದಿನ ಹೋರಾಟದ ಗುರಿಯ ಕುರಿತು ವಿವರವಾದ ಪ್ರಸ್ತಾಪನೆಯನ್ನು ಮಾಡಿದರು.

ಮಲ್ಲಯ್ಯ ಜಾಲಹಳ್ಳಿಯವರು ಬೇ... ಕೆಯ ಗೊತ್ತುವಳಿಯನ್ನು ಮಂಡಿಸಿದರು. ಇ... ವಿರೂಪಾಕ್ಷಗೌಡರು ಅನುಮೋದಿಸಿದರು. ... ಹೋರಾಟದ ಗೊತ್ತುವಳಿಯನ್ನು ಮಂ... ದರು. ಜಿ.ವಿರುಪನಗೌಡರು ಅನುಮೋ... ದರು. ಹಣಕಾಸಿನ ಗೊತ್ತುವಳಿಯನ್ನು ಮು... ಗೆಪ್ಪ ಸಾಹುಕಾರ ಮಂಡಿಸಿದರು. ಹೋರಾ... ಸಮಿತಿಯನ್ನು ಕೆ.ಸುರೇಶ್ ರೆಡ್ಡಿಯ... ಘೋಷಿಸಿದರು.

ಪ್ರಮುಖ ಭಾಷಣಕಾರರಾಗಿ ಶ್ರೀ ಹೆಚ್... ದೇವೇಗೌಡ ಲೋಕಸಭಾ ಸದಸ್ಯರು ಹಾಗ... ಶ್ರೀ ಬಿ.ಆರ್.ಯಾವಗಲ್, ನರಗುಂದ ಹೋರ... ಮುಖಂಡರು, ಮಾಜಿ ಸಚಿವರು ಮಾತ... ಡಿದರು. ಜೊತೆಗೆ ರಾಯಚೂರ ಶಾ... ರಾದ ಎಂ.ಎಸ್.ಪಾಟೀಲ ರಾಜ್ಯಸಭಾ ಸ... ರಾದ ಸಮ್ಮದ ಸಿದ್ಧಿಖಿ ಹಾಗೂ ಎಸ್.ವೈ.... ರುಶಾಂತ್ ಸಮಾವೇಶವನ್ನುದ್ದೇಶಿಸಿ ಮಾತ... ಡಿದರು. ಕೊನೆಯಲ್ಲಿ ಜಿ.ಬಸವರಾಜ ಅ... ವಂದನಾರ್ಪಣೆಯೊಂದಿಗೆ ಸಮಾವೇಶ ಮು... ಯಗೊಳಿಸಲಾಯಿತು.

ದುಡಿಯುವ ಮಹಿಳೆಯರ ವಿಸ್ತೃತ ಸಭೆ ಮಂಗಳೂರಿನಲ್ಲಿ

ಕರ್ನಾಟಕ ರಾಜ್ಯ ದುಡಿಯುವ ಮಹಿ... ಯರ ಸಮನ್ವಯ ಸಮಿತಿಯ ವಿಸ್ತೃತ ಸಭೆ... ತಾ. 27-4-93ರಂದು ಬೆಳಿಗ್ಗೆ 10-... ಗಂಟೆಗೆ ಮಂಗಳೂರು ಬೋಳಾರದಲ್ಲಿರು... ಎಸ್. ಕೆ.ಟೈಲ್ಸ್ ವರ್ಕರ್ಸ್ ಯೂನಿಯನ್ ಕ... ರಿಯಲ್ಲಿ ಕರೆಯಲಾಗಿದೆ.

ಈ ಸಭೆಯಲ್ಲಿ ಅಖಿಲ ಭಾರತ ದು... ಯುವ ಮಹಿಳೆಯರ ಸಮನ್ವಯ ಸಮಿತಿ... ಸಂಚಾಲಕರಾದ ಕಾಂ.ವಿಮಲ ರಣದಿವೆ... ವರು ಭಾಗವಹಿಸುತ್ತಾರೆ ಎಂದು ಸಮಿತಿ... ಸಂಚಾಲಕರಾದ ಕಾಂ.ಎಂ.ಎಂ.ರಾಜಮ್ಮ ತಿ... ದ್ದಾರೆ.

ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು - 560 027, ಫೋನ್ : 236462 ಸಂಪಾದಕರು : ಪಿ.ರಾಮಚಂದ್ರರಾ...